ಮಂಗಳವಾರ, ಆಗಸ್ಟ್ 15, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ನೃತ್ಯ
ತೀಜ್ ಹಬ್ಬದ ಅಂಗವಾಗಿ ಅಮೃತಸರದಲ್ಲಿ ಸೋಮವಾರ ನಡೆದ ನೃತ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿನಿ


ಅಲುಗಾಡುತ್ತಿದೆ ಪ್ರಧಾನಿ ನರೇಂದ್ರ ಮೋದಿ ಕುರ್ಚಿ: ಕೆಪಿಸಿಸಿ ಸರ್ವ ಸದಸ್ಯರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

‘ರಾಜ್ಯ ಫಲಿತಾಂಶದಿಂದ ದೇಶದಲ್ಲಿ ಪಲ್ಲಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಯ ಫಲಿತಾಂಶವು ದೇಶದ ರಾಜಕೀಯದಲ್ಲಿ ಪಲ್ಲಟ ಸೃಷ್ಟಿಸಿದೆ. ಈಗ ಪ್ರಧಾನಿ ರಾಜಕಾರಣದಲ್ಲಿ ಚಲನೆ ಆರಂಭವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೋಮವಾರ ನಡೆದ ಕೆಪಿಸಿಸಿ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ‘ಕರ್ನಾಟಕದ ಚುನಾವಣಾ ಫಲಿತಾಂಶವು ವಿರೋಧ ಪಕ್ಷಗಳಲ್ಲಿ ವಿಶ್ವಾಸ ಮೂಡಿಸಿದೆ. ಹಲವು ರಾಜ್ಯಗಳಲ್ಲಿ ವಿವಿಧ ಪಕ್ಷಗಳ ಕಾರ್ಯಕರ್ತರು ಬಿಜೆಪಿಯನ್ನು ಮಣಿಸಲು ಸಜ್ಜಾಗುತ್ತಿದ್ದಾರೆ. ಈ ಕೀರ್ತಿ ರಾಜ್ಯದ ಜನರು ಮತ್ತು ಕಾಂಗ್ರೆಸ್ ಕಾರ್ಯಕರ್ತರಿಗೆ ಸಲ್ಲಬೇಕು’ ಎಂದರು.



ಸೋಮವಾರ ನಡೆದ ಕೆಪಿಸಿಸಿ ಸರ್ವ ಸದಸ್ಯರ ಸಭೆಯಲ್ಲಿ ಸಚಿವರಾದ ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ದಿನೇಶ್ ಗುಂಡೂರಾವ್, ಮುಖಂಡರಾದ ವೀರಪ್ಪ ಮೊಯಿಲಿ, ಕೆ. ರೆಹಮಾನ್ ಖಾನ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಕೆ.ಎಚ್. ಮುನಿಯಪ್ಪ, ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ಸಚಿವ ಕೆ.ಜೆ. ಜಾರ್ಜ್, ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಪ್ರಧಾನಿ ನರೇಂದ್ರ ಮೋದಿಯವರ ಪತನವೂ ರಾಜ್ಯದ ಚುನಾವಣಾ ಸೋಲಿನೊಂದಿಗೆ ಆರಂಭವಾಗಿದೆ. ಮೋದಿಯವರ ವರ್ಚಸ್ಸು ಕುಸಿಯುತ್ತಿರುವುದು ಸ್ಪಷ್ಟವಾಗಿದೆ. ಲೋಕಸಭಾ ಚುನಾವಣೆಯಲ್ಲಿ ಸೋಲುವ ಭಯ ಬಿಜೆಪಿಗೆ ಕಾಡುತ್ತಿದೆ. ಮೋದಿಯವರ ಕುರ್ಚಿಯೂ ಅಲುಗಾಡುತ್ತಿದೆ. ದೇಶದಲ್ಲಿ ರಾಜಕೀಯ ಕಂಪನ ಆರಂಭವಾಗಿದೆ ಎಂದು ಹೇಳಿದರು.

ಜಾತಿ ಆಧಾರಿತ ಶೋಷಣೆಯ ನ್ಯಾಯ ಪದ್ಧತಿಯನ್ನು ಬೆಂಬಲಿಸುವ ಬಿಜೆಪಿ, ಅಂಬೇಡ್ಕರ್ ನೀಡಿರುವ ಸಮಾನತೆ ಆಧಾರಿತ ಸಂವಿಧಾನದ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದೆ ಎಂದು ಮುಖ್ಯಮಂತ್ರಿ ಹೇಳಿದರು.

20 ಸ್ಥಾನ ಖಚಿತ: ಹಿಂದಿನ ಚುನಾವಣೆಗೆ ಹೋಲಿಸಿದರೆ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮತ ಗಳಿಕೆಯಲ್ಲಿ ಭಾರಿ ಹೆಚ್ಚಳವಾಗಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕನಿಷ್ಠ 20 ಸ್ಥಾನಗಳನ್ನು ಕಾಂಗ್ರೆಸ್ ಪಕ್ಷವು ಗೆಲ್ಲಲಿದೆ ಎಂದರು.

ರಾಜ್ಯದಲ್ಲಿ ಬಿಜೆಪಿ ಸೋಲಿನ ಭಯದಲ್ಲಿದೆ. ಅದಕ್ಕಾಗಿ ಜೆಡಿಎಸ್ ಜತೆ ಮೈತ್ರಿಗೆ ಪ್ರಯತ್ನಿಸುತ್ತಿದೆ. ಇದು ಬಿಜೆಪಿಗೆ ಭಯ ಎದುರಾಗಿರುವ ಸೂಚನೆ. ಜೆಡಿಎಸ್ 2019ರಲ್ಲಿ ಒಂದು ಸ್ಥಾನ ಗಳಿಸಿತ್ತು. ಮುಂದಿನ ಚುನಾವಣೆಯಲ್ಲಿ ಅದೂ ಇರುವುದಿಲ್ಲ ಎಂದು ಹೇಳಿದರು.

ಗುದ್ದೋಡುವ ಗಿರಾಕಿ: ಸಿ.ಎಂ

‘ಎಚ್.ಡಿ. ಕುಮಾರಸ್ವಾಮಿ ಅವರು ಜೆಡಿಎಸ್ ಪಕ್ಷವನ್ನು ಮರೆತಿದ್ದಾರೆ. ಬಿಜೆಪಿ ವಕ್ತಾರರಂತೆ ವರ್ತಿಸುತ್ತಿದ್ದಾರೆ. ಖಾಲಿ ಪೆನ್ ಡ್ರೈವ್ ಜೇಬಿನಿಂದ ತೆಗೆಯಲೇ ಇಲ್ಲ. ಒಟ್ಟಿಗೆ ಇಟ್ಟುಕೊಂಡು ಹೋಗುತ್ತಾರೆ. ಇದೇ ಆರೋಪ, ಅವರೊಂದಿಗೆ ಹಿಟ್ ಅಂಡ್ ರನ್ ಗಿರಾಕಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಸುದ್ದಿ 2 ನಿಮಿಷ

ಜಿಲ್ಲಾಡಳಿತದ ವಿರುದ್ಧ ಸಂಸದ, ಶಾಸಕರ ಧರಣಿ

ಮಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಶಾಸಕರ ಹಕ್ಕುಗಳಿಗೆ ಚ್ಯುತಿ ಆಗುತ್ತಿದೆ ಎಂದು ಆರೋಪಿಸಿ ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿಯ ಆರು ಮಂದಿ ವಿಧಾನಸಭಾ ಸದಸ್ಯರು, ಇಬ್ಬರು ವಿಧಾನ ಪರಿಷತ್ ಸದಸ್ಯರು, ಸಂಸದ ಹಾಗೂ ಮೇಯರ್ ಅವರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯ ಮೆಟ್ಟಿಲಿನ ಬಳಿ ಸೋಮವಾರ ಧರಣಿ ನಡೆಸಿದರು.

ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಎಂ.ಪಿ. ಅವರು ಸ್ಥಳಕ್ಕೆ ಬಂದು ಸಮಜಾಯಿಷಿ ನೀಡಿದ ಬಳಿಕ ಧರಣಿ ಹಿಂಪಡೆದರು.

ಸಂಸದ ನಳಿನ್ ಕುಮಾರ್ ಕಟೀಲ್, ಶಾಸಕರಾದ ಉಮಾನಾಥ ಕೋಟ್ಯಾನ್, ರಾಜೇಶ್ ನಾಯ್ಕ್ ಉಳಿಪಾಡಿ, ಡಿ.ವೇದವ್ಯಾಸ ಕಾಮತ್, ಡಾ.ವೈ. ಭರತ್ ಶೆಟ್ಟಿ, ಹರೀಶ್ ಪೂಂಜ, ಭಾಗೀರಥಿ ಮುರುಳ್ಯ, ವಿಧಾನ ಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ, ಪ್ರತಾಪಸಿಂಹ ನಾಯಕ್ ಹಾಗೂ ಮೇಯರ್ ಜಯಾನಂದ ಅಂಚನ್, ಉಪ ಮೇಯರ್ ಪೂರ್ಣಿಮಾ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸುದರ್ಶನ ಮೂಡುಬಿದಿರೆ ಹಾಗೂ ಪಾಲಿಕೆ ಸದಸ್ಯರು ಧರಣಿಯಲ್ಲಿ ಭಾಗವಹಿಸಿದರು

₹ 1.38 ಕೋಟಿ ತೆರಿಗೆಗೆ ನೋಟಿಸ್



ಗೋಕರ್ಣ (ಉತ್ತರ ಕನ್ನಡ ಜಿಲ್ಲೆ): ಕುಮಟಾ ತಾಲ್ಲೂಕಿನ ಗೋಕರ್ಣ ಮಹಾಬಲೇಶ್ವರ ದೇವಸ್ಥಾನದ 2015-16ನೇ ಸಾಲಿನ ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ₹ 1.38 ಕೋಟಿ ತೆರಿಗೆ ಕಟ್ಟುವಂತೆ ಆದಾಯ ತೆರಿಗೆ ಇಲಾಖೆ ದೇವಸ್ಥಾನದ ಆಡಳಿತ ಮಂಡಳಿಗೆ ನೋಟಿಸ್ ಜಾರಿ ಮಾಡಿದೆ. ಈ ಮೊತ್ತದ ಪೈಕಿ ಶೇ 20ರಷ್ಟು ಭರಿಸಿ, ಉಳಿದ ಮೊತ್ತ ಪಾವತಿ ಸಂಬಂಧ ತಡೆಯಾಜ್ಞೆ ಪಡೆಯಲು ಆಡಳಿತ ಮಂಡಳಿ ಮುಂದಾಗಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಅವರ ನೇತೃತ್ವದಲ್ಲಿ ಸೋಮವಾರ ಆನ್‌ಲೈನ್ ಮೂಲಕ ಸಭೆ ನಡೆಸಿದ ದೇವಸ್ಥಾನದ ಮೇಲ್ವಿಚಾರಣಾ ಸಮಿತಿಯ ಸದಸ್ಯರು, ‘2008ರಿಂದ ಈವರೆಗಿನ ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಲೆಕ್ಕ ಪರಿಶೋಧಕರನ್ನು ನೇಮಿಸಲು ನಿರ್ಧರಿಸಲಾಗಿದ್ದು, ಅವರು ನೀಡಿದ ವರದಿಯಂತೆ ಮುಂದಿನ ಕ್ರಮ ಕೈಗೊಳ್ಳಬೇಕು’ ಎಂಬ ನಿರ್ಣಯ ಕೈಗೊಂಡರು.

‘ಆದಾಯ ತೆರಿಗೆ ಇಲಾಖೆಯ ನೋಟಿಸ್‌ಗೆ ಸಂಬಂಧಿಸಿದಂತೆ ನೀಡಿದ ನೋಟಿಸಿನ ಬಗ್ಗೆ ಕ್ರಮ ಕೈಗೊಳ್ಳಲು ಪರಿಣಿತ ಲೆಕ್ಕ ಪರಿಶೋಧಕರನ್ನು ನೇಮಿಸಲಾಗುವುದು. ಅವರು ನೀಡುವ ವರದಿಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ದೇವಸ್ಥಾನದ ಮೇಲ್ವಿಚಾರಣಾ ಸಮಿತಿಯ ಕಾರ್ಯದರ್ಶಿಯೂ ಆಗಿರುವ ಕುಮಟಾ ಉಪವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಕೊಲೆ ಮಾಡುವ ನೀಚ ವ್ಯಕ್ತಿತ್ವ ನನ್ನದಲ್ಲ: ಖೂಬಾ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ‘ಕೊಲೆ, ಭ್ರಷ್ಟಾಚಾರದಂತಹ ನೀಚ ಕೆಲಸ ಮಾಡುವಂತಹ ವ್ಯಕ್ತಿತ್ವ ನನ್ನದಲ್ಲ’ ಎಂದು ಕೇಂದ್ರದ ರಾಜ್ಯ ಖಾತೆ ಸಚಿವ ಭಗವಂತ ಖೂಬಾ ಅವರು ಶಾಸಕ ಪ್ರಭು ಚವಾಣ್ ಅವರಿಗೆ ತಿರುಗೇಟು ನೀಡಿದರು.

‘ರೈತ ಕುಟುಂಬದಲ್ಲಿ ಹುಟ್ಟಿದ ನಾನು ಸಾತ್ವಿಕ ವಿಚಾರ ಮೈಗೂಡಿಸಿಕೊಂಡು ಕಳಂಕ ರಹಿತ ಜೀವನ ನಡೆಸುತ್ತಿದ್ದೇನೆ. ಹೀಗಿರುವಾಗ ಪ್ರಭು ಚವಾಣ್ ನನ್ನ ಮೇಲೆ ಕೊಲೆಯಂತಹ ಗುರುತರ ಆರೋಪ ಮಾಡಿದ್ದು ಮಾನಸಿಕ ಆಘಾತದಿಂದ ಹೊರ ಬರದಂತಾಗಿದೆ’ ಎಂದು ಬೇಸರದಿಂದ ಹೇಳಿದರು.

‘ಕೊಲೆ ಮಾಡುವಂತಹ ವಿಚಾರ ನನ್ನಲ್ಲಿ ಈ ಜನ್ಮದಲ್ಲಿ ಅಲ್ಲ; ಮುಂದಿನ ಏಳೇಳು ಜನ್ಮದಲ್ಲೂ ಬರಲು ಸಾಧ್ಯವಿಲ್ಲ. ಪ್ರಭು ಚವಾಣ್ ನೂರು ವರ್ಷ ಬಾಳಲಿ ಎಂದು ಆ ದೇವರಲ್ಲಿ ಬೇಡಿಕೊಳ್ಳುತ್ತೇನೆ. ಆದರೆ, ಅವರು ಅಹಂಕಾರ ಬಿಟ್ಟು ಕಾರ್ಯಕರ್ತರಿಗೆ ಗೌರವ ಕೊಡುವುದು ಕಲಿಯಬೇಕು’ ಎಂದರು.

‘ಸಚಿವರದ್ದು ನೀಚ ಮನಃಸ್ಥಿತಿ’

ಬೀದರ್: ‘ಸಚಿವ ಭಗವಂತ ಖೂಬಾ ಅವರು ನೀಚ ಮನಃಸ್ಥಿತಿ ಹೊಂದಿದ್ದಾರೆ. ಅವರಲ್ಲಿ ಬಿಜೆಪಿ ತತ್ವ, ಸಿದ್ಧಾಂತಗಳೇ ಇಲ್ಲ. ಏಕೆಂದರೆ ಅವರ ಕುಟುಂಬದವರು ಮೂಲತಃ ಕಾಂಗ್ರೆಸ್ಸಿಗರು. ಗೂಂಡಾಗಳನ್ನು ಇಟ್ಟುಕೊಂಡು ಎಲ್ಲೆಡೆ ಸುತ್ತಾಡುತ್ತಾರೆ. ಅವರಿಂದ ನನ್ನ ಜೀವಕ್ಕೂ ಅಪಾಯವಿದೆ’ ಎಂದು ಔರಾದ್ ಬಿಜೆಪಿ ಶಾಸಕ ಪ್ರಭು ಚವಾಣ್ ಸೋಮವಾರ ಆರೋಪಿಸಿದ್ದಾರೆ.

‘ಖೂಬಾ ನನ್ನ ವಿರುದ್ಧ ಸುಳ್ಳು, ಅರ್ಥಹೀನ ಆರೋಪಗಳನ್ನು ಮಾಡುತ್ತಿದ್ದಾರೆ. ಈ ಕುರಿತು ಬಿಜೆಪಿ ವರಿಷ್ಠರೊಂದಿಗೆ ಚರ್ಚಿಸಿ, ಅವರು ಒಪ್ಪಿಗೆ ನೀಡಿದರೆ ಖೂಬಾ ವಿರುದ್ಧ ₹200 ಕೋಟಿ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ’ ಎಂದು ತಿಳಿಸಿದ್ದಾರೆ.

‘ನಿಗಮ ಅಧಿಕಾರ ಎರಡೂವರೆ ವರ್ಷ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗಮ, ಮಂಡಳಿ ಸೇರಿದಂತೆ ನಾಮನಿರ್ದೇಶನಕ್ಕೆ ಅವಕಾಶ ಇರುವ ಹುದ್ದೆಗಳ ಭರ್ತಿಯಲ್ಲಿ ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಸೂತ್ರ ಅನುಸರಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸೋಮವಾರ ನಡೆದ ಕೆಪಿಸಿಸಿ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ‘ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಕೋರಿ ಸಾವಿರಾರು ಮಂದಿ ಅರ್ಜಿ ಸಲ್ಲಿಸಿದ್ದರು. ಎಲ್ಲರಿಗೂ ಟಿಕೆಟ್ ನೀಡಲು ಅವಕಾಶ ವಿರಲಿಲ್ಲ. ಪಕ್ಷಕ್ಕಾಗಿ ದುಡಿದಿರುವ ಹಲವು ಮಂದಿ ನಿಗಮ, ಮಂಡಳಿ ಸೇರಿದಂತೆ ನಾಮನಿರ್ದೇಶನದ ಹುದ್ದೆಗಳನ್ನು ಬಯಸುತ್ತಿದ್ದಾರೆ. ಎಲ್ಲರಿಗೂ ಅವಕಾಶ ಕಲ್ಪಿಸುವ ಉದ್ದೇಶದಿಂದ ಅವಧಿ ಹಂಚಿಕೆಗೆ ನಿರ್ಧರಿಸಲಾಗಿದೆ’ ಎಂದರು.

ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಹತ್ತು ಸಾವಿರ ಮಂದಿಯ ನಾಮನಿರ್ದೇಶನಕ್ಕೆ ಅವಕಾಶವಿದೆ. ಅದಕ್ಕೂ ಅವಕಾಶ ಕಲ್ಪಿಸುವಂತೆ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರನ್ನು ಕೋರಲಾಗಿದೆ.

‘ಹಳಬರು ಅಧಿಕಾರ ಬಿಡಬೇಕು’

‘ಮೊದಲ ಬಾರಿ ಸಚಿವರಾಗಿರುವವರನ್ನು ಬಿಟ್ಟು ಹಳಬರೆಲ್ಲರೂ ಎರಡೂವರೆ ವರ್ಷಕ್ಕೆ ಸಚಿವ ಸ್ಥಾನದಿಂದ ಕೆಳಗಿಳಿಯಬೇಕು. ಉಳಿದವರಿಗೆ ಅವಕಾಶ ಮಾಡಿಕೊಡಬೇಕು’ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಸಲಹೆ ನೀಡಿದರು.

‘ಹೀಗೆ ಅಧಿಕಾರ ತ್ಯಜಿಸಿದರೆ ಮೂಲಕ ನಾವು ದೇಶದಲ್ಲಿ ಹೊಸ ಪರಂಪರೆಯನ್ನು ಆರಂಭಿಸಿದಂತಾಗುತ್ತದೆ. ಇದು ನನ್ನ ವೈಯಕ್ತಿಕ ಸಲಹೆ’ ಎಂದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡಬೇಕು. ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೂ ಪ್ರಮುಖ ಹುದ್ದೆ ನೀಡಬೇಕು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಎಂ. ವೀರಪ್ಪ ಮೊಯಿಲಿ ಮಾತನಾಡಿ, ‘ಪಕ್ಷ ಮತ್ತು ಸರ್ಕಾರದಲ್ಲಿ ಭಿನ್ನಾಭಿಪ್ರಾಯ ಇದ್ದರೆ ಅದನ್ನು ಬಹಿರಂಗವಾಗಿ ಚರ್ಚಿಸಬಾರದು. ಅದಕ್ಕೆ ಅವಕಾಶವನ್ನೂ ನೀಡಬಾರದು’ ಎಂದರು.

ನಾಮನಿರ್ದೇಶನ ಮಾಡುವಂತೆ ಹಲವಾರು ಮಂದಿ ಅರ್ಜಿ ಸಲ್ಲಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ಸಮಿತಿ, ಬ್ಲಾಕ್ ಕಾಂಗ್ರೆಸ್ ಸಮಿತಿಗಳಿಂದಲೂ ಪಟ್ಟಿ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದರು.

‘ಪಕ್ಷ ಅಧಿಕಾರಕ್ಕೆ ಬಂದಿದೆ ನಮಗೆ ಏನು ಸಿಕ್ಕಿದೆ ಎಂಬ ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಇದೆ ಎಂಬುದು ನಮಗೆ ಗೊತ್ತಿದೆ. ಹುದ್ದೆ ಬಯಸುವವರು ತಮ್ಮ ಮತಗಟ್ಟೆ ವ್ಯಾಪ್ತಿಯಲ್ಲಿ ಪಕ್ಷಕ್ಕೆ ಮುನ್ನಡೆ ದೊರಕಿಸಿದ್ದಾರೆಯೆ ಎಂಬುದನ್ನೂ ಪರಿಶೀಲಿಸುತ್ತೇವೆ. ಮತಗಟ್ಟೆ ಹಂತದಲ್ಲಿ ಗೆದ್ದರೆ ರಾಜ್ಯವನ್ನೇ ಗೆದ್ದಂತೆ. ಅಲ್ಲಿ ಪಕ್ಷ ಸಂಘಟನೆಗೆ ಶ್ರಮಿಸುವವರಿಗೆ ನಾಮನಿರ್ದೇಶನದಲ್ಲಿ ಆದ್ಯತೆ ನೀಡಲಾಗುವುದು’ ಎಂದು ಶಿವಕುಮಾರ್ ತಿಳಿಸಿದರು.

ಎಲ್ಲ ಚುನಾವಣೆಗೆ ಸಿದ್ಧ: ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಸೇರಿದಂತೆ ಬಾಕಿ ಇರುವ ಎಲ್ಲ ಚುನಾವಣೆಗಳನ್ನು ನಡೆಸಲು ಸರ್ಕಾರ ಸಿದ್ಧವಾಗಿದೆ. ನ್ಯಾಯಾಲಯದ ಅನುಮತಿ ಪಡೆದು ಪ್ರಕ್ರಿಯೆ ಆರಂಭಿಸಲಾಗುವುದು ಎಂದರು.

‘ಚಂದ್ರನ ಸ್ಪರ್ಶ’ಕ್ಕೆ ಇಸ್ರೊ ನೌಕೆ ಸನಿಹ

ಬೆಂಗಳೂರು: ಭಾರತದ ಮಹತ್ವಾಕಾಂಕ್ಷೆಯ ‘ಚಂದ್ರಯಾನ–3’ ರ ಬಾಹ್ಯಾಕಾಶ ನೌಕೆಯ ಕಕ್ಷೆ ಬದಲಾವಣೆ ಸೋಮವಾರ ನಡೆದಿದ್ದು, ನೌಕೆಯನ್ನು ಚಂದ್ರನ ಮೇಲ್ಮೈಗೆ ಇನ್ನಷ್ಟು ಹತ್ತಿರ ಒಯ್ಯಲಾಗಿದೆ.

‘ಚಂದ್ರನ ಸನಿಹದ ವೃತ್ತಾಕಾರದ ಕಕ್ಷೆಗೆ ಬಾಹ್ಯಾಕಾಶವನ್ನು ಸೇರಿಸುವಲ್ಲಿ ಯಶಸ್ವಿಯಾಗಿದ್ದೇವೆ’ ಎಂದು ಇಸ್ರೊ ತಿಳಿಸಿದೆ.

ಜುಲೈ 14 ರಂದು ಉಡಾವಣೆಗೊಂಡ ಚಂದ್ರಯಾನ–3 ಆಗಸ್ಟ್ 5 ರಂದು ಚಂದ್ರನ ಕಕ್ಷೆಯನ್ನು ಪ್ರವೇಶಿಸಿತು. ಆ. 6 ಮತ್ತು 9 ರಂದು ಎರಡು ಬಾರಿ ಕಕ್ಷೆಗಳ ಬದಲಾವಣೆ ಮಾಡಲಾಗಿತ್ತು. ಚಂದ್ರನ ಕಕ್ಷೆಗೆ ಪರಿಚಲನೆ ಘಟ್ಟ ಆರಂಭಗೊಂಡಿದೆ. ಇವತ್ತಿನ ಕಕ್ಷೆ ಬದಲಾವಣೆಯಿಂದ ನೌಕೆಯು ಚಂದ್ರನ ಅತಿ ಸನಿಹದ ವೃತ್ತಾಕಾರದ ಕಕ್ಷೆಗೆ ಸೇರಿದಂತಾಗಿದೆ ಎಂದು ತಿಳಿಸಿದೆ.

ಮುಂದಿನ ಕಕ್ಷೆ ಬದಲಾವಣೆ ಬುಧವಾರ ಬೆಳಿಗ್ಗೆ 8.30ಕ್ಕೆ ನಡೆಯಲಿದೆ. ಚಂದ್ರನಿಗೆ ಹತ್ತಿರವಾಗುತ್ತಿದ್ದಂತೆ ಬಾಹ್ಯಾಕಾಶ ನೌಕೆಯ ಚಲನೆಯನ್ನು ಅತಿ ಕುಶಲತೆಯಿಂದ ನಡೆಸಲಾಗುವುದು. ಇದೇ 23 ರಂದು ಲ್ಯಾಂಡರ್‌ನ ಚಂದ್ರ ಸ್ಪರ್ಶದ ಕೆಲಸ ನಡೆಯಲಿದೆ ಎಂದು ಇಸ್ರೊ ಹೇಳಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	112.07	3,999	11,639
ಹಾರಂಗಿ	2,859	2,858.72	1,891	1,725
ಕಬಿನಿ	2284.00	2,281.30	5,113	7,025
ಹೇಮಾವತಿ	2,922	2,915.60	1,151	4,540
ಲಿಂಗನಮಕ್ಕಿ	1,819	1,790.70	4,811	6,240.40
ಸೂಪಾ (ಮೀ)	564	546.59	2,760	3,115
ಮಾಣಿ	595	580.98	397	641
ತುಂಗಭದ್ರಾ	1,633	1,628.65	7,600	10,302
ಮಲಪ್ರಭಾ	2079.50	2,067.00	1,317	194
ಘಟಪ್ರಭಾ	2175	2,165.78	3,944	2,486
ಭದ್ರಾ	186	166.11	2,739	3,225
ಆಲಮಟ್ಟಿ (ಮೀ)	519.60	519.57	4,181	4,181
ನಾರಾಯಣಪುರ (ಮೀ)	492.25	491.88	00	9,200

* ನೆಲಮಟ್ಟದಿಂದ

ಹಣಕ್ಕಾಗಿ ಜಗಳ: ತಂದೆ ಸೇರಿ ಇಬ್ಬರ ಕೊಲೆ

ಪ್ರಜಾವಾಣಿ ವಾರ್ತೆ

ಕೊಟ್ಟಿಗೆಹಾರ (ಚಿಕ್ಕಮಗಳೂರು): ಸಮೀಪದ ಮಧುಗುಂಡಿ ಗ್ರಾಮದಲ್ಲಿ ಆಸ್ತಿ ಮಾರಾಟ ವಿಷಯದಲ್ಲಿ ಆರಂಭವಾದ ಜಗಳದಲ್ಲಿ ವ್ಯಕ್ತಿಯೊಬ್ಬ ತಂದೆ ಸೇರಿ ಇಬ್ಬರನ್ನು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಧುಗುಂಡಿ ಗ್ರಾಮದ ಉಪೇಂದ್ರ ಗೌಡ ಅವರ ಪುತ್ರ ಎಂ.ಯು.ಕಾರ್ತಿಕ್ (45) ಮತ್ತು ಆರೋಪಿಯ ತಂದೆ ಭಾಸ್ಕರಗೌಡ (70) ಕೊಲೆಯಾದವರು. ಎಂ.ಬಿ. ಸಂತೋಷ್ ಬಂಧಿತ ಆರೋಪಿ.

‘ಕಾರ್ತಿಕ್ ತಮ್ಮ ಜಮೀನನ್ನು ಆಂಧ್ರದ ಉದ್ಯಮಿಗೆ ಮಾರಾಟ ಮಾಡಿದ್ದರು. ಅದರ ಜೊತೆಗೆ ಭಾಸ್ಕರ್‌ಗೌಡ ಅವರ ಸ್ವಲ್ಪ ಜಮೀನನ್ನೂ ಉದ್ಯಮಿಗೆ ಮಾರಾಟ ಮಾಡಿಸಲು ಮಧ್ಯವರ್ತಿಯಾಗಿದ್ದರು. ಮುಂಗಡವಾಗಿ ಉದ್ಯಮಿಯಿಂದ ಪಡೆದ ಮೊತ್ತದಲ್ಲಿ ಭಾಸ್ಕರಗೌಡರ ಕುಟುಂಬಕ್ಕೆ ಕಾರ್ತಿಕ್ ಕಡಿಮೆ ಹಣ ನೀಡಿದ್ದಾರೆ ಎಂಬ ವಿಷಯದಲ್ಲಿ ಮನಸ್ತಾಪ ಉಂಟಾಗಿತ್ತು. ಈ ನಡುವೆ ಮುಂಗಡವಾಗಿ ಪಡೆದಿದ್ದ ಹಣವನ್ನು ಭಾಸ್ಕರಗೌಡ ಅವರ ಮೊದಲ ಮಗ ಶಿವಕುಮಾರ್ ತೆಗೆದುಕೊಂಡು ಹೋಗಿದ್ದು, ಈ ವಿಷಯಕ್ಕೆ ಸಂತೋಷ್ ಅಸಮಾಧಾನಗೊಂಡಿದ್ದ.’

ಕಾರ್ತಿಕ್ ಅವರೊಂದಿಗೆ ಹಣಕಾಸಿನ ವಿಚಾರದ ಮಾತುಕತೆ ನಡೆಯುತ್ತಿದ್ದಾಗ ಮಾತಿಗೆ ಮಾತು ಬೆಳೆದಿದೆ. ಈ ವೇಳೆ ಸಂತೋಷ್ ದೊಣ್ಣೆಯಿಂದ ಕಾರ್ತಿಕ್ ಮೇಲೆ ಹಲ್ಲೆ ನಡೆಸಿದ್ದರು. ಕಾರ್ತಿಕ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಜಗಳ ಬಿಡಿಸಲು ಬಂದ ತಂದೆ ಭಾಸ್ಕರಗೌಡರ ಮೇಲೂ ಸಂತೋಷ್ ದೊಣ್ಣೆ ಬೀಸಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಅವರು ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಅಜಿತ್ ಕುಮಾರ್ ರೈಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಪ್ರಕರಣದ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಕೆ.ಆರ್. ಪುರ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದ ಅಜಿತ್ ಕುಮಾರ್ ರೈ ಅವರಿಗೆ ನಗರದ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಜಾಮೀನು ಕೋರಿ ಅಜಿತ್ ಕುಮಾರ್ ರೈ ಸಲ್ಲಿಸಿದ್ದ ಅರ್ಜಿಯನ್ನು ಸಿಟಿ ಸಿವಿಲ್ ಸೆಷನ್ಸ್ ನ್ಯಾಯಾಲಯ-23ರ ನ್ಯಾಯಾಧೀಶ ಕೆ.ಎಂ. ರಾಧಾಕೃಷ್ಣ ಸೋಮವಾರ ವಿಚಾರಣೆ ನಡೆಸಿದರು.

ಹೈಕೋರ್ಟ್‌ನ ಹಿರಿಯ ವಕೀಲ ಎಂ.ಎಸ್. ಶ್ಯಾಮಸುಂದರ್, ಅಜಿತ್ ರೈ ಪರ ವಾದ ಮಂಡಿಸಿ, ‘ಅರ್ಜಿದಾರರ ಪತ್ನಿ ತೀವ್ರ ಅನಾರೋಗ್ಯಕ್ಕೆ ತುತ್ತಾಗಿರುವ ಕಾರಣ ಅವರ ಚಿಕಿತ್ಸೆಯ ದೃಷ್ಟಿಯಿಂದ ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಿದರು.

ಕೆಲ ಕಾಲ ವಾದ ಆಲಿಸಿದ ನ್ಯಾಯಾಧೀಶರು ಮನವಿ ಪುರಸ್ಕರಿಸಿ, ‘ಆರೋಪಿಯು ₹ 5 ಲಕ್ಷ ಮೊತ್ತದ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆ ನೀಡಬೇಕು. ತನಿಖಾಧಿಕಾರಿಗೆ ಸಹಕರಿಸಬೇಕು’ ಎಂಬ ಷರತ್ತುಗಳೊಂದಿಗೆ ಜಾಮೀನು ಮಂಜೂರು ಮಾಡಿ ಆದೇಶಿಸಿದರು.

ಅಜಿತ್ ರೈ ಈ ಹಿಂದೆ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ವಜಾ ಮಾಡಿತ್ತು.

ಲೋಕಾಯುಕ್ತ ಪೊಲೀಸರು 2023ರ ಜೂನ್ 28ರಂದು ಅಜಿತ್ ರೈ ಮನೆ ಮೇಲೆ ದಾಳಿ ಮಾಡಿ ಶೋಧ ಕಾರ್ಯ ನಡೆಸಿದ್ದರು. ವಿಚಾರಣೆಗೆ ಸಹಕರಿಸದ ಆರೋಪದ ಅಡಿಯಲ್ಲಿ ಜೂನ್ 29ರಂದು ಅವರನ್ನು ಬಂಧಿಸಲಾಗಿತ್ತು.

ಶ್ಲಾಘನೀಯ ಸೇವೆ: 20 ಪೊಲೀಸರಿಗೆ ರಾಷ್ಟ್ರಪತಿ ಪದಕ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ ರಾಜ್ಯದ ಇಬ್ಬರು ಎಡಿಜಿಪಿ ಸೇರಿದಂತೆ 20 ಪೊಲೀಸರಿಗೆ 2023ನೇ ಸಾಲಿನ ರಾಷ್ಟ್ರಪತಿ ಪದಕ ಲಭಿಸಿದೆ. ಸ್ವಾತಂತ್ರ್ಯೋತ್ಸವ ದಿನದಂದು ಪದಕ ಪ್ರದಾನ ಕಾರ್ಯಕ್ರಮ ಜರುಗಲಿದೆ. ಪದಕ ಪಡೆದವರ ವಿವರ ಇಲ್ಲಿದೆ.

2023ನೇ ಸಾಲಿನ ರಾಷ್ಟ್ರಪತಿ ವಿಶಿಷ್ಟ ಸೇವಾ ಪದಕ



ಸೀಮಂತ್‌ಕುಮಾರ್ ಸಿಂಗ್
ಎಡಿಜಿಪಿ, ಕೆಎಸ್‌ಆರ್‌ಪಿ




ಎಸ್. ಮುರುಗನ್
ಎಡಿಜಿಪಿ, ಸಿ.ಎಲ್ & ಎಂ

ಪೊಲೀಸ್ ಶ್ಲಾಘನೀಯ ಪದಕ


ಸಂದೀಪ್ ಪಾಟೀಲ
ಐಜಿಪಿ, ಕೆಎಸ್‌ಆರ್‌ಪಿ


ರಾಘವೇಂದ್ರ ಕೆ. ಹೆಗಡೆ
ಎಸ್ಪಿ, ಸಿಐಡಿ


ಬಿ.ಎಸ್. ಮೋಹನ್ ಕುಮಾರ್, ಡಿವೈಎಸ್ಪಿ


ಜಿ. ನಾಗರಾಜ
ಎಸಿಪಿ, ವಿ.ವಿ.ಪುರ



ಎಂ. ಶಿವಶಂಕರ್
ಸಹಾಯಕ ನಿರ್ದೇಶಕ, ಕೆಪಿಎ


ಜಿ.ಕೇಶವಮೂರ್ತಿ
ಡಿವೈಎಸ್ಪಿ, ಸಿಐಡಿ


ಎಚ್.ಎಸ್. ಜಗದೀಶ್
ಎಸಿಪಿ



ಎಂ.ಎನ್. ನಾಗರಾಜ
ಡಿವೈಎಸ್ಪಿ, ಸಿಐಡಿ


ಬಿ. ಗಿರೀಶ್
ಡಿವೈಎಸ್ಪಿ, ಲೋಕಾಯುಕ್ತ


ಬಿ.ಎನ್. ಶ್ರೀನಿವಾಸ್
ಡಿವೈಎಸ್ಪಿ, ಸಿಐಡಿ


ಅಂಜುಮಾಲಾ ಟಿ. ನಾಯ್ಕ್, ಡಿವೈಎಸ್ಪಿ, ಸಿಐಡಿ


ಆರ್.ಪಿ. ಅಶೋಕ
ಇನ್‌ಸ್ಪೆಕ್ಟರ್, ಸದಾಶಿವನಗರ



ಅನಿಲ್‌ಕುಮಾರ್ ಗ್ರಾಮಪುರೋಹಿತ
ಇನ್‌ಸ್ಪೆಕ್ಟರ್, ಸಿಸಿಬಿ


ರಾಮಪ್ಪ ಬಿ. ಗುತ್ತೇರ
ಇನ್‌ಸ್ಪೆಕ್ಟರ್, ತಾವರೆಕೆರೆ


ವಿ. ಬಂಗಾರು, ವಿಶೇಷ ಎಆರ್‌ಎಸ್‌ಐ, 4ನೇ ಪಡೆ, ಕೆಎಸ್‌ಆರ್‌ಪಿ


ಶಂಕರ್
ಎಚ್‌ಸಿ, ಡಿಎಆರ್, ಉಡುಪಿ


ವೆಂಕಟೇಶ್ ಕೆ.
ಎಚ್‌ಸಿ, ರಾಯಚೂರು ಡಿಪಿಒ


ಕುಮಾರ್ ಎಸ್.
ಎಚ್‌ಸಿ, ಬೆಂಗಳೂರು ಎಸ್‌ಸಿಆರ್‌ಬಿ



ಮತ್ತೆ 15 ಸಾವಿರ ಅತಿಥಿ ಶಿಕ್ಷಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ–2020) ತಿದ್ದುಪಡಿ ಕಾಯ್ದೆಯ ಜಾರಿಯ ನಂತರ ಮೊದಲ ಬಾರಿ ನಡೆದ ವರ್ಗಾವಣೆಯ ಪ್ರಯೋಜನವನ್ನು ರಾಜ್ಯದ ಸರ್ಕಾರಿ ಶಾಲೆಗಳ 30,629 ಶಿಕ್ಷಕರು ಪಡೆದಿದ್ದಾರೆ.

ವರ್ಗಾವಣೆಯಿಂದ ತೆರವಾಗುವ ಸ್ಥಾನಕ್ಕೆ ಮತ್ತೆ 15 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಅನುಮತಿ ಕೋರಿ ಶಾಲಾ ಶಿಕ್ಷಣ ಇಲಾಖೆ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ. ಇದೇ ಶೈಕ್ಷಣಿಕ ವರ್ಷದ ಆರಂಭದಲ್ಲಿ 35 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿತ್ತು. ಹೊಸ ಸ್ಥಳಗಳಿಗೆ ಶಿಕ್ಷಕರು ಕರ್ತವ್ಯಕ್ಕೆ ಹಾಜರಾಗುವ ಪ್ರಕ್ರಿಯೆ ಪೂರ್ಣಗೊಂಡರೆ ಉತ್ತರ ಕರ್ನಾಟಕ, ಮಲೆನಾಡು ಭಾಗದ ಶಾಲೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಶಿಕ್ಷಕರ ಕೊರತೆಯಾಗಲಿದೆ. ಹೀಗಾಗಿ, ಮತ್ತೆ ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲು ಸರ್ಕಾರ ನಿರ್ಧರಿಸಿದೆ.

ಹಿಂದೆ ಪರಸ್ಪರ ವರ್ಗಾವಣೆಗೆ ಒಂದು ಬಾರಿ ಮಾತ್ರ ಅವಕಾಶ ಇತ್ತು. ಕೆಲಸಕ್ಕೆ ಸೇರಿದ ಮೊದಲ ಐದು ವರ್ಷ ಹಾಗೂ ನಿವೃತ್ತಿಗೆ ಮೊದಲಿನ ಐದು ವರ್ಷಗಳು ವರ್ಗಾವಣೆಗೆ ಅವಕಾಶ ಇರುವುದಿಲ್ಲ. ಒಮ್ಮೆ ವರ್ಗಾವಣೆಯಾದವರು ಮೂರು ವರ್ಷಗಳ ನಂತರ ಮತ್ತೆ ವರ್ಗಾವಣೆಗೆ ಕೋರಿಕೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಹಾಗಾಗಿ, 73 ಸಾವಿರ ಶಿಕ್ಷಕರು ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದ್ದರು.

ಶಿಕ್ಷಕರಿಲ್ಲದ ಕಡೆ ಬಿಡುಗಡೆ ವಿಳಂಬ: ಪ್ರಾಥಮಿಕ ಶಾಲೆಯ 23,747 ಹಾಗೂ ಪ್ರೌಢಶಾಲೆಗಳ 6,882 ಶಿಕ್ಷಕರು ಕೌನ್ಸೆಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡಿದ್ದಾರೆ. ವರ್ಗಾವಣೆಯಾದವರು ಕೆಲ ಜಿಲ್ಲೆಗಳಲ್ಲಿ ತಾವು ಆಯ್ಕೆಮಾಡಿಕೊಂಡ ಶಾಲೆಗಳಿಗೆ ತೆರಳಿ ಕರ್ತವ್ಯಕ್ಕೆ ಈಗಾಗಲೇ ಹಾಜರಾಗಿದ್ದಾರೆ. ಕೆಲ ಜಿಲ್ಲೆಗಳ ಶಾಲೆಗಳಲ್ಲಿ ವರ್ಗಾವಣೆಯಾದವರನ್ನು ಕಳುಹಿಸಿದರೆ ಕಾಯಂ ಶಿಕ್ಷಕರು ಇಲ್ಲದಂತಾಗುತ್ತದೆ. ಅಂತಹ ಶಾಲೆಗಳಲ್ಲಿ ಬದಲಿ ವ್ಯವಸ್ಥೆ ಮಾಡುವವರಿಗೆ ಕರ್ತವ್ಯದಿಂದ ಬಿಡುಗಡೆ ಮಾಡದಂತೆ ಶಿಕ್ಷಣ ಇಲಾಖೆ ಸೂಚಿಸಿದೆ.

‘ಕುರುವೈ ಬೆಳೆಗೆ ದುಪ್ಪಟ್ಟು ನೀರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಕೊರತೆ ಇರುವುದನ್ನು ಲೆಕ್ಕಿಸದೇ, ಕಾವೇರಿ ಜಲ ನ್ಯಾಯಮಂಡಳಿ ಆದೇಶವನ್ನೂ ಉಲ್ಲಂಘಿಸಿ ತಮಿಳುನಾಡು ತನ್ನ ರಾಜ್ಯದ ಕುರುವೈ ಬೆಳೆಗೆ ದುಪ್ಪಟ್ಟು ನೀರು ಹರಿಸಿದೆ. ಆದರೆ, ನಮ್ಮ ಅಧಿಕಾರಿಗಳು ಇದಕ್ಕೆ ಆಕ್ಷೇಪ ವ್ಯಕ್ತಪಡಿಸದೇ ಇರುವುದರಿಂದ ರಾಜ್ಯದ ಹಿತಾಸಕ್ತಿಗೆ ಧಕ್ಕೆಯಾಗಿದೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ತಗಾದೆ ತೆಗೆದುಕೊಂಡಿದ್ದಾರೆ.

ಈ ಸಂಬಂಧ ಬೊಮ್ಮಾಯಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಪತ್ರ ಬರೆದಿದ್ದಾರೆ.

‘ಈಗ ನಮ್ಮ ನಾಲ್ಕು ಅಣೆಕಟ್ಟೆಗಳಲ್ಲಿ ಇರುವ ನೀರಿನ ಮಟ್ಟ ಬೆಂಗಳೂರು ನಗರ, ಕಾವೇರಿ ಜಲಾನಯನ ಪ್ರದೇಶದ ನಗರ ಮತ್ತು ಗ್ರಾಮಗಳ ಕುಡಿಯುವ ನೀರಿಗೆ ಕೊರತೆಯಾಗುತ್ತದೆ. ಅದೇ ರೀತಿ ಕಾವೇರಿ ಜಲಾನಯನ ಪ್ರದೇಶದ ಹಿಂಗಾರು ಬೆಳೆಗಳಿಗೆ ನೀರಿನ ಕೊರತೆ ಆಗುತ್ತದೆ. ಹೀಗಾಗಿ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಬಿಡಲು ಮುಂದಾದರೆ ಕರ್ನಾಟಕದ ಜನತೆ ಮತ್ತು ರೈತರನ್ನು ಸಂಕಷ್ಟಕ್ಕೆ ದೂಡಿದಂತಾಗುತ್ತದೆ’ ಎಂದೂ ಎಚ್ಚರಿಕೆ ನೀಡಿದ್ದಾರೆ.

‘ಜೂನ್ 1 ರಂದು ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿ ಒಟ್ಟು 24.352 ಟಿಎಂಸಿ ಅಡಿ ನೀರಿತ್ತು. ಅದೇ ವೇಳೆ ಮೆಟ್ಟೂರು ಜಲಾಶಯದಲ್ಲಿ 69.77 ಟಿಎಂಸಿ, ಭವಾನಿ ಸಾಗರದಲ್ಲಿ 16.653 ಟಿಎಂಸಿ ಅಡಿ ಇತ್ತು. ಬಿಳಿಗುಂಡ್ಲು ಮಾಪನ ಕೇಂದ್ರದಿಂದ ಆಗಸ್ಟ್ 6 ಕ್ಕೆ ರಾಜ್ಯದಿಂದ 14.054 ಟಿಎಂಸಿ ಅಡಿ ನೀರು ಹರಿದು ಹೋಗಿದೆ. ತಮಿಳುನಾಡಿನ ಮೆಟ್ಟೂರು ಅಣೆಕಟ್ಟೆಗೆ ಈ ವರ್ಷ 83.831 ಟಿಎಂಸಿ ಅಡಿ ನೀರು ಹರಿದಿದೆ’ ಎಂದರು.

‘ತಮಿಳುನಾಡು ಒಂದು ವರ್ಷದಲ್ಲಿ 1.80 ಲಕ್ಷ ಎಕರೆ ಪ್ರದೇಶದಲ್ಲಿ ಕುರುವೈ ಬೆಳೆ ಬೆಳೆಯಬೇಕು ಮತ್ತು ಇದಕ್ಕೆ 32 ಟಿಎಂಸಿ ನೀರು ಮಾತ್ರ ಬಳಸಬೇಕು ಎಂಬ ನಿರ್ಬಂಧವಿದೆ. ಆದರೆ, ತಮಿಳುನಾಡು ಆಗಸ್ಟ್ 7 ಕ್ಕೆ 60.97 ಟಿಎಂಸಿ ಅಡಿ ನೀರನ್ನು ಕುರುವೈ ಬೆಳೆಗೆ ಬಳಕೆ ಮಾಡಿದೆ. ನಿಗದಿಯಾದ ಪ್ರದೇಶಕ್ಕಿಂತ ಹೆಚ್ಚು ಪ್ರದೇಶದಲ್ಲಿ ಬೆಳೆಗೆ ನೀರು ಬಳಸಿದೆ. ಇದು ಕಾವೇರಿ ಜಲ ನ್ಯಾಯಮಂಡಳಿಯ ಆದೇಶಕ್ಕಿಂತ ದುಪ್ಪಟ್ಟು’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

‘ಆತುರಪಡುವ ಅಗತ್ಯವಿರಲಿಲ್ಲ’

ಬೆಂಗಳೂರು: ‘ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಸಂಕಷ್ಟ ಪರಿಹಾರ ಸೂತ್ರವನ್ನು ಕರ್ನಾಟಕವು ಗೌರವಿಸಲಿದೆ. ಈ ವಿಚಾರದಲ್ಲಿ ತಮಿಳುನಾಡು ಸರ್ಕಾರವು ಆತುರದಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ಅಗತ್ಯವಿರಲಿಲ್ಲ’ ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನೀರು ಹರಿಸುವಂತೆ ನಿರ್ದೇಶನ ನೀಡಲು ಕೋರಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ಕಾವೇರಿ ಜಲಾನಯನ ಪ್ರದೇಶದಲ್ಲಿನ ಮಳೆ ಹಾಗೂ ಅಣೆಕಟ್ಟುಗಳ ಒಳಹರಿವು ಆಧರಿಸಿ ತಮಿಳುನಾಡಿಗೆ ನೀರು ಹರಿಸಲಾಗುವುದು. ಕುಡಿಯುವುದಕ್ಕೆ ಅಗತ್ಯವಿರುವ ನೀರನ್ನು ಉಳಿಸಿಕೊಂಡು, ಉಳಿದ ನೀರನ್ನು ಹರಿಸಲು ಬದ್ಧ’ ಎಂದರು.

ದುಂದುವೆಚ್ಚವಿಲ್ಲದ ದಸರಾ

ಮೈಸೂರು: ‘ಈ ಬಾರಿ ದುಂದು ವೆಚ್ಚಗಳಿಲ್ಲದ ಸಾಂಪ್ರದಾಯಿಕ ದಸರಾ ಆಚರಣೆಗೆ ತೀರ್ಮಾನಿಸಲಾಗಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ತಿಳಿಸಿದರು.

‘ಸೆಪ್ಟೆಂಬರ್ 1ರಂದು ವೀರನಹೊಸಹಳ್ಳಿಯಿಂದ ಮೈಸೂರಿಗೆ ಗಜಪಡೆ ಪ್ರಯಾಣ ಆರಂಭ ಆಗಲಿದ್ದು, ಅಲ್ಲಿಂದ ದಸರಾ ಚಟುವಟಿಕೆಗಳಿಗೆ ಅಧಿಕೃತ ಚಾಲನೆ ದೊರೆಯಲಿದೆ. ಏರ್‌ಷೋ ಆಯೋಜನೆಗೆ ರಕ್ಷಣಾ ಸಚಿವರು ಒಪ್ಪಿದ್ದಾರೆ’ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬ್ರ್ಯಾಂಡಿಂಗ್ ಮೈಸೂರು ಸ್ಪರ್ಧೆ: ‘ದಸರಾ ಹಿನ್ನೆಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯು ‘ಬ್ರ್ಯಾಂಡಿಂಗ್ ಮೈಸೂರು’ ಸ್ಪರ್ಧೆ ಆಯೋಜಿಸಿದೆ. ಆಸಕ್ತರು ಮೈಸೂರಿಗೆ ಸಂಬಂಧಿಸಿ ಲೊಗೊ, ಟ್ಯಾಗ್ ಲೈನ್ ರಚನೆ, ಆಕರ್ಷಕ ಕೈಪಿಡಿ, ಮೈಸೂರಿನಲ್ಲಿ ತಮ್ಮ ನೆಚ್ಚಿನ ಸ್ಥಳ ಇಲ್ಲವೇ ಚಟುವಟಿಕೆಯನ್ನು ವಿವರಿಸುವ ಬರಹ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಬಹುದು. ವಿವರಗಳಿಗೆ: competitions@karnatakatourism.org.

‘ಶಿರಾಡಿ ಎಕ್ಸ್‌ಪ್ರೆಸ್‌ವೇ ಪ್ರಸ್ತಾವ’

ಮಂಗಳೂರು: ‘ರಾಷ್ಟ್ರೀಯ ಹೆದ್ದಾರಿ–75ರಲ್ಲಿ ಶಿರಾಡಿ ಘಾಟಿಯಲ್ಲಿ ಸುರಂಗ ಹಾಗೂ ವಯಡಕ್ಟ್‌ಗಳನ್ನು ನಿರ್ಮಿಸುವ ‘ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ’ ಯೋಜನೆ ಜಾರಿ ಸಾಧ್ಯತೆ ಬಗ್ಗೆ ಪರಿಶೀಲಿಸುವಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಲ್.ಕೆ.ಅತೀಕ್ ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಆರು ಸುರಂಗಗಳು ಹಾಗೂ ಒಟ್ಟು 11 ಕಿ.ಮೀ ಉದ್ದದ ವಯಡಕ್ಟ್‌ಗಳನ್ನು ನಿರ್ಮಿಸುವ ಪ್ರಸ್ತಾವ ಇದೆ. ಇದರ ಕಾರ್ಯಸಾಧ್ಯತೆ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಮಂಗಳೂರು– ಬೆಂಗಳೂರು ನಡುವೆ 5 ಗಂಟೆಗಳಲ್ಲಿ ಪ್ರಯಾಣಿಸಲು ಸಾಧ್ಯವಾಗುವಂತಹ ಹೆದ್ದಾರಿ ನಿರ್ಮಾಣವಾದರೆ ಜಿಲ್ಲೆಯ ಅಭಿವೃದ್ಧಿಗೆ ವೇಗ ಸಿಗಲಿದೆ’ ಎಂದರು.

ನಿಧನ ವಾರ್ತೆ

ಪ್ರೊ.ಎಂ.ಆರ್. ಸತ್ಯನಾರಾಯಣರಾವ್



ಬೆಂಗಳೂರು: ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದ (ಜೆಎನ್‌ಸಿಎಎಸ್‌ಆರ್) ಮಾಜಿ ಅಧ್ಯಕ್ಷ ಪ್ರೊ.ಎಂ.ಆರ್. ಸತ್ಯನಾರಾಯಣರಾವ್ (75) ಅವರು ಭಾನುವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಸತ್ಯನಾರಾಯಣರಾವ್ ಅವರು 2003ರಿಂದ 2013ರ ಅವಧಿಯಲ್ಲಿ ಜೆಎನ್‌ಸಿಎಎಸ್‌ಆರ್ ಅಧ್ಯಕ್ಷರಾಗಿದ್ದರು.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಜೆನೆಟಿಕ್ ಎಂಜಿನಿಯರಿಂಗ್ ಮತ್ತು ಜೀವ ರಸಾಯನ ವಿಜ್ಞಾನ ವಿಭಾಗ ಕೇಂದ್ರದ ಮುಖ್ಯಸ್ಥರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು.

ಪದ್ಮಶ್ರೀ, ಭಟ್ನಾಗರ್ ಸೇರಿದಂತೆ ಹಲವು ಪ್ರತಿಷ್ಠಿತ ಪ್ರಶಸ್ತಿಗಳನ್ನು ಅವರು ಪಡೆದಿದ್ದರು. ಜೀವ ವಿಜ್ಞಾನ, ವಂಶವಾಹಿ ಮತ್ತು ಕ್ಯಾನ್ಸರ್ ಜೀವವಿಜ್ಞಾನ ಕ್ಷೇತ್ರದಲ್ಲಿ ಅವರು ಸಂಶೋಧನೆ ಕೈಗೊಂಡಿದ್ದರು.

ಮೈಸೂರಿನಲ್ಲಿ ಜನಿಸಿದ್ದ ರಾವ್ ಅವರು, ಬೆಂಗಳೂರು ವಿಶ್ವವಿದ್ಯಾಲಯದಿಂದ ಪದವಿ ಮತ್ತು ಸ್ನಾತಕೋತ್ತರ ಪದವಿ ಹಾಗೂ ಐಐಎಸ್‌ಸಿಯಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದರು.

ಹೆಬ್ಬಾಳ ಚಿತಾಗಾರದಲ್ಲಿ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ವಾತಂತ್ರ್ಯೋತ್ಸವದ ಶುಭಾಶಯಗಳು

ಕ್ಷೇಮ ಕುಶಲ
ಹೃದಯದ ಆರೋಗ್ಯದಲ್ಲಿ ಜೀವನಶೈಲಿಯ ಪಾತ್ರ ಪ್ರಧಾನವಾಗಿದೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,402 ▲	19,434 ▲	₹60,700 (ಬೆಂಗಳೂರು)	₹72,000 (ಬೆಂಗಳೂರು)	83.08 ▼

ಮಿತಿ ಮೀರಿದ ಬೆಲೆ ಏರಿಕೆ ಪ್ರಮಾಣ • ಆರ್‌ಬಿಐನಿಂದ ರೆಪೊ ದರದಲ್ಲಿ ಇಳಿಕೆ ಸಾಧ್ಯತೆ ಕ್ಷೀಣ

ತರಕಾರಿ ತುಟ್ಟಿ, ಜಿಗಿದ ಹಣದುಬ್ಬರ


ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ದರವು ಜುಲೈ ತಿಂಗಳಲ್ಲಿ ಶೇಕಡ 7.44ಕ್ಕೆ ಜಿಗಿದಿದೆ. ಇದು 15 ತಿಂಗಳ ಗರಿಷ್ಠ ಮಟ್ಟ. ಟೊಮೆಟೊ ಸೇರಿದಂತೆ ತರಕಾರಿಗಳ ಬೆಲೆಯಲ್ಲಿ ಆದ ಏರಿಕೆಯು ಚಿಲ್ಲರೆ ಹಣದುಬ್ಬರ ದರ ಭಾರಿ ಪ್ರಮಾಣದಲ್ಲಿ ಹೆಚ್ಚಾಗುವುದಕ್ಕೆ ಪ್ರಮುಖ ಕಾರಣವಾಗಿದೆ.

ತರಕಾರಿ ಮಾತ್ರವೇ ಅಲ್ಲದೆ, ಧಾನ್ಯ ಸೇರಿದಂತೆ ಇತರ ಕೆಲವು ಆಹಾರ ವಸ್ತುಗಳ ಬೆಲೆಯಲ್ಲಿಯೂ ತೀವ್ರ ಹೆಚ್ಚಳ ಕಂಡುಬಂದಿದೆ. ಜುಲೈನಲ್ಲಿ ದಾಖಲಾಗಿರುವ ಹಣದುಬ್ಬರ ದರವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಮಟ್ಟಕ್ಕಿಂತ (ಶೇ 6) ಹೆಚ್ಚು. ಈ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ 6ಕ್ಕಿಂತ ಹೆಚ್ಚಾಗಿರುವುದು ಇದೇ ಮೊದಲು.

ಗ್ರಾಮೀಣ ಪ್ರದೇಶಗಳಲ್ಲಿ ಶೇ 7.63ರಷ್ಟು, ನಗರ ಪ್ರದೇಶಗಳಲ್ಲಿ ಶೇ 7.2ರಷ್ಟು ಚಿಲ್ಲರೆ ಹಣದುಬ್ಬರ ದಾಖಲಾಗಿದೆ. ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ದೇಶದ 1,114 ನಗರ ಮಾರುಕಟ್ಟೆಗಳಿಂದ, 1,181 ಗ್ರಾಮೀಣ ಮಾರುಕಟ್ಟೆಗಳಿಂದ ಮಾಹಿತಿ ಕಲೆಹಾಕಿ, ಹಣದುಬ್ಬರದ ಪ್ರಮಾಣವನ್ನು ನಿರ್ಧರಿಸುತ್ತದೆ.

ಚಿಲ್ಲರೆ ಹಣದುಬ್ಬರ ದರವನ್ನು ಶೇ 6ಕ್ಕಿಂತ ಕಡಿಮೆ ಮಟ್ಟದಲ್ಲಿ ನಿಯಂತ್ರಿಸುವ ಹೊಣೆ ಆರ್‌ಬಿಐ ಮೇಲಿದೆ. 2022–23ನೆಯ ಹಣಕಾಸು ವರ್ಷದ ಬಹುತೇಕ ತಿಂಗಳುಗಳಲ್ಲಿ ಇದು ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿಯೇ ಇತ್ತು. ಆದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಜೂನ್ ತಿಂಗಳವರೆಗೆ ಹಣದುಬ್ಬರ ದರವು ಶೇ 6ಕ್ಕಿಂತ ಕಡಿಮೆ ಆಗಿತ್ತು.

8ನೇ ಪುಟ ನೋಡಿ




ತರಕಾರಿಗಳ ಬೆಲೆಯಲ್ಲಿ ಆಗಿರುವ ಹೆಚ್ಚಳವು ಮುಂದಿನ ಬೆಳೆ ಬರುವವರೆಗೆ ಕಡಿಮೆ ಆಗಲಿಕ್ಕಿಲ್ಲ. ಆಗಸ್ಟ್‌ನಲ್ಲಿ ಇದುವರೆಗೆ ಮಳೆ ವಾಡಿಕೆಯಂತೆ ಆಗಿಲ್ಲ. ಇದು ಕೂಡ ಆಹಾರ ವಸ್ತುಗಳ ಬೆಲೆ ಹೆಚ್ಚಳಕ್ಕೆ ಕಾರಣವಾಗಬಹುದು

ಅದಿತಿ ನಾಯರ್, ಮುಖ್ಯ ಅರ್ಥಶಾಸ್ತ್ರಜ್ಞೆ, ಐಸಿಆರ್‌ಎ

ಈ ಹಣದುಬ್ಬರ ದರವು ಒಮ್ಮತದ ಅಂದಾಜು ಮಟ್ಟಕ್ಕಿಂತ ಹೆಚ್ಚು. ಆರ್‌ಬಿಐ, ರೆಪೊ ದರವನ್ನು ಇನ್ನೂ ಹೆಚ್ಚಿನ ಅವಧಿಗೆ ಯಥಾಸ್ಥಿತಿಯಲ್ಲಿ ಇರಿಸಬಹುದು. ಮುಂದಿನ ದಿನಗಳಲ್ಲಿ ನಗದು ಲಭ್ಯತೆಯನ್ನು ಕಡಿಮೆ ಮಾಡುವ ಪ್ರಕ್ರಿಯೆಗೆ ವೇಗ ನೀಡುವ ಸಾಧ್ಯತೆ ಇದೆ

ಸಾಕ್ಷಿ ಗುಪ್ತ, ಪ್ರಧಾನ ಅರ್ಥಶಾಸ್ತ್ರಜ್ಞೆ, ಎಚ್‌ಡಿಎಫ್‌ಸಿ ಬ್ಯಾಂಕ್



ಹಿಮಾಚಲದಲ್ಲಿ ಭೂಕುಸಿತ: 51 ಜನರ ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆ ಮತ್ತು ಭೂಕುಸಿತದಿಂದ 51 ಜನರು ಮೃತಪಟ್ಟಿದ್ದಾರೆ. ಶಿಮ್ಲಾದಲ್ಲಿ ಭೂಕುಸಿತ ಸಂಭವಿಸಿ, ದೇವಾಲಯದ ಅವಶೇಷಗಳಡಿ ಸಮಾಧಿಯಾಗಿರುವ ಏಳು ಜನರು ಇದರಲ್ಲಿ ಸೇರಿದ್ದಾರೆ. ಅವಶೇಷಗಳಡಿ ಇನ್ನಷ್ಟು ಜನರು ಸಿಲುಕಿರುವ ಶಂಕೆ ಇದ್ದು, ರಕ್ಷಣಾ ಕಾರ್ಯ ಸೋಮವಾರ ಭರದಿಂದ ಸಾಗಿತ್ತು.

10

‘ಮುಂದಿನ ವರ್ಷದಿಂದ ಎನ್‌ಇಪಿ ರದ್ದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ಶೈಕ್ಷಣಿಕ ವರ್ಷದಿಂದ ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ರದ್ದುಗೊಳಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೋಮವಾರ ನಡೆದ ಕೆಪಿಸಿಸಿ ಸರ್ವ ಸದಸ್ಯರ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಕೆಪಿಸಿಸಿ ಶಿಸ್ತು ಸಮಿತಿ ಅಧ್ಯಕ್ಷ ಕೆ.ರೆಹಮಾನ್ ಖಾನ್, ‘ಆರ್‌ಎಸ್‌ಎಸ್ ಕಾರ್ಯಸೂಚಿಯ ಭಾಗವಾಗಿರುವ ಎನ್‌ಇಪಿಯನ್ನು ರಾಜ್ಯದಲ್ಲಿ ಕೈಬಿಡಬೇಕು’ ಎಂದು ಆಗ್ರಹಿಸಿದರು.



ಅದಕ್ಕೆ ತಮ್ಮ ಭಾಷಣದಲ್ಲಿ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಎನ್‌ಇಪಿ ಕೈಬಿಡಲು ಕೆಲವು ಸಿದ್ಧತೆ ಅಗತ್ಯ. ಚುನಾವಣೆ ವರ್ಷವಾಗಿದ್ದರಿಂದ ಈ ಬಾರಿ ಸಮಯ ಇರಲಿಲ್ಲ. ಶೈಕ್ಷಣಿಕ ವರ್ಷ ಆರಂಭವಾಗಿತ್ತು. ಮಧ್ಯದಲ್ಲಿ ಸಮಸ್ಯೆ ಆಗಬಾರದೆಂಬ ಕಾರಣಕ್ಕೆ ತಡ ಆಯಿತು. ಮುಂದಿನ ವರ್ಷದಿಂದ ಎನ್‌ಇಪಿಯನ್ನು ಪೂರ್ಣವಾಗಿ ರದ್ದು ಮಾಡುತ್ತೇವೆ. ಸಂವಿಧಾನಕ್ಕೆ ಪೂರಕವಾದ ಶಿಕ್ಷಣ ನೀತಿಯನ್ನು ಜಾರಿಗೊಳಿಸುತ್ತೇವೆ’ ಎಂದರು.

‘ಎನ್‌ಇಪಿಗೆ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಎಲ್ಲರ ವಿರೋಧವಿದೆ. ಬಿಜೆಪಿ ಅಧಿಕಾರದಲ್ಲಿರುವ ಇತರ ರಾಜ್ಯಗಳಲ್ಲಿ ಅದನ್ನು ಅನುಷ್ಠಾನಕ್ಕೆ ತಂದಿಲ್ಲ. ಕರ್ನಾಟಕದಲ್ಲಿ ತರಾತುರಿಯಲ್ಲಿ ಅನುಷ್ಠಾನಕ್ಕೆ ತರಲಾಯಿತು. ಆ ಮೂಲಕ ಬಿಜೆಪಿಯು ನಾಡಿನ ವಿದ್ಯಾರ್ಥಿ ಸಮೂಹದ ಹಿತಾಸಕ್ತಿಯನ್ನು ಬಲಿಕೊಟ್ಟಿದೆ’ ಎಂದು ಹೇಳಿದರು.

‘ನಾಗಪುರದಲ್ಲಿರುವ ಆರ್‌ಎಸ್‌ಎಸ್ ಕೇಂದ್ರ ಕಚೇರಿಯಲ್ಲೇ ಎನ್‌ಇಪಿ ಕರಡು ತಯಾರಾಗಿತ್ತು. ಬಹಳ ಹಿಂದೆಯೇ ಅದು ಸೋರಿಕೆಯಾಗಿತ್ತು. ರಾಜ್ಯಸಭೆಯಲ್ಲೇ ಈ ಬಗ್ಗೆ ನಾನು ಪ್ರಶ್ನೆ ಎತ್ತಿದ್ದೆ. ಆರ್‌ಎಸ್‌ಎಸ್ ತನ್ನ ಗುಪ್ತ ಕಾರ್ಯಸೂಚಿಯನ್ನು ಜಾರಿಗೊಳಿಸಲು ಎನ್‌ಇಪಿಯನ್ನು ಬಳಸಿಕೊಳ್ಳುತ್ತಿದೆ. ಅದನ್ನು ತಕ್ಷಣ ರದ್ದು ಮಾಡಬೇಕು’ ಎಂದು ರೆಹಮಾನ್ ಖಾನ್ ಆಗ್ರಹಿಸಿದರು.



ಸ್ವಾತಂತ್ರ್ಯ ಸಂಭ್ರಮ ಸ್ವಾತಂತ್ರ್ಯೋತ್ಸವದ ಅಂಗವಾಗಿ ಪಶ್ಚಿಮ ಬಂಗಾಳದ ನಾಡಿಯಾದ ಹೊಲದಲ್ಲಿ ಮಕ್ಕಳು ಸೋಮವಾರ ರಾಷ್ಟ್ರಧ್ವಜ ಹಿಡಿದು ಸಂಭ್ರಮಿಸಿದರು –ಪಿಟಿಐ ಚಿತ್ರ

ಕಾವೇರಿ: ‘ಸುಪ್ರೀಂ’ ಕದ ತಟ್ಟಿದ ತಮಿಳುನಾಡು

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಹಾಲಿ ಇರುವ ಬೆಳೆಗಳ ರಕ್ಷಣೆಗಾಗಿ ನಿತ್ಯ 24 ಸಾವಿರ ಕ್ಯುಸೆಕ್ ಕಾವೇರಿ ನದಿ ನೀರು ಹರಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಕೋರಿ ತಮಿಳುನಾಡು ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದೆ.

‘ಅಂತರರಾಜ್ಯ ನದಿ ನೀರು ಹರಿವು ಮಾಪನ ಕೇಂದ್ರವಾದ ಬಿಳಿಗುಂಡ್ಲು-ವಿನಲ್ಲಿ ದಾಖಲಾಗಿರುವಂತೆ, ಆಗಸ್ಟ್ ತಿಂಗಳ ಅಂತ್ಯದವರೆಗೂ ಪ್ರತಿನಿತ್ಯ 24,000 ಕ್ಯುಸೆಕ್ ನೀರು ಹರಿಸುವಂತೆ ನಿರ್ದೇಶನ ನೀಡಬೇಕು’ ಎಂದು ತಮಿಳುನಾಡು ಸರ್ಕಾರ ಅರ್ಜಿಯಲ್ಲಿ ಕೋರಿದೆ.

ಅಲ್ಲದೆ, ಕಾವೇರಿ ಜಲ ವಿವಾದ ನ್ಯಾಯಮಂಡಳಿ ಐತೀರ್ಪಿನ ಅನುಸಾರ ಸೆಪ್ಟೆಂಬರ್ 2023ರ ಕೋಟಾಗೆ ಅನುಸಾರ (36.76 ಟಿಎಂಸಿ ಅಡಿ) ಪೂರ್ಣ ನೀರು ಹರಿಸುವುದನ್ನು ಖಾತ-ರಿಪಡಿಸಿಕೊಳ್ಳುವಂತೆ ಕರ್ನಾಟಕಕ್ಕೆ ನಿರ್ದೇಶಿಸಬೇಕು ಎಂದು ಮನವಿಯಲ್ಲಿ ಕೋರಿದೆ.


ಪ್ರಸಕ್ತ ವರ್ಷದ ನೀರಾವರಿ ಹಂಗಾಮಿನ ಅವಧಿಯಾಗಿರುವ ಜೂನ್ 1, 2023ರಿಂದ ಜುಲೈ 31, 2023ರ ನಡುವೆ ಹರಿಸಬೇಕಾಗಿದ್ದ 28.849 ಟಿಎಂಸಿ ಅಡಿ ನೀರಿನಲ್ಲಿನ ಕೊರತೆಯನ್ನು ತುಂಬಿಕೊಡುವಂತೆಯೂ ಸೂಚಿಸಬೇಕು ಎಂದು ತಮಿಳುನಾಡು ಮನವಿ ಮಾಡಿದೆ.

ಕರ್ನಾಟಕ ಸರ್ಕಾರಕ್ಕೆ ನೀಡಲಾಗುವ ಸೂಚನೆಗಳು ಪೂರ್ಣ ಪಾಲನೆಯಾಗಿದೆ ಹಾಗೂ ನಿಗದಿತ ಪ್ರಮಾಣದ ನೀರನ್ನು ಆಯಾ ತಿಂಗಳಿನಲ್ಲಿ ಹರಿಸಲಾಗಿದೆ. ಪ್ರಸ್ತುತ ಜಲ ವರ್ಷಕ್ಕೆ ಅನ್ವಯಿಸಿ ಆದೇಶವು ಪೂರ್ಣ ಜಾರಿಯಾಗಿದೆ ಎಂದು ಖಾತರಿಪಡಿಸಿಕೊಳ್ಳುವಂತೆಯೂ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರಕ್ಕೆ (ಸಿಡಬ್ಲ್ಯುಎಂಎ) ನಿರ್ದೇಶಿಸಬೇಕು ಎಂದು ತಮಿಳುನಾಡು ಮನವಿ ಮಾಡಿದೆ.

ಸುಪ್ರೀಂ ಕೋರ್ಟ್ ಪರಿಷ್ಕರಣೆ ಮಾಡಿರುವ, ನ್ಯಾಯಮಂಡಳಿಯ ಅಂತಿಮ ಆದೇಶವು ಪೂರ್ಣಪ್ರಮಾಣದಲ್ಲಿ ಪಾಲನೆಯಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ತನ್ನ ಹೊಣೆ ನಿಭಾಯಿಸುವಲ್ಲಿ ಪ್ರಾಧಿಕಾರ ವಿಫಲವಾಗಿದೆ ಎಂದು ಅರ್ಜಿಯಲ್ಲಿ ಆರೋಪಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬನ್ನೇರುಘಟ್ಟ ಉದ್ಯಾನಕ್ಕೆ ಇಂದು ಜನ ಬರಬಹುದು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನವನ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಮಂಗಳವಾರ ಕಾರ್ಯನಿರ್ವಹಿಸಲಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯಾನ ಪ್ರತಿ ಮಂಗಳವಾರ ರಜೆ ಇರಲಿದೆ. ಆಗಸ್ಟ್ 15ರ ಮಂಗಳವಾರ ಸ್ವಾತಂತ್ರ್ಯ ದಿನಾಚರಣೆ ಇರುವುದರಿಂದ ಹೆಚ್ಚು ಪ್ರವಾಸಿಗರು ಬರುವ ನಿರೀಕ್ಷೆಯಿಂದ ಮೃಗಾಲಯ, ಸಫಾರಿ ಮತ್ತು ಚಿಟ್ಟೆ ಉದ್ಯಾನ ತೆರೆದಿರುತ್ತದೆ ಎಂದು ಅವರು ಹೇಳಿದ್ದಾರೆ.

ಬುಧವಾರ ರಜೆ: ಆಗಸ್ಟ್ 16ರ ಬುಧವಾರ ಉದ್ಯಾನಕ್ಕೆ ರಜೆ ಘೋಷಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರು ಹಿಂಬಾಲಿಸಿದ ಚಿರತೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ರೆಡ್ಡಿಗೊಲ್ಲಾರಹಳ್ಳಿ ಬಳಿ ಚಿರತೆ ಕಾರನ್ನು ಹಿಂಬಾಲಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ರೆಡ್ಡಿಗೊಲ್ಲಾರಹಳ್ಳಿ, ದೊಡ್ಡಪೈಲಗುರ್ಕಿ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಕಳೆದ ಒಂದು ವಾರದಿಂದ ಚಿರತೆಗಳ ಹಾವಳಿ ಹೆಚ್ಚಿದೆ. ಚಿರತೆಗಳ ಸೆರೆಗೆ ಅರಣ್ಯ ಇಲಾಖೆ ಬೋನು ಸಹ ಇರಿಸಿದೆ.

ರೆಡ್ಡಿಗೊಲ್ಲಾರಹಳ್ಳಿ ಬಳಿ ಯುವಕರು ಕಾರಿನಲ್ಲಿ ಸಾಗುತ್ತಿದ್ದಾಗ ರಸ್ತೆ ಬದಿಯಲ್ಲಿದ್ದ ಚಿರತೆ ಕಾರನ್ನು ಹಿಂಬಾಲಿಸಿದೆ. ಯುವಕರು ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.

‘ಹಳ್ಳಿಗಳಲ್ಲಿ ವೈದ್ಯರ ಸೇವೆ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ‘ವಿಲೇಜ್ ಕ್ಲಿನಿಕ್’ನ ಸುವರ್ಣ ಮಹೋತ್ಸವ
- ಟಿ. ಬೇಗೂರಿನಲ್ಲಿ ಪ್ರತಿ ಭಾನುವಾರ ಶಿಬಿರ
- ಪ್ರತಿ ಶಿಬಿರದಲ್ಲೂ 1,200ಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ

ಬೆಂಗಳೂರು: ‘ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ವೈದ್ಯರು ಬಯಸುತ್ತಿಲ್ಲ. ಕನಿಷ್ಠ ಒಂದು ವರ್ಷ ಗ್ರಾಮೀಣ ಪ್ರದೇಶದಲ್ಲಿ ವೈದ್ಯರು ಕೆಲಸ ಮಾಡುವುದನ್ನು ಕಡ್ಡಾಯಗೊಳಿಸಿದ್ದೇವೆ’ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.

ಟಿ. ಬೇಗೂರು ಗ್ರಾಮದಲ್ಲಿ ಭಾನುವಾರ ನಡೆದ ಡಾ.ಬಿ.ರಮಣರಾವ್ ಅವರ ‘ವಿಲೇಜ್ ಕ್ಲಿನಿಕ್’ನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಹೃದ್ರೋಗ ತಜ್ಞ ಡಾ. ಬಿ. ರಮಣ ರಾವ್ ಅವರನ್ನು ಸನ್ಮಾನಿಸಿ ಮಾತನಾಡಿದರು.

‘ಹಳ್ಳಿಗಳಲ್ಲಿ ಆರೋಗ್ಯ ಜಾಗೃತಿಯ ಅವಶ್ಯಕತೆಯಿದೆ. ಜಿಲ್ಲೆಗಳಲ್ಲಿ ಇರುವ ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್ ಸೌಲಭ್ಯಗಳನ್ನು ಪ್ರಾರಂಭಿಸಲು ನಮ್ಮ ಸರ್ಕಾರ ಅನುದಾನ ನೀಡಿದೆ’ ಎಂದು ವಿವರಿಸಿದರು.

‘ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ಸೇವೆ ನೀಡುತ್ತಿರುವ ಡಾ. ರಮಣ ರಾವ್ ಅವರ ಕಾರ್ಯ ಪದಗಳಿಗೆ ಮೀರಿದ್ದು. ಪ್ರತಿ ವರ್ಷ ವೈದ್ಯಕೀಯ ಪದವಿ ಪಡೆಯುವವರು ರಮಣ ರಾವ್ ಅವರಿಂದ ಸ್ಫೂರ್ತಿ ಪಡೆಯಬೇಕು’ ಎಂದು ಸಲಹೆ ನೀಡಿದರು.

ರಮಣ ರಾವ್ 1973ರಿಂದ ಪ್ರತಿ ಭಾನುವಾರ ಟಿ. ಬೇಗೂರಿನ ತಮ್ಮ ತೋಟದ ಮನೆಯಲ್ಲಿ ಉಚಿತ ವೈದ್ಯಕೀಯ ಶಿಬಿರ ನಡೆಸುತ್ತಿದ್ದಾರೆ. ‘ವಿಲೇಜ್ ಕ್ಲಿನಿಕ್’ ಎಂದು ಪ್ರಸಿದ್ಧವಾಗಿರುವ ಈ ಸೇವೆಗೆ 50 ವರ್ಷಗಳು ತುಂಬಿವೆ. ಪ್ರತಿ ಭಾನುವಾರ 50 ಕಿ.ಮೀ ವ್ಯಾಪ್ತಿಯಿಂದ 1,200ಕ್ಕೂ ಹೆಚ್ಚು ರೋಗಿಗಳು ಇಲ್ಲಿ ಬಂದು ಚಿಕಿತ್ಸೆ, ಔಷಧ ಪಡೆಯುತ್ತಿದ್ದಾರೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಂಸದರಾದ ಕೆ.ಬಿ. ಕೃಷ್ಣಮೂರ್ತಿ, ಪಿ.ಸಿ. ಮೋಹನ್, ಶಾಸಕರಾದ ಜಿ.ಟಿ. ದೇವೇಗೌಡ, ಆರ್. ವಿ. ದೇಶಪಾಂಡೆ, ಮಾಜಿ ಸಚಿವ ಆರ್. ರೋಷನ್ ಬೇಗ್, ನ್ಯಾಯಮೂರ್ತಿ ಬಿ. ಪದ್ಮರಾಜ್, ಮಾಜಿ ಕ್ರಿಕೆಟ್ ಆಟಗಾರ ವಿ.ವಿ.ಎಸ್. ಲಕ್ಷ್ಮಣ್ ಭಾಗವಹಿಸಿದ್ದರು.



ಟಿ. ಬೇಗೂರು ಗ್ರಾಮದಲ್ಲಿ ಭಾನುವಾರ ನಡೆದ ಡಾ.ಬಿ.ರಮಣ ರಾವ್ ಅವರ ‘ವಿಲೇಜ್ ಕ್ಲಿನಿಕ್’ನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಗೃಹಸಚಿವ ಡಾ.ಜಿ. ಪರಮೇಶ್ವರ್ ವಾಕಿಂಗ್ ಸ್ಟಿಕ್ ವಿತರಿಸಿದರು. ವೈದ್ಯ ಡಾ.ಬಿ.ರಮಣರಾವ್ ಇದ್ದರು.

‘ಪರಿಶಿಷ್ಟರು ಹಿಂದೂಗಳಲ್ಲವೇ?’

ಬೆಂಗಳೂರು: ‘ದೇಶದಲ್ಲಿ 35 ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಿಂದೂಗಳಲ್ಲವೇ? ಈ ಬಗ್ಗೆ ಮಠಾಧೀಶರು ಮತ್ತು ಹಿಂದೂ ಪರಿಷತ್ ಮುಖಂಡರು ಉತ್ತರಿಸಬೇಕು’ ಎಂದು ಬಹುಜನ ಸಮಾಜ ಪಾರ್ಟಿ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಆಗ್ರಹಿಸಿದ್ದಾರೆ.

‘ಆ.13ರಂದು ಹಿಂದೂ ಪರಿಷತ್‌ನ ಕೆಲವು ಮುಖಂಡರು, ಕೆಲವು ಮಠಾಧೀಶರು ಸಮ್ಮೇಳನ ನಡೆಸಿ, ಗೋಹತ್ಯೆ ನಿಷೇಧ ಕಾಯ್ದೆಯನ್ನು ಸರ್ಕಾರ ಹಿಂಪಡೆಯಬಾರದು ಎಂದು ಆಗ್ರಹಿಸಿದ್ದಾರೆ. ದೇಶದ ದೊಡ್ಡ ನಗರಗಳಲ್ಲಿ ಇಂದಿಗೂ ಅಸ್ಪೃಶ್ಯತೆ ಆಚರಣೆ ಇದೆ. ಕೆಲವು ಕಡೆ ದೇವಸ್ಥಾನಗಳಿಗೆ ಬಿಡುವುದಿಲ್ಲ. ಮಣಿಪುರದಲ್ಲಿ ಕುಕಿ ಸಮುದಾಯಗಳ ಮೇಲೆ ನಡೆದ ದೌರ್ಜನ್ಯ ಶೋಚನೀಯ. ಈ ಬಗ್ಗೆ ಏಕೆ ಮಾತನಾಡುವುದಿಲ್ಲ’ ಎಂದು ಪ್ರಶ್ನಿಸಿದ್ದಾರೆ.

KIRLOSKAR ELECTRIC COMPANY LIMITED

Regd Office: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone: 080-28397256; **Fax:** 080-28396727; **Website:** www.kirloskarelectric.com
Email: investors@kirloskarelectric.com; **CIN:** L31100KA1946PLC000415

EXTRACT OF STATEMENT OF UNAUDITED FINANCIAL RESULTS FOR THE QUARTER ENDED JUNE 30, 2023

(₹. in Lakhs)

Sl. No.	Particulars	STANDALONE			CONSOLIDATED		
		Quarter ended		Year ended	Quarter ended		Year ended
		June 30, 2023	June 30, 2022	March 31, 2023	June 30, 2023	June 30, 2022	March 31, 2023
		Unaudited	Unaudited	Audited	Unaudited	Unaudited	Audited
1	Total income from operations	11,878	10,463	48,963	11,879	10,463	49,580
2	Net Profit / (Loss) for the period (before Tax, Exceptional and/or Extraordinary items)	210	(416)	2,588	183	(471)	3,108
3	Net Profit / (Loss) for the period before tax (after Exceptional and/or Extraordinary Items)	210	(416)	2,588	183	(471)	3,108
4	Net Profit / (Loss) for the period after tax (after Exceptional and/or Extraordinary Items)	210	(416)	2,588	183	(471)	3,108
5	EBITDA	895	238	5,223	896	231	5,856
6	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	212	(417)	1,066	185	(472)	1,586
7	Equity Share Capital	6,641	6,641	6,641	6,641	6,641	6,641
8	Reserves (excluding revaluation reserves as shown in the Balance Sheet of previous year)	NA	NA	NA	NA	NA	NA
9	Earnings Per Share (EPS) (₹.)						
	a. Basic EPS before extra ordinary items (not annualised)	0.32	(0.63)	3.90	0.28	(0.71)	4.68
	b. Diluted EPS before extra ordinary items (not annualised)	0.32	(0.63)	3.90	0.28	(0.71)	4.68
	c. Basic EPS after extra ordinary items (not annualised)	0.32	(0.63)	3.90	0.28	(0.71)	4.68
	d. Diluted EPS after extra ordinary items (not annualised)	0.32	(0.63)	3.90	0.28	(0.71)	4.68

NOTE:

1. The above unaudited standalone and consolidated financial results have been reviewed by the Audit Committee and approved by the Board of Directors at its meeting held on August 14, 2023.
2. The standalone and consolidated financial results of the Company for the quarter ended June 30, 2023 have been subject to limited review by its Statutory auditors.
3. The above is an extract of the detailed format of the unaudited financial results for the quarter ended June 30, 2023 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the unaudited financial results are available on the stock exchange websites (www.bseindia.com, www.nseindia.com) and also on the company's website (http://www.kirloskarelectric.com/investors/investors-information/financial.html)

Sd/-
Vijay R Kirloskar
Executive Chairman
DIN: 00031253

Place : Bengaluru
Date : August 14, 2023


ನಂಬಲಾಗದ
ಆಫರ್‌ಗಳು @ VISHAL MEGA MART®
ಫುಡ್ & ಗ್ರೊಸರಿ
15 ಆಗಸ್ಟ್ 2023
ಬಾದಾಮಿ 1kg/
ಗೋಡಂಬಿ 500g
₹639/ ₹349
ಸನ್‌ಫ್ಲವರ್ ಆಯಿಲ್
MRP ₹190 ₹102/ℓ
₹88 ಉಳಿಸಿ
ಫರ್ಸ್ಟ್ ಕ್ರಾಪ್ ರೋಜಾನಾ ಬಾಸ್ಮತಿ ಅಕ್ಕಿ 5kg MRP ₹675 ₹375
₹300 ಉಳಿಸಿ
ಇಂಡಿಯಾ ಗೇಟ್ ಬಾಸ್ಮತಿ ರೋಜಾನಾ ಅಕ್ಕಿ 5kg, MRP ₹475 ₹415
₹60 ಉಳಿಸಿ
ಫಾರ್ಚೂನ್ ರೋಜಾನಾ ಬಾಸ್ಮತಿ ಅಕ್ಕಿ 5kg, MRP ₹585 ₹385
₹200 ಉಳಿಸಿ
ಬ್ರಿಟಾನಿಯಾ/ಪಾರ್ಲೆ/ ಸನ್‌ಫೀಸ್ಟ್ ಫರ್ಸ್ಟ್ ಕ್ರಾಪ್ ಬಿಸ್ಕಟ್ಸ್ (ಆಯ್ದ ಶ್ರೇಣಿ) 120G+
1 ಖರೀದಿಸಿ 1 ಉಚಿತ ಪಡೆಯಿರಿ
ಬಟರ್ ಕುಕೀಸ್ 1kg
₹99
ಫರ್ಸ್ಟ್ ಕ್ರಾಪ್ ನಮ್ಕೀನ್ 1KG
MRP ₹360+ ₹149+
₹211 ಉಳಿಸಿ
ಬಿಕಾನೊ ನಮ್ಕೀನ್ 1KG, MRP ₹272+
₹100 ರಿಯಾಯಿತಿ
ಟೀ 1kg, MRP ₹510+
ಟಾಟಾ ಟೀ ಪ್ರೀಮಿಯಂ
₹185 ರಿಯಾಯಿತಿ
ರೆಡ್ ಲೇಬಲ್ ₹175 ರಿಯಾಯಿತಿ
ಹಾರ್ಲಿಕ್ಸ್ ಹೆಲ್ತ್ ಡ್ರಿಂಕ್
750g / 1kg, MRP ₹365+
₹135 ರಿಯಾಯಿತಿ
ಪೆಪ್ಸಿ/ಕೋಕ್/ಲಿಮ್ಕಾ ಫಾಂಟಾ ಕೋಲ್ಡ್ ಡ್ರಿಂಕ್
2 ಖರೀದಿಸಿ 1 ಉಚಿತ ಪಡೆಯಿರಿ
ಬೇಸನ್/ ಮೈದಾ/ ಸೂಜಿ/ ನೂಡಲ್ಸ್/ ಕಾರ್ನ್‌ಫ್ಲೇಕ್ಸ್/ ಓಟ್ಸ್/ಸಾಸ್/ ಜೇನು/ ಜ್ಯೂಸ್/ ಪಾಸ್ತಾ/ ವರ್ಮಿಸೆಲ್ಲಿ
1 ಖರೀದಿಸಿ 1 ಉಚಿತ ಪಡೆಯಿರಿ
ಡಿಟರ್ಜೆಂಟ್ MRP ₹635+
ಟೈಡ್ 4+1kg ₹165 ರಿಯಾಯಿತಿ
ಸರ್ಫ್ 5kg ₹200 ರಿಯಾಯಿತಿ
ಡವ್/ಪಿಯರ್ಸ್/ ಗೋದ್ರೇಜ್ ನಂ.1 ಸಿಂಥೋಲ್ ಸೋಪ್
MRP ₹198+
2 ಖರೀದಿಸಿ 1 ಉಚಿತ ಪಡೆಯಿರಿ
ಹೆಡ್ ಅಂಡ್ ಶೋಲ್ಡರ್ಸ್/ ಪ್ಯಾಂಟೀನ್ ಡವ್ ಹೇರ್ ಶ್ಯಾಂಪೂ 340ML
40% ರಿಯಾಯಿತಿ
ಕೋಲ್ಗೇಟ್ ಡೆಂಟಲ್ ಕ್ರೀಮ್ 500g/ ಮ್ಯಾಕ್ಸ್ ಫ್ರೆಶ್ ರೆಡ್ & ಬ್ಲೂ 300g
MRP ₹200+
2 ಖರೀದಿಸಿ 1 ಉಚಿತ ಪಡೆಯಿರಿ
ಹೋಮ್ ನಿಂಜಾ ಕ್ಲೀನರ್ಸ್ (ಡಿಸ್‌ಇನ್‌ಫೆಕ್ಟೆಂಟ್ ಸರ್‌ಫೇಸ್+ ಟಾಯ್‌ಲೆಟ್+ಡಿಶ್‌ವಾಶ್)
MRP ₹313+ ₹119
₹194 ಉಳಿಸಿ
ಪ್ಯಾಂಪರ್ಸ್ ಬೇಬಿ ಡೈಪರ್ ಜಂಬೋ ಪ್ಯಾಕ್ MRP ₹899
₹340 ರಿಯಾಯಿತಿ
ಡಿಟರ್ಜೆಂಟ್ ಪೌಡರ್/ ಸ್ಯಾನಿಟರಿ ಪ್ಯಾಡ್‌ಗಳು / ಬಾದಾಮಿ ಆಯಿಲ್/ ಕೊಕೊನಟ್ ಆಯಿಲ್/ ಆಮ್ಲಾ ಆಯಿಲ್ ಡೈಪರ್/ ಕ್ಲೀನರ್ಸ್/ ಹ್ಯಾಂಡ್‌ವಾಶ್
1 ಖರೀದಿಸಿ 1 ಉಚಿತ ಪಡೆಯಿರಿ
ಮನೆ ಅಗತ್ಯಗಳು & ಅಪ್ಲಯೆನ್ಸಸ್
ಡೋರ್ ಮ್ಯಾಟ್ MRP ₹99
3 ಖರೀದಿಸಿ 1 ಉಚಿತ ಪಡೆಯಿರಿ
ಡಬಲ್ ಬೆಡ್ ಶೀಟ್
MRP ₹429 3 ಖರೀದಿಸಿ ₹999 ಗೆ
ಕರ್ಟನ್‌ಗಳು MRP ₹269+
4 ಖರೀದಿಸಿ ಪಡೆಯಿರಿ 20% ರಿಯಾಯಿತಿ
ಪ್ಲಾಸ್ಟಿಕ್ ಕಂಟೇನರ್ 4 ಯುನಿಟ್ ಸೆಟ್
MRP ₹399 ₹199
ಪ್ರತಿಯೊಂದಕ್ಕೆ ₹159 ರಂತೆ 2 ಖರೀದಿಸಿ
ಮೆಲಮೈನ್ ಡಿನ್ನರ್ ಸೆಟ್ 40 ಯುನಿಟ್
MRP ₹1200 ₹599
₹601 ಉಳಿಸಿ
tandem
1+1 ವರ್ಷಗಳ ವಾರಂಟಿ
ಎಲೆಕ್ಟ್ರಿಕ್ ಕೆಟಲ್ 1.5ℓ
MRP ₹1299 ₹479
₹820 ಉಳಿಸಿ
tandem
5+1 ವರ್ಷಗಳ ವಾರಂಟಿ
ಪ್ರೆಷರ್ ಕುಕ್ಕರ್ 3ℓ
ಔಟರ್‌ಲಿಡ್ MRP ₹1299 ₹649
₹620 ಉಳಿಸಿ
Prestige
ಪ್ರೆಷರ್ ಕುಕ್ಕರ್ 3ℓ
ಇಂಡಕ್ಷನ್ ಬೇಸ್
MRP ₹1750 ₹1199
₹551 ಉಳಿಸಿ
2+1 ವರ್ಷಗಳ ವಾರಂಟಿ
2 ವರ್ಷಗಳ ವಾರಂಟಿ
tandem
ಮಿಕ್ಸರ್ ಗ್ರೈಂಡರ್ 2 ಜಾರ್
MRP ₹2499 ₹1099
₹1400 ಉಳಿಸಿ
BAJAJ
ಮಿಕ್ಸರ್ ಗ್ರೈಂಡರ್ 3 ಜಾರ್
MRP ₹4150 ₹2099
₹2051 ಉಳಿಸಿ
1+1 ವರ್ಷಗಳ ವಾರಂಟಿ
Prestige
ಇಂಡಕ್ಷನ್ ಕುಕ್‌ಟಾಪ್ 1200W
MRP ₹3095+ ₹1475
₹1620 ಉಳಿಸಿ
tandem
ಇಂಡಕ್ಷನ್ ಕುಕ್‌ಟಾಪ್ 1400W
MRP ₹2999 ₹1399
₹1600 ಉಳಿಸಿ
tandem
2+1 ವರ್ಷಗಳ ವಾರಂಟಿ
ಡ್ರೈ ಐರನ್ 1000W
MRP ₹599 ₹299
₹300 ಉಳಿಸಿ
USHA
ಡ್ರೈ ಐರನ್ 1000W
MRP ₹900+ ₹579
₹321 ಉಳಿಸಿ
Prestige
2 ಬರ್ನರ್ ಗ್ಲಾಸ್ ಟಾಪ್ ಸ್ಟೌವ್
MRP ₹3995+ ₹2599
₹996 ಉಳಿಸಿ
tandem
2 ಬರ್ನರ್ ಗ್ಲಾಸ್ ಟಾಪ್ ಸ್ಟೌವ್
MRP ₹3599 ₹1499
₹2100 ಉಳಿಸಿ
2+1 ವರ್ಷಗಳ ವಾರಂಟಿ
ARISTOCRAT
ಮೀಡಿಯಂ ಟ್ರಾಲಿ ಬ್ಯಾಗ್
MRP ₹7200+ ₹1999
₹5201 ಉಳಿಸಿ
SAFARI
ಅಪ್‌ರೈಟ್ ಟ್ರಾಲಿ + ಡಫ್ಲ್ ಬ್ಯಾಗ್
MRP ₹11653+ ₹2999
₹8654 ಉಳಿಸಿ
ARISTOCRAT
7 ವರ್ಷಗಳ ವಾರಂಟಿ
8 ವ್ಹೀಲ್
ಅಪ್‌ರೈಟ್ ಟ್ರಾಲಿ ಬ್ಯಾಗ್ 3 ನ ಸೆಟ್ (ಕ್ಯಾಬಿನ್+ಮೀಡಿಯಂ+ಲಾರ್ಜ್ ಸೈಜ್)
MRP ₹18010+ ₹5949
₹12061 ಉಳಿಸಿ
ಲೇಟೆಸ್ಟ್ ಫ್ಯಾಷನ್
ಟೀ-ಶರ್ಟ್ ₹199 2 ಖರೀದಿಸಿ ₹349 ಗೆ
ಜೀನ್ಸ್ ₹499 2 ಖರೀದಿಸಿ ಪಡೆಯಿರಿ 1 ಟೀ-ಶರ್ಟ್ ಉಚಿತ ₹299
ಕುರ್ತಾ ₹599 2 ಖರೀದಿಸಿ ₹899 ಗೆ
ಟೀ-ಶರ್ಟ್ ₹199+ 3 ಖರೀದಿಸಿ ಪಡೆಯಿರಿ 1 ಉಚಿತ
ಜೀನ್ಸ್ ₹999 2 ಖರೀದಿಸಿ ಪಡೆಯಿರಿ 2 ಟೀ-ಶರ್ಟ್ ಉಚಿತ ₹299

‘ಭೂಮಿ ಮತ್ತು ವಸತಿ ಹಕ್ಕು ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಬಡವರಿಗೆ, ಆದಿವಾಸಿಗಳಿಗೆ ಭೂಮಿ ಮತ್ತು ವಸತಿ ಹಕ್ಕು ಕಲ್ಪಿಸಬೇಕು ಎಂದು ಆಗ್ರಹಿಸಿ ‘ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ’ ಕಾರ್ಯಕರ್ತರು ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಬರಿಹೊಟ್ಟೆ ಸತ್ಯಾಗ್ರಹ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಕಾರ್ಯಕರ್ತರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ಬರಿಹೊಟ್ಟೆ ಸತ್ಯಾಗ್ರಹಕ್ಕೆ ಚಾಲನೆ ನೀಡಿ ಮಾತನಾಡಿದ ಲೇಖಕಿ ವಿಜಯಾ, ‘ಬಡವರಿಗೆ ಭೂಮಿ ಮತ್ತು ನಿವೇಶನದ ಹಕ್ಕು ದೊರೆಯುವವರೆಗೂ ಹೋರಾಟ ಮುಂದುವರಿಸಲಾಗುವುದು. ನಮ್ಮ ಬೇಡಿಕೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಂಭೀರವಾಗಿ ಪರಿಗಣಿಸಿ ಉನ್ನತ ಮಟ್ಟದ ಸಭೆ ಕರೆಯುವವರೆಗೂ ಸತ್ಯಾಗ್ರಹ ಮುಂದುವರಿಸುತ್ತೇವೆ’ ಎಂದರು.



ಭೂಮಿ, ವಸತಿ ಹಕ್ಕು ನೀಡಬೇಕೆಂದು ಒತ್ತಾಯಿಸಿ ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿಯ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಕರ್ನಾಟಕ ಜನಶಕ್ತಿಯ ರಾಜ್ಯಾಧ್ಯಕ್ಷ ನೂರ್ ಶ್ರೀಧರ್, ‘ಭೂ ವಂಚಿತರಿಗೆ ಭೂಮಿ ಹಾಗೂ ಬಡವರಿಗೆ ವಸತಿ ಸೌಲಭ್ಯ ದೊರೆಯುವವರೆಗೂ ಈ ದೇಶಕ್ಕೆ ಪೂರ್ಣ ಸ್ವಾತಂತ್ರ್ಯ ದೊರೆಯದು. ಸ್ವಾತಂತ್ರ್ಯದ ಅರ್ಥ ಪರಿಪೂರ್ಣಗೊಳ್ಳಬೇಕಿದ್ದರೆ ಎಲ್ಲ ಬಡವರಿಗೂ ಭೂಮಿ ದೊರೆಯಬೇಕು. ಈ ಹಿಂದೆ ಆಡಳಿತ ನಡೆಸಿದ್ದ ಸಿದ್ದರಾಮಯ್ಯ ಸರ್ಕಾರ ಉನ್ನತ ಮಟ್ಟದ ಸಭೆ ನಡೆಸಿತ್ತು. ಬಡವರನ್ನು ಒಕ್ಕಲೆಬ್ಬಿಸಬಾರದು ಮತ್ತು ಅವರಿಗೆ ಭೂಮಿ ಹಕ್ಕು ನೀಡಲು ಅರ್ಜಿ ನಮೂನೆ 57 ಅನ್ನು ಸಿದ್ಧಪಡಿಸಿ, ಭರ್ತಿ ಮಾಡಿಸಿಕೊಂಡಿತ್ತು. ಆದರೆ, ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲಿಲ್ಲ’ ಎಂದು ದೂರಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ‘ರಾಜ್ಯದಲ್ಲಿ ಬಡವರಿಗೆ ಭೂಮಿ ಹಂಚಲು ಸಾಕಷ್ಟು ಭೂಮಿ ಇದೆ. ಕೇವಲ ಒಂದು ವಾರದಲ್ಲಿ ಬಡವರ ಭೂಮಿ, ವಸತಿ ಸಮಸ್ಯೆಯನ್ನು ಪರಿಹರಿಸಬಹುದು. ಆದರೆ, ಬಡವರ ವಿರೋಧಿ ಕಾಯ್ದೆಗಳನ್ನು ಜಾರಿಗೆ ತಂದು ವಂಚಿಸಲಾಗುತ್ತಿದೆ’ ಎಂದರು.

‘ಸಂಘ ಪರಿವಾರದವರು ಭೂಮಿಗಾಗಿ ಯಾವುದೇ ಅರ್ಜಿ ಹಾಕಿರಲಿಲ್ಲ. ಆದರೂ, ರಾಜ್ಯದ ಹಲವೆಡೆ ಸಂಘ ಪರಿವಾರಕ್ಕೆ ಭೂಮಿ ನೀಡಲಾಗಿದೆ. ಐದಾರು ದಶಕಗಳಿಂದ ಬಡವರು ಭೂಮಿ ಮತ್ತು ವಸತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಹಲವು ಬಾರಿ ಅರ್ಜಿಗಳನ್ನು ಸಲ್ಲಿಸಿದ್ದರೂ ಭೂಮಿ ನೀಡುತ್ತಿಲ್ಲ’ ಎಂದು ಹೇಳಿದರು.

ಆನ್‌ಲೈನ್ ಜೂಜಾಟದಲ್ಲಿ ₹4.50 ಲಕ್ಷ ಕಳೆದುಕೊಂಡಿದ್ದ ಮಹಿಳೆ

ಬುದ್ಧಿ ಹೇಳಿದ್ದಕ್ಕೆ ಮನೆ ತೊರೆದ ಪತ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಜೂಜಾಟದಲ್ಲಿ ₹ 4.50 ಲಕ್ಷ ಕಳೆದುಕೊಂಡಿದ್ದ ಮಹಿಳೆಯೊಬ್ಬರು ಇಬ್ಬರು ಮಕ್ಕಳು ಸಮೇತ ಮನೆ ತೊರೆದಿದ್ದು, ಮೂವರು ನಾಪತ್ತೆಯಾಗಿರುವ ಬಗ್ಗೆ ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಾಗಪುರ ನಿವಾಸಿಯಾಗಿರುವ ಮಹಿಳೆ ಹಾಗೂ ಇಬ್ಬರು ಮಕ್ಕಳು ನಾಪತ್ತೆಯಾಗಿದ್ದಾರೆ. ಮೂವರನ್ನು ಹುಡುಕಿಕೊಡುವಂತೆ ಮಹಿಳೆಯ ಪತಿ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಗೃಹಿಣಿಯಾಗಿದ್ದ ಮಹಿಳೆ, ಮೊಬೈಲ್ ಹೆಚ್ಚಾಗಿ ಬಳಸುತ್ತಿದ್ದರು. ಆನ್‌ಲೈನ್ ಜೂಜು ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದರು. ನಂತರ, ಹೆಚ್ಚು ಹೊತ್ತು ಆನ್‌ಲೈನ್ ಜೂಜಾಟದಲ್ಲಿ ತೊಡಗುತ್ತಿದ್ದರು. ಹಣ ಸಹ ಕಟ್ಟುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಆರಂಭದಲ್ಲಿ ತಮ್ಮ ಬಳಿ ಇದ್ದ ₹ 1.50 ಲಕ್ಷ ಹಣವನ್ನು ಮಹಿಳೆ ಜೂಜಾಟಕ್ಕೆ ಕಟ್ಟಿ ಸೋತಿದ್ದರು. ಪುನಃ ಹಣ ಬರಬಹುದೆಂದು ಮತ್ತೆ ಜೂಜು ಆಡಲು ಮುಂದಾಗಿದ್ದರು. ಚಿನ್ನಾಭರಣವನ್ನು ಗಿರವಿ ಇಟ್ಟು ಅದರಿಂದ ಬಂದ ಹಣವನ್ನು ಪುನಃ ಜೂಜಾಟಕ್ಕೆ ಕಟ್ಟಿದ್ದರು. ಇದೇ ರೀತಿಯಲ್ಲಿ ಹಂತ ಹಂತವಾಗಿ ₹ 4.50 ಲಕ್ಷ ಕಳೆದುಕೊಂಡಿದ್ದರು.’ ‘ವಿಷಯ ಗೊತ್ತಾಗುತ್ತಿದ್ದಂತೆ ಪತ್ನಿಯನ್ನು ತರಾಟೆಗೆ ತೆಗೆದುಕೊಂಡಿದ್ದ ದೂರುದಾರ, ‘ಆನ್‌ಲೈನ್ ಜೂಜಾಟ ಆಡಬೇಡ’ ಎಂದು ಬುದ್ಧಿವಾದ ಹೇಳಿದ್ದ. ಅಷ್ಟಕ್ಕೆ ಕೋಪಗೊಂಡ ಮಹಿಳೆ, ಮಕ್ಕಳಿಬ್ಬರ ಸಮೇತ ಮನೆ ಬಿಟ್ಟು ಹೋಗಿದ್ದಾಳೆ. ನೊಂದ ಪತಿ, ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ನಾಯಿಗಳ ಅನುಮಾನಾಸ್ಪದ ಸಾವು: ಪ್ರಕರಣ ದಾಖಲು

ಬೆಂಗಳೂರು: ರಾಜರಾಜೇಶ್ವರಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಬೀದಿನಾಯಿಗಳು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ನಾಯಿಗಳ ಸಾವಿನ ಬಗ್ಗೆ ವ್ಯಕ್ತಿಯೊಬ್ಬರು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮೂರು ನಾಯಿಗಳ ಕಳೇ ಬರ ಪತ್ತೆಯಾಗಿವೆ. ಅವುಗಳ ಮರಣೋತ್ತರ ಪರೀಕ್ಷೆ ನಡೆಸ ಲಾಗಿದ್ದು, ವರದಿ ಬರಬೇಕಿದೆ’ ಎಂದು ತಿಳಿಸಿದರು.

‘ರಾಜರಾಜೇಶ್ವರಿನಗರ, ಹೊಸಕೆರೆಹಳ್ಳಿ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ವಿಷವುಣಿಸಿ ಬೀದಿನಾಯಿಗಳನ್ನು ಕೊಲ್ಲಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ 18 ನಾಯಿಗಳು ಮೃತಪಟ್ಟಿವೆ ಎಂಬುದಾಗಿ ದೂರುದಾರರು ಹೇಳುತ್ತಿದ್ದಾರೆ. ಆದರೆ, ಸದ್ಯ ಮೂರು ನಾಯಿಗಳ ಕಳೇಬರ ಮಾತ್ರ ಸಿಕ್ಕಿವೆ’ ಎಂದರು.

‘ನಾಯಿಯ ಕುತ್ತಿಗೆಗೆ ಹಗ್ಗ ಬಿಗಿದು ಕೊಂದಿರುವ ದುಷ್ಕರ್ಮಿಗಳು, ಚೀಲದಲ್ಲಿ ತುಂಬಿ ನಿರ್ಜನ ಪ್ರದೇಶದಲ್ಲಿ ಎಸೆದು ಹೋಗಿದ್ದಾರೆ. ದುಷ್ಕರ್ಮಿಗಳು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದು ತಿಳಿಸಿದರು.

ಅನಧಿಕೃತ ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸದಿದ್ದರೆ ಕ್ರಮ: ಬಿಬಿಎಂಪಿ

ಜೆ.ಸಿ, ಸಿ.ಇಗೆ ತಲಾ ₹50 ಸಾವಿರ ವಸೂಲಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಟಿಪ್ಪಣಿ, ಸುತ್ತೋಲೆ ಹೊರಡಿಸಿದ್ದರೂ ತೆರವಾಗದ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್
- ಕರ್ತವ್ಯಲೋಪಕ್ಕೆ ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳೇ ಹೊಣೆ

ಬೆಂಗಳೂರು: ನಗರದಲ್ಲಿ ಅನಧಿಕೃತ ಫ್ಲೆಕ್ಸ್, ಹೋರ್ಡಿಂಗ್, ಬ್ಯಾನರ್‌ಗಳು ಉಳಿದರೆ ಅದಕ್ಕೆ ಆಯಾ ವಲಯದ ಜಂಟಿ ಆಯುಕ್ತ, ಮುಖ್ಯ ಎಂಜಿನಿಯರ್ ಅವರೇ ಹೊಣೆ. ಅವರಿಂದ ತಲಾ ₹50 ಸಾವಿರ ಠೇವಣಿ ವಸೂಲಿ ಮಾಡಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಅಳವಡಿಸಿರುವ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್ ಇತ್ಯಾದಿಗಳನ್ನು ನಿಯಮಾನುಸಾರ ತೆರವುಗೊಳಿಸಬೇಕು. ಇವುಗಳನ್ನು ಅಳವಡಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಫೆಬ್ರುವರಿ 17, ಆಗಸ್ಟ್ 8 ಮತ್ತು 10ರಂದು ಟಿಪ್ಪಣಿ, ಸುತ್ತೋಲೆಗಳ ಮೂಲಕ ಮುಖ್ಯ ಆಯುಕ್ತರು ಸೂಚಿಸಿದ್ದರು. ಆದರೂ ಸಂಪೂರ್ಣವಾಗಿ ತೆರವಾಗಿಲ್ಲ.

ಹೀಗಾಗಿ, ಆಗಸ್ಟ್ 14ರಂದು ಆದೇಶ ಹೊರಡಿಸಿರುವ ತುಷಾರ್ ಗಿರಿನಾಥ್, ‘ಅನಧಿಕೃತ ಫ್ಲೆಕ್ಸ್, ಬ್ಯಾನರ್, ಎಲ್‌ಇಡಿ ಇತರೆ ಜಾಹೀರಾತು ಫಲಕಗಳನ್ನು ತೆರವುಗೊಳಿಸಬೇಕು. ಈ ಬಗ್ಗೆ ಕೈಗೊಂಡ ಕ್ರಮಗಳ ಕುರಿತ ಅಂಕಿ–ಅಂಶಗಳನ್ನು ದಾಖಲೆ ಸಹಿತ ಅನುಪಾಲನಾ ವರದಿಯನ್ನು ಆ.16ರೊಳಗೆ ಸಲ್ಲಿಸಲು ಸೂಚಿಸಿದ್ದಾರೆ. ಇದಾಗದಿದ್ದರೆ, ಹೈಕೋರ್ಟ್ ಆದೇಶದ ಉಲ್ಲಂಘನೆಯಾಗುತ್ತದೆ. ಕರ್ತವ್ಯ ಲೋಪದಿಂದ ಎದುರಾಗುವ ಪರಿಣಾಮಗಳಿಗೆ ಜಂಟಿ ಆಯುಕ್ತರು ಹಾಗೂ ಮುಖ್ಯ ಎಂಜಿನಿಯರ್‌ಗಳನ್ನು ವೈಯಕ್ತಿಕ ಜವಾಬ್ದಾರರನ್ನಾಗಿಸಲು ಸೂಚಿಸಿದ್ದಾರೆ.

ಅನಧಿಕೃತ ಫ್ಲೆಕ್ಸ್, ಬ್ಯಾನರ್, ಜಾಹೀರಾತುಗಳನ್ನು ತೆರವುಗೊಳಿಸದ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ತಲಾ ₹50 ಸಾವಿರ ಠೇವಣಿಯನ್ನು ವಸೂಲಿ ಮಾಡಿ ನ್ಯಾಯಾಲಯದಲ್ಲಿ ಇರಿಸಲಾಗುವುದು. ಆದ್ದರಿಂದ, ಈ ಕೂಡಲೇ ಪಾಲಿಕೆಯ ಎಲ್ಲ ವಲಯ ಆಯುಕ್ತರು ತಮ್ಮ ವ್ಯಾಪ್ತಿಯಲ್ಲಿ ತೆರವು ಕಾರ್ಯಾಚರಣೆ ನಡೆಸಬೇಕು ಎಂದು ಆದೇಶಿಸಿದ್ದಾರೆ.

ಎಂಟು ವಲಯಗಳ ಆಯುಕ್ತರು, ಹಣಕಾಸು, ಆಡಳಿತ, ಕಂದಾಯ, ಜಾಹೀರಾತು ವಿಭಾಗದ ವಿಶೇಷ ಆಯುಕ್ತರು, ಎಲ್ಲ ವಲಯಗಳ ಜಂಟಿ ಆಯುಕ್ತರು, ಜಾಹೀರಾತು ವಿಭಾಗದ ಉಪ ಆಯುಕ್ತರು, ಎಲ್ಲ ವಲಯಗಳ ಮುಖ್ಯ ಎಂಜಿನಿಯರ್‌ಗಳು, ಜಾಹೀರಾತು ವಿಭಾಗದ ಸಹಾಯಕ ಆಯುಕ್ತರಿಗೆ ಆದೇಶದ ಪ್ರತಿಯನ್ನು ಕಳುಹಿಸಿ, ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ.

ಗೋಕಟ್ಟೆ ದುರಂತ: ₹2 ಲಕ್ಷ ಪರಿಹಾರ

ತುಮಕೂರು: ಸಿದ್ಧಗಂಗಾ ಮಠದ ಗೋ ಕಟ್ಟೆಗೆ ಬಿದ್ದು ಮೃತಪಟ್ಟ ಕುಟುಂಬಕ್ಕೆ ತಲಾ ₹2 ಲಕ್ಷ ಪರಿಹಾರ ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಪ್ರಕಟಿಸಿದರು.

ಮಠದ ಗೋ ಕಟ್ಟೆಗೆ ಬಿದ್ದು ನಾಲ್ವರು ಮೃತಪಟ್ಟಿರುವ ಸ್ಥಳಕ್ಕೆ ಸೋಮವಾರ ಭೇಟಿನೀಡಿ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಪರಿಹಾರ ವಿತರಣೆಗೆ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ ಎಂದರು.

ಸಿದ್ಧಗಂಗಾ ಮಠದಲ್ಲಿ ಇಂತಹ ಅವಘಡ ನಡೆಯಬಾರದಿತ್ತು. ದುರಾದೃಷ್ಟವಶಾತ್ ಈ ಘಟನೆ ನಡೆದು ಹೋಗಿದೆ. ಗೋ ಕಟ್ಟೆ ಸುತ್ತಲೂ ಮುಳ್ಳು ತಂತಿ ಬೇಲಿ ನಿರ್ಮಿಸಲು ಈಗಾಗಲೇ ಮಠದವರು ಸಿದ್ಧತೆ ಮಾಡಿಕೊಂಡಿದ್ದಾರೆ. ಈ ಕಾರ್ಯವನ್ನು ಮಠದವರೇ ಮುಂದುವರಿ ಸಲಿದ್ದಾರೆ. ಇದರಲ್ಲಿ ಸರ್ಕಾರದ ಪಾತ್ರ ಇರುವುದಿಲ್ಲ ಎಂದರು.

‘ನಟ ಉಪೇಂದ್ರ ವಿರುದ್ಧ ಪ್ರಕರಣ ದಾಖಲಾಗಿರುವ ವಿಚಾರದ ಬಗ್ಗೆ ಮಾಹಿತಿ ಇಲ್ಲ. ಆ ಬಗ್ಗೆ ತಿಳಿದುಕೊಂಡು ಮಾತನಾಡುತ್ತೇನೆ’ ಎಂದರು.

ನಿಧನ ವಾರ್ತೆ

ಯಶೋದಮ್ಮ



ಮೈಸೂರು: ಇಲ್ಲಿನ ಆರ್.ಎಸ್.ನಾಯ್ಡು ನಗರದ ನಿವಾಸಿ ಯಶೋದಮ್ಮ (79) ಅವರು ನಗರದ ನಾರಾಯಣ ಹೃದಯಾಲಯದಲ್ಲಿ ಸೋಮವಾರ ಬೆಳಿಗ್ಗೆ ನಿಧನರಾದರು.

ಕೆಲ ದಿನಗಳಿಂದ ಅವರು ಚಿಕಿತ್ಸೆ ಪಡೆಯುತ್ತಿದ್ದರು.

ಮೃತರಿಗೆ, ಐಎಎಸ್ ಅಧಿಕಾರಿ, ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ. ಆರ್.ರವಿ ಸೇರಿದಂತೆ ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರಿದ್ದಾರೆ.

ಅಂತ್ಯಕ್ರಿಯೆ ಗಾಂಧಿ ನಗರದ ಮಹದೇವಪುರ ರಸ್ತೆಯಲ್ಲಿರುವ ಆದಿ ಕರ್ನಾಟಕ ಸಮುದಾಯದ ರುದ್ರಭೂಮಿಯಲ್ಲಿ ಮಂಗಳವಾರ ಬೆಳಿಗ್ಗೆ 11ಕ್ಕೆ (ಇಂದು) ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಟ ಉಪೇಂದ್ರ ವಿರುದ್ಧ ಜಾತಿ ನಿಂದನೆ ಆರೋಪ • ವಿಚಾರಣೆ ಸೆಪ್ಟೆಂಬರ್ ಎರಡನೇ ವಾರಕ್ಕೆ ಮುಂದೂಡಿಕೆ

ಒಂದು ಎಫ್‌ಐಆರ್‌ಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಜಾತಿ ನಿಂದನೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರನಟ ಉಪೇಂದ್ರ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಉಪೇಂದ್ರ ಅಲಿಯಾಸ್ ಬಿ.ಎಂ. ಉಪೇಂದ್ರ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಉಪೇಂದ್ರ ಪರ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಅರ್ಜಿದಾರರು ಗಾದೆ ಮಾತನ್ನು ಮಾತ್ರವೇ ಉಲ್ಲೇಖಿಸಿದ್ದಾರೆ. ಮಾತಿನ ಹಿಂದೆ ಬೇರೆ ಯಾವುದೇ ದುರುದ್ದೇಶ ಇರಲಿಲ್ಲ. ಆದ್ದರಿಂದ, ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ಬರಿ ಇದೊಂದೇ ಗಾದೆ ಮಾತು ಪ್ರಯೋಗಿಸಿದರೋ ಹೇಗೆ' ಎಂಬುದನ್ನು ಖಚಿತಪಡಿಸಿಕೊಂಡು ಪ್ರಕರಣದ ವಿವರ ಆಲಿಸಿತು. ನಂತರ ಅರ್ಜಿದಾರರ ಮನವಿಯನ್ನು ಪುರಸ್ಕರಿಸಿ ಎಫ್‌ಐಆರ್‌ಗೆ ಮಧ್ಯಂತರ ತಡೆ ನೀಡಿ ಆದೇಶಿಸಿತು. ಇದೇ ವೇಳೆ ದೂರುದಾರರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಸೆಪ್ಟೆಂಬರ್ ಎರಡನೇ ವಾರಕ್ಕೆ ಮುಂದೂಡಿತು.

ಪ್ರಕರಣವೇನು?: ಉಪೇಂದ್ರ ಅವರು, ಸಾಮಾಜಿಕ ಜಾಲತಾಣದ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಮಾತನಾಡುವ ವೇಳೆ 'ಊರೆಂದರೆ...' ಎಂಬ ಸಾಲನ್ನು ಪ್ರಯೋಗಿಸುವ ಮೂಲಕ ದಲಿತ ಸಮಾಜದಲ್ಲಿನ ಜಾತಿ ಭಾವನೆಗಳಿಗೆ ಘಾಸಿ ಉಂಟು ಮಾಡಿದ್ದಾರೆ. ಅವರ ವಿರುದ್ಧ ಎಸ್ಸಿ-ಎಸ್ಟಿ ದೌರ್ಜನ್ಯ ನಿಯಂತ್ರಣ ಕಾಯ್ದೆ ಅಡಿ ಕ್ರಮ ಕೈಗೊಳ್ಳುವಂತೆ ಕೋರಿ ಬೆಂಗಳೂರಿನ ಸಮತಾ ಸೈನಿಕ ದಳದ ಗೋಪಾಲ ಗಿರಿಯಪ್ಪ ಮತ್ತು ಬನಶಂಕರಿ ನಾಗು ಪತ್ರಮುಖೇನ ಸಮಾಜ ಕಲ್ಯಾಣ ಇಲಾಖೆಗೆ ಮನವಿ ಮಾಡಿದ್ದರು.

ಇದರನ್ವಯ, ಬೆಂಗಳೂರು ದಕ್ಷಿಣ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಎನ್. ಮಧುಸೂಧನ್, ಚೆನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಇದೇ 13ರಂದು ದೂರು ದಾಖಲಿಸಿದ್ದರು. ಇದನ್ನು ಆಧರಿಸಿ ಎಫ್‌ಐಆರ್ ದಾಖಲಾಗಿದೆ.

ಮತ್ತೊಂದು ಎಫ್‌ಐಆರ್

ಜಾತಿ ನಿಂದನೆ ಆರೋಪದಡಿ ನಟ ಉಪೇಂದ್ರ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಆಧರಿಸಿ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಉಪೇಂದ್ರ ವಿರುದ್ಧ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆಯಲ್ಲಿ ಭಾನುವಾರ ಮೊದಲ ಎಫ್‌ಐಆರ್ ದಾಖಲಾಗಿತ್ತು. ಇದರ ಬೆನ್ನಲ್ಲೇ ಎರಡನೇ ಎಫ್‌ಐಆರ್ ದಾಖಲಾಗಿದ್ದು, ವಿಚಾರಣೆಗೆ ಹಾಜರಾಗುವಂತೆ ನಟ ಉಪೇಂದ್ರ ಅವರಿಗೆ ಪೊಲೀಸರು ನೋಟಿಸ್ ನೀಡಿದ್ದಾರೆ.

'ಕರ್ನಾಟಕ ರಣಧೀರ ಪಡೆಯ ರಾಜ್ಯ ಘಟಕದ ಅಧ್ಯಕ್ಷ ಬೈರಪ್ಪ ಹರೀಶ್‌ಕುಮಾರ್ ಅವರು ದೂರು ನೀಡಿದ್ದಾರೆ. ಅದರನ್ವಯ ಉಪೇಂದ್ರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೊಬೈಲ್ ಸ್ವಿಚ್ ಆಫ್: 'ಪ್ರಕರಣ ದಾಖಲಾದ ಬೆನ್ನಲ್ಲೇ ನಟ ಉಪೇಂದ್ರ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾರೆ. ನೋಟಿಸ್ ನೀಡಿದರೂ ವಿಚಾರಣೆಗೆ ಹಾಜರಾಗಿಲ್ಲ.



ಸ್ವಾತಂತ್ರ್ಯೋತ್ಸವದ ಅಂಗವಾಗಿ ಬಸವನಗುಡಿಯ ಅಂಗಡಿಯೊಂದರಲ್ಲಿ ಈಚೆಗೆ ಗೊಂಬೆಗಳಿಗೆ ತ್ರಿವರ್ಣ ವಸ್ತ್ರ ತೊಡಿಸಲಾಯಿತು

ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಹೈಕೋರ್ಟ್ ಕಟ್ಟಡ ವಿಸ್ತರಣೆ; ಸ್ಥಳಕ್ಕೆ ಪ್ರಸ್ತಾವನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ವಿಸ್ತರಣೆಗೆ ಹೆಚ್ಚಿನ ಸ್ಥಳಾವಕಾಶ ಒದಗಿಸುವುದಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಯನ್ನು ಕೋರುವ ಪ್ರಸ್ತಾವನೆ ಒಂದಕ್ಕಿಂತ ಹೆಚ್ಚು ಇರುವುದು ಅಗತ್ಯ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಕುರಿತ ಎರಡು ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ಆಲಿಸಿದ ನ್ಯಾಯಪೀಠ, 'ಒಂದು ಪ್ರಸ್ತಾವನೆ ಸಲ್ಲಿಸಿದರೆ ಸಾಕಾಗುವುದಿಲ್ಲ. ಕನಿಷ್ಠ ಮೂರು ಪ್ರಸ್ತಾವನೆಗಳನ್ನಾದರೂ ಸಲ್ಲಿಸಿ. ಆಗ ಮನವಿ ಪರಿಗಣಿಸಲು ಹೆಚ್ಚಿನ ಅವಕಾಶಗಳು ಇರುತ್ತವೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಮುಂದಿನ ಮೂರು ವಾರಗಳಲ್ಲಿ ಮುಖ್ಯಮಂತ್ರಿಗೆ ಮೂರು ಪ್ರಸ್ತಾವನೆಗಳನ್ನು ಸಲ್ಲಿಸಬೇಕು. ನಂತರದ ಎರಡು ವಾರಗಳಲ್ಲಿ ಆ ಪ್ರಸ್ತಾವನೆಗಳ ಬಗ್ಗೆ ಮುಖ್ಯಮಂತ್ರಿ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳಬೇಕು' ಎಂದು ನಿರ್ದೇಶಿಸಿತು.

'ಸಲ್ಲಿಸಲಾಗುವ ಮೂರು ಪ್ರಸ್ತಾವನೆಗಳ ಪ್ರತಿಯನ್ನು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೂ ಒದಗಿಸಬೇಕು. ಆ ಪ್ರತಿಗಳನ್ನು ರಿಜಿಸ್ಟ್ರಾರ್ ಜನರಲ್ ಹೈಕೋರ್ಟ್ ಕಟ್ಟಡ ಸಮಿತಿಯ ಮುಂದಿಡಬೇಕು. ಸಮಿತಿ ನೀಡುವ ಪ್ರತಿಕ್ರಿಯೆಯನ್ನೂ ಮುಖ್ಯಮಂತ್ರಿಗೆ ಸಲ್ಲಿಸಬೇಕು. ಇದರಿಂದ ಸಮಿತಿಯ ಪ್ರತಿಕ್ರಿಯೆಯನ್ನು ಪರಿಗಣಿಸಲು ಸಹಕಾರಿ ಆಗುತ್ತದೆ' ಎಂದು ತಿಳಿಸಿದೆ.

'ಹೈಕೋರ್ಟ್ ಕಟ್ಟಡದ ನೆಲಮಹಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಚೇರಿಗಳನ್ನು ಹತ್ತಿರದ ಕಟ್ಟಡಕ್ಕೆ ಸ್ಥಳಾಂತರಿಸಲು ಪರಿಸರ ನಿರಾಕ್ಷೇಪಣಾ ಪತ್ರ ಪಡೆಯಲು ಸರ್ಕಾರ ಕಾರ್ಯೋನ್ಮುಖವಾಗಬೇಕು' ಎಂದೂ ನಿರ್ದೇಶಿಸಲಾಗಿದೆ. ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಹಾಜರಾಗಿದ್ದರು.

ಅರ್ಜಿ: 'ಬೆಂಗಳೂರಿನ ಹೈಕೋರ್ಟ್ ಪ್ರಧಾನ ಪೀಠದ ಕಟ್ಟಡದ ನೆಲಮಹಡಿಯಲ್ಲಿ ಇರುವ ಕಚೇರಿಗಳನ್ನು ಸ್ಥಳಾಂತರಿಸಲು ಸೂಕ್ತ ಆದೇಶ ಹೊರಡಿಸಬೇಕು' ಎಂದು ಕೋರಿ ವಕೀಲ ಎಲ್. ರಮೇಶ್ ನಾಯಕ್ ಮತ್ತು 'ಹೈಕೋರ್ಟ್ ಕಟ್ಟಡ ಸಂಕೀರ್ಣಕ್ಕೆ ಬೆಂಗಳೂರಿನ ಕೇಂದ್ರ ಭಾಗದಲ್ಲಿ 30ಕ್ಕೂ ಹೆಚ್ಚು ಎಕರೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಶರಣ ದೇಸಾಯಿ ಈ ಪಿಐಎಲ್‌ಗಳನ್ನು ಸಲ್ಲಿಸಿದ್ದಾರೆ.

ಸೊಸೈಟಿ ಮಂಡಳಿ ವಜಾಗೆ ತಡೆಯಾಜ್ಞೆ

ಬೆಂಗಳೂರು: ಪೋಸ್ಟಲ್ ಆ್ಯಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೊ-ಆಪರೇಟಿವ್ ಸೊಸೈಟಿ ಆಡಳಿತ ಮಂಡಳಿಯನ್ನು ಐದು ವರ್ಷ ವಜಾಗೊಳಿಸಿದ್ದ ಸಹಕಾರ ಸೊಸೈಟಿಗಳ ರಿಜಿಸ್ಟ್ರಾರ್ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಸದಸ್ಯರಿಗೆ ನಿವೇಶನ ಹಂಚಿಕೆ ವಿಳಂಬ ಹಾಗೂ ಸೊಸೈಟಿಗಾಗಿ ಖರೀದಿಸಿದ್ದ ಭೂಮಿ ಬದಲಾಯಿಸಿಕೊಂಡಿರುವುದು ಅಕ್ರಮ ಎಂದು ಹೇಳಿ ಆಡಳಿತ ಮಂಡಳಿಯನ್ನು ರಿಜಿಸ್ಟ್ರಾರ್ ಕ್ಯಾ. ಕೆ. ರಾಜೇಂದ್ರ ತೀರ್ಪು ಜುಲೈ 20ರಂದು ವಜಾಗೊಳಿಸಿದ್ದರು. ಈ ತೀರ್ಪಿಗೆ ಹೈಕೋರ್ಟ್ ತಡೆ ನೀಡಿದೆ.

'ಕೆಂಪೇಗೌಡ ಬಡಾವಣೆ: ಮೂಲಸೌಕರ್ಯ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡಿಎ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಕೊರತೆ ಎದ್ದು ಕಾಣುತ್ತಿದೆ. ಯಾರೊಬ್ಬರಿಗೂ ಅನುಕೂಲವಾಗುವಂತೆ ಕಾಮಗಾರಿ ನಡೆದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬಡಾವಣೆಯ ಕಾಮಗಾರಿಗಳನ್ನು ಸೋಮವಾರ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

'ಭೂಮಿ ಕಳೆದುಕೊಂಡವರು, ನಿವೇಶನದಾರರು, ಬಿಡಿಎ ಸೇರಿದಂತೆ ಯಾರೊಬ್ಬರಿಗೂ ಅನುಕೂಲವಾಗುವ ಕೆಲಸ ಆಗಿಲ್ಲ. ಸ್ಥಳೀಯ ಶಾಸಕರು ಅನೇಕ ಸಮಸ್ಯೆ ಹೇಳಿದ್ದಾರೆ. ಈ ಭಾಗದಲ್ಲಿ ವಿದ್ಯುತ್ ಸಂಪರ್ಕ, ಚರಂಡಿ, ಕುಡಿಯುವ ನೀರು ಕಲ್ಪಿಸಬೇಕು ಎಂದು ಕೇಳಿದ್ದಾರೆ. ಮೂಲಸೌಕರ್ಯ ಕೊರತೆಯಿಂದ ಮನೆ ನಿರ್ಮಿಸಲು ನಿವೇಶನದಾರರಿಗೆ ಸಾಧ್ಯವಾಗುತ್ತಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ಅಧಿಕಾರಿಗಳು ತಮ್ಮದೇ ಆದ ಉತ್ತರ ನೀಡಿದ್ದಾರೆ. ಈ ಲೇಔಟ್‌ನಲ್ಲಿ ಸರ್ಕಾರದಿಂದ ಕೇವಲ ಶೇ 60ರಷ್ಟು ಭೂಮಿ ಸ್ವಾಧೀನ ಆಗಿದೆ. ಪರಿಹಾರ ಕ್ರಮದ ಬಗ್ಗೆ ಕಂದಾಯ ಇಲಾಖೆ ಹಾಗೂ ಕಾನೂನು ತಜ್ಞರ ಜತೆ ಚರ್ಚೆ ಮಾಡುತ್ತೇನೆ' ಎಂದರು.

'ಯಶವಂತಪುರ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದ ವತಿಯಿಂದ ಎಲ್ಲ ರೀತಿಯ ಸಹಕಾರ ನೀಡಲು ಬದ್ಧ. ಎಲ್ಲರೂ ಒಟ್ಟಾಗಿ ಕೆಲಸ ಮಾಡಿ ಕೆಂಪೇಗೌಡ ನಗರವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗಬೇಕು' ಎಂದರು.

ಯಶವಂತಪುರ ವಿಧಾನಸಭೆ ಕ್ಷೇತ್ರ ಶಾಸಕ ಎಸ್.ಟಿ. ಸೋಮಶೇಖರ್, ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್, ಆಯುಕ್ತ ಜಿ. ಕುಮಾರ ನಾಯಕ, ಕಾರ್ಯದರ್ಶಿ ವೈ.ಬಿ. ಶಾಂತರಾಜು ಇದ್ದರು.

'ತೆರವು ಕಾರ್ಯಾಚರಣೆ ನಾಮ್ ಕೆ ವಾಸ್ತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಅನಧಿಕೃತ ಕಟ್ಟಡಗಳ ತೆರವಿಗೆ ನಾಮ್ ಕೆ ವಾಸ್ತೆ ಕಾರ್ಯಾಚರಣೆಯಿಂದ ಪ್ರಯೋಜವಿಲ್ಲ' ಎಂದು ಹೈಕೋರ್ಟ್ ಕಿಡಿ ಕಾರಿದೆ.

ಈ ಕುರಿತಂತೆ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೈಕೋರ್ಟ್‌ನ ಈ ಹಿಂದಿನ ಆದೇಶಗಳ ಪಾಲನೆ ಬಗ್ಗೆ ಬಿಬಿಎಂಪಿ ಸಲ್ಲಿಸಿದ್ದ ವರದಿಯನ್ನು, ಪರಿಶೀಲಿಸಿದ ನ್ಯಾಯಪೀಠ, 'ಅನಧಿಕೃತ ಕಟ್ಟಡಗಳಿಗೆ ನೋಟಿಸ್ ನೀಡಿ ಮೌನ ವಹಿಸಲಾಗಿದೆ. ಕೆಲವೇ ಕೆಲವು ವ್ಯಕ್ತಿಗಳ ವಿರುದ್ಧ, ಅದರಲ್ಲೂ ಆರ್ಥಿಕವಾಗಿ ಶಕ್ತಿವಂತರಲ್ಲದ, ಬಡವರ ವಿರುದ್ಧ ನಾಮ್ ಕೆ ವಾಸ್ತೆ ತೆರವು ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ' ಎಂದು ನ್ಯಾಯಪೀಠ ಪಾಲಿಕೆಯನ್ನು ತರಾಟೆಗೆ ತೆಗೆದುಕೊಂಡಿತು.

'ತೆರವು ಕಾರ್ಯ ಕೈಗೊಳ್ಳಲು ಹೆಚ್ಚುವರಿ ಮಾನವ ಸಂಪನ್ಮೂಲ ಒದಗಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಲಾಗಿತ್ತು. ಆದರೆ, ಆ ನಿರ್ದೇಶನ ಪಾಲನೆ ಆಗಿದೆಯೋ ಇಲ್ಲವೋ ಎಂಬುದನ್ನು ಇನ್ನೂ ತಿಳಿಸಿಲ್ಲ' ಎಂದು ಅಸಮಾಧಾನ ಹೊರಹಾಕಿತು.

'ಬೆಂಗಳೂರು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ನಗರವಾಗಿದೆ. ಕಟ್ಟಡಗಳ ನಿರ್ಮಾಣ ನಿರಂತರವಾಗಿ ನಡೆಯುತ್ತಿರುತ್ತದೆ. ಅವುಗಳನ್ನು ರಾತ್ರೋರಾತ್ರಿ ನಿಲ್ಲಿಸಲಾಗದು. ಮೇಲ್ವಿಚಾರಣೆಗೆ ನಿರಂತರ ಮತ್ತು ಸಮಗ್ರ ಕ್ರಮ ಅಗತ್ಯವಿದೆ. ಈ ನಿಟ್ಟಿನಲ್ಲಿ ಬಿಬಿಎಂಪಿ ಮತ್ತು ಸರ್ಕಾರ ಸೇರಿದಂತೆ ಎಲ್ಲ ಬಾಧ್ಯಸ್ಥರೂ ಒಟ್ಟಾಗಿ ಕ್ರಮ ಕೈಗೊಳ್ಳಬೇಕು ಎಂಬುದು ಕೋರ್ಟ್ ನಿರೀಕ್ಷೆ' ಎಂದು ಹೇಳಿತು.

'ಮೂರು ವಾರಗಳಲ್ಲಿ ಬಿಬಿಎಂಪಿ ಮತ್ತು ರಾಜ್ಯ ಸರ್ಕಾರ ಸೇರಿದಂತೆ ಸಂಬಂಧಿಸಿದ ಸಂಸ್ಥೆಗಳು ಸಭೆ ನಡೆಸಿ ಸಮಗ್ರ ಕ್ರಿಯಾ ಯೋಜನೆ ಹಾಗೂ ಈ ಹಿಂದಿನ ಆದೇಶಗಳ ಅನುಪಾಲನಾ ವರದಿಯನ್ನೂ ಸಲ್ಲಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಪ್ರಕರಣದಲ್ಲಿ ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಆಗಿ ಹಿರಿಯ ವಕೀಲ ಪ್ರಮೋದ್ ಕಠಾವಿ ಅವರನ್ನು ನೇಮಕ ಮಾಡಲಾಗಿದೆ.

ಹಿಂದಿನ ಆದೇಶ ಏನಿತ್ತು?

- ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು 2019ರ ನವೆಂಬರ್ 25ರಂದು ಬಿಬಿಎಂಪಿ ಮತ್ತು ರಾಜ್ಯ ಸರ್ಕಾರಕ್ಕೆ ಸರಣಿ ನಿರ್ದೇಶನಗಳನ್ನು ನೀಡಿತ್ತು.
- ಬಿಬಿಎಂಪಿ ಹಂತ ಹಂತವಾಗಿ ಅನಧಿಕೃತ ಕಟ್ಟಡಗಳ ಸರ್ವೆ ಮಾಡಬೇಕು. ಅವುಗಳ ತೆರವು ಕಾರ್ಯಾಚರಣೆಗೆ ಕ್ರಿಯಾ ಯೋಜನೆ ರೂಪಿಸಬೇಕು.
- ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಪಾಲಿಕೆಯಲ್ಲಿ ಅಗತ್ಯ ಸಿಬ್ಬಂದಿ ಇಲ್ಲದಿರುವ ಕಾರಣ ಸರ್ಕಾರವು ಪಾಲಿಕೆಗೆ ಅಗತ್ಯ ಯಂತ್ರೋಪಕರಣ ಹಾಗೂ ಮಾನವ ಸಂಪನ್ಮೂಲ ಒದಗಿಸಬೇಕು.
- ಈ ಕುರಿತು ಪಾಲಿಕೆ ಸರ್ಕಾರಕ್ಕೆ ಸಮಗ್ರವಾದ ಪ್ರಸ್ತಾವ ಸಲ್ಲಿಸಬೇಕು.

ಉದ್ಯೋಗಿ ಅಮಾನತು: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಧ್ಯಮಗಳ ಮುಂದೆ ತಮ್ಮ ಸಮಸ್ಯೆ ಕುರಿತು ಹೇಳಿಕೆ ನೀಡಿದ್ದಾರೆ ಎನ್ನುವ ಕಾರಣಕ್ಕೆ ಬಿಎಂಟಿಸಿ ಉದ್ಯೋಗಿಯನ್ನು ಅಮಾನತು ಮಾಡಿರುವುದನ್ನು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಖಂಡಿಸಿದೆ.

ನಿರ್ವಾಹಕ ರಂಗನಾಥ್ ಎಂಬವರು ಬಸ್ ಡಿಪೊದಲ್ಲಿ ವಿಷ ಸೇವಿಸಿದ್ದ ಸಂದರ್ಭದಲ್ಲಿ ಮಾಧ್ಯಮದವರು ಬಿಎಂಟಿಸಿ ಉದ್ಯೋಗಿ ಬಿ.ಎಸ್. ರಜನಿಕಾಂತ್ ಅವರನ್ನು ಮಾತನಾಡಿಸಿದ್ದರು. 'ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ರಜೆ, ಇತರ ಸಮಸ್ಯೆಗಳ ಬಗ್ಗೆ ಎಂ.ಡಿ ಮೇಡಂ ಅವರು ಸಂಘಟನೆ ಜೊತೆಗೆ ಮಾತನಾಡಿ ಸಮಸ್ಯೆ ಪರಿಹರಿಸಬೇಕು' ಎಂದು ಆಗ ಹೇಳಿಕೆ ನೀಡಿದ್ದರು. ಸಮಸ್ಯೆಯನ್ನು ಬಗೆಹರಿಸುವುದು ಬಿಟ್ಟು ಇದನ್ನೇ ಕಾರಣವಾಗಿ ಇಟ್ಟುಕೊಂಡು ಅಮಾನತು ಮಾಡಿರುವುದು ಸರಿ ಅಲ್ಲ' ಎಂದು ಫೆಡರೇಶನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ ತಿಳಿಸಿದ್ದಾರೆ.

ಜಾಥಾ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಮಣ್ಣು ನನ್ನ ದೇಶ' ಅಭಿಯಾನದ ಅಂಗವಾಗಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆ.15ರಂದು ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಡೆಯುತ್ತಿರುವ ಅಭಿಯಾನದಲ್ಲಿ ಸಂಘದ ಸದಸ್ಯರು ಭಾಗವಹಿಸುತ್ತಿದ್ದಾರೆ. ಬಿಬಿಎಂಪಿ ಕೇಂದ್ರ ಕಚೇರಿಯಿಂದ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಕಾಲ್ನಡಿಗೆ ಆರಂಭವಾಗಲಿದೆ. ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಗಾಂಧೀಜಿ ಪ್ರತಿಮೆಯಿಂದ ಮಾಲಾರ್ಪಣೆ ಮಾಡುವುದರೊಂದಿಗೆ ಜಾಥಾ ಕಾರ್ಯಕ್ರಮ ಮುಗಿಯಲಿದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಕಮಿಷನ್ ಆರೋಪ: ಬಿಜೆಪಿ ವಿರುದ್ಧ ಡಿಸಿಎಂ ಡಿ.ಕೆ ಶಿವಕುಮಾರ್ ವಾಗ್ದಾಳಿ

'ಆರೋಪ ಮಾಡಿ ಹೆದರಿಸಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಮಿಷನ್ ಹೆಸರಿನಲ್ಲಿ ಸುಳ್ಳು ಆರೋಪ ಮಾಡಿ ಹೆದರಿಸಲು ವಿರೋಧ ಪಕ್ಷದವರು ಯತ್ನಿಸುತ್ತಿದ್ದಾರೆ. ಯಾರನ್ನೋ ಹೆದರಿಸಿದಂತೆ ನನ್ನನ್ನು ಹೆದರಿಸಲು ಆಗದು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸೋಮವಾರ ನಡೆದ ಕೆಪಿಸಿಸಿ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, 'ಕಮಿಷನ್ ಆರೋಪ ಎಲ್ಲಿಂದ ಬಂತು? ಕಾಮಗಾರಿಗಳ ನೈಜತೆ ಪರಿಶೀಲಿಸಿ ಬಿಲ್ ಪಾವತಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ತನಿಖೆಗಾಗಿ ಐಎಎಸ್ ಅಧಿಕಾರಿಗಳ ಸಮಿತಿ ರಚಿಸಲಾಗಿದೆ. ವರದಿ ಬರಲಿ, ಗೊತ್ತಾಗುತ್ತದೆ' ಎಂದರು.

ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಮಾಡಿದೆ. ಸಹಿಸಿಕೊಳ್ಳಲಾಗದ ಬಿಜೆಪಿ ಸರ್ಕಾರದ ವಿರುದ್ಧ ಸುಳ್ಳು ಆರೋಪ ಮಾಡುತ್ತಿದೆ. ಅವರು ಆರೋಪವನ್ನು ಸಾಬೀತುಪಡಿಸಿದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂದು ಸವಾಲು ಹಾಕಿದರು.

'ಪಕ್ಷಕ್ಕೆ ಮುಜುಗರ ಆಗುವಂತಹ ಕೆಲಸವನ್ನು ಯಾವತ್ತೂ ಮಾಡಿಲ್ಲ. ಹಾಗೆ ಮಾಡಿದ್ದರೆ ನಾನು ಜೈಲಿನಲ್ಲಿದ್ದಾಗ ಸೋನಿಯಾ ಗಾಂಧಿಯವರು ಅಲ್ಲಿಗೆ ಬಂದು ನನ್ನನ್ನು ವಿಚಾರಿಸುತ್ತಿರಲಿಲ್ಲ. ಪಕ್ಷ ಮತ್ತು ಪಕ್ಷದ ಕಾರ್ಯಕರ್ತರ ಸ್ವಾಭಿಮಾನಕ್ಕೆ ಧಕ್ಕೆ ತರುವ ಕೆಲಸವನ್ನು ನಾನು ಮಾಡುವುದಿಲ್ಲ. ನಾನು ಎಷ್ಟು ತೆರಿಗೆ ಪಾವತಿಸುತ್ತೇನೆ? ಎಷ್ಟು ಆಸ್ತಿ ಹೊಂದಿದ್ದೇನೆ? ಎಂಬುದನ್ನು ಪ್ರಾಮಾಣಿಕವಾಗಿ ಘೋಷಿಸಿದ್ದೇನೆ' ಎಂದರು.

ಬಿಬಿಎಂಪಿ ಕಚೇರಿಯಲ್ಲಿ ನಡೆದ ಕೃತ್ಯದ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಲಾಗಿದೆ. ಎರಡರಿಂದ ಮೂರು ದಿನಗಳಲ್ಲಿ ಈ ಕುರಿತು ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಲಾಗುವುದು. ಬಿಜೆಪಿ ನಾಯಕರು ಮಾಡಿರುವ ಕಳ್ಳತನ, ಸಾರ್ವಜನಿಕರ ತೆರಿಗೆ ಹಣದ ಲೂಟಿ ಕುರಿತು ತನಿಖೆ ಮಾಡುವುದು ತಮ್ಮ ಮೊದಲ ಕರ್ತವ್ಯ ಎಂದು ಹೇಳಿದರು.

ಸಚಿವ ಚಲುವರಾಯಸ್ವಾಮಿ ವಿರುದ್ಧ ರಾಜ್ಯಪಾಲರಿಗೆ ನಕಲಿ ಪತ್ರ ಬರೆದಿದ್ದಾರೆ. ಆ ಕುರಿತು ಸಿ.ಟಿ. ರವಿ, ಕೆ. ಗೋಪಾಲಯ್ಯ, ಅಶ್ವತ್ಥ ನಾರಾಯಣ, ಆರ್. ಅಶೋಕ ಸೇರಿದಂತೆ ಒಂದು ಗುಂಪು ಮಾತ್ರ ಮಾತನಾಡುತ್ತಿದೆ ಎಂದರು.

'ಗರುಡಾಚಾರ್, ಮುನಿರತ್ನ, ಭೇಟಿ'

'ಬಿಜೆಪಿ ಶಾಸಕರಾದ ಮುನಿರತ್ನ ಮತ್ತು ಉದಯ್ ಬಿ. ಗರುಡಾಚಾರ್ ನನ್ನನ್ನು ಭೇಟಿಮಾಡಿ ಚರ್ಚಿಸಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. 'ಗುತ್ತಿಗೆದಾರರ ಬಗ್ಗೆ ನಾನು ಮಾತನಾಡುವುದಿಲ್ಲ. ಅವರ ಹಿಂದೆ ಇರುವ ಅಶೋಕ ಚಕ್ರವರ್ತಿ, ನವರಂಗಿ ನಾರಾಯಣ, ಎಂತದ್ದೋ ರವಿ, ಗೋಪಾಲಸ್ವಾಮಿ ಅವರೆಲ್ಲರೂ ಈಗ ಉತ್ತರ ಕೊಡಬೇಕಿದೆ' ಎಂದರು. 'ಮುನಿರತ್ನ ಮತ್ತು ಚಿಕ್ಕಪೇಟೆ ಶಾಸಕರು ನನ್ನನ್ನು ಭೇಟಿಮಾಡಿದ್ದರು. ಅವರೇನೋ ಹೇಳುತ್ತಾರೆ ಈಗ' ಎಂದು ಹೇಳಿದರು.

ಅಶ್ವತ್ಥ ಅಲ್ಲ; ನವರಂಗಿ ನಾರಾಯಣ...

'ಇವರು ಅಶ್ವತ್ಥ ನಾರಾಯಣ ಅಲ್ಲ; ನವರಂಗಿ ನಾರಾಯಣ. ಕಳ್ಳರನ್ನು ರಕ್ಷಿಸುವಲ್ಲಿ ಡಾಕ್ಟರೇಟ್ ಮಾಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

'ಶಿವಕುಮಾರ್ ನಿರ್ನಾಮ ಸಚಿವರು' ಎಂಬ ಅಶ್ವತ್ಥ ನಾರಾಯಣ ಅವರ ಟೀಕೆ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಅಶ್ವತ್ಥ ನಾರಾಯಣ ಅವರಿಗೆ ಪ್ರಾಮಾಣಿಕ ಗುತ್ತಿಗೆದಾರರ ರಕ್ಷಣೆ ಬಗ್ಗೆ ಚಿಂತೆ ಇಲ್ಲ. ಈಗ ಕೆಲವು ಗುತ್ತಿಗೆದಾರರನ್ನು ಎತ್ತಿಕಟ್ಟಿ ನಕಲಿ ಗುತ್ತಿಗೆದಾರರು ಮತ್ತು ಬೇನಾಮಿ ಕಳ್ಳರ ರಕ್ಷಣೆಗೆ ನಿಂತಿದ್ದಾರೆ' ಎಂದರು.

'ನಾರಾಯಣ ಕೃಪಾಪೋಷಿತ ನಾಟಕ ಮಂಡಳಿಯ ಆಟ ಬಹಳ ದಿನ ನಡೆಯುವುದಿಲ್ಲ. ಅವರು ಎಲ್ಲಿಗೆ ಬೇಕಾದರೂ ಹೋಗಲಿ. ಏನು ಬೇಕಾದರೂ ಮಾಡಲಿ. ರಾಜ್ಯಪಾಲರು ಮಾತ್ರವಲ್ಲ, ರಾಷ್ಟ್ರಪತಿಯವರ ಬಳಿಯೂ ಹೋಗಲಿ. ಯಾವ ಅಭಿಯಾನವನ್ನಾದರೂ ಮಾಡಲಿ. ಸದ್ಯದಲ್ಲೇ ದಾಖಲೆ ಸಮೇತ ಬಣ್ಣ ಬಯಲು ಮಾಡುತ್ತೇನೆ' ಎಂದು ಹೇಳಿದರು.

'ರಾಮನಗರವನ್ನು ಸ್ವಚ್ಛ ಮಾಡುತ್ತೇನೆ ಎಂದು ಬಂದಿದ್ದರು. ಜಿಲ್ಲೆಯಲ್ಲಿ ಅವರ ಪಕ್ಷವನ್ನೇ ಸ್ವಚ್ಛ ಮಾಡಿದ್ದಾರೆ. ಆ ಮಾನಸಿಕ ಖಿನ್ನತೆಯಲ್ಲಿದ್ದಾರೆ. ಅವರು ನಿರ್ವಹಿಸುತ್ತಿದ್ದ ಇಲಾಖೆ ಮತ್ತು ಬೆಂಗಳೂರಿನಲ್ಲಿ ಏನೆಲ್ಲಾ ಮಾಡಿದ್ದಾರೆ ಎಂಬುದನ್ನು ಬಿಚ್ಚಿಟ್ಟಿಲ್ಲ. ಸಮಯ ಬಂದಾಗ ಎಲ್ಲ ಅಕ್ರಮಗಳನ್ನು ಬಹಿರಂಗಪಡಿಸುತ್ತೇನೆ' ಎಂದರು.

'ದಮ್ ಇದ್ರೆ ಅಜ್ಜಯ್ಯ ಬಳಿ ಆಣೆ ಮಾಡಲಿ: ಅಶ್ವತ್ಥನಾರಾಯಣ

ಬೆಂಗಳೂರು: 'ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ದಮ್, ತಾಕತ್ ಇದ್ರೆ ಬಿಬಿಎಂಪಿ ಗುತ್ತಿಗೆದಾರರಿಂದ ಲಂಚ ಕೇಳಿಲ್ಲ ಎಂದು ನೊಣವಿನಕೆರೆ ಅಜ್ಜಯ್ಯನ ಸನ್ನಿಧಾನದಲ್ಲಿ ಆಣೆ ಮಾಡಲಿ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಸವಾಲು ಹಾಕಿದ್ದಾರೆ.

ಸೋಮವಾರ ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎಲ್ಲದಕ್ಕೂ ಅಜ್ಜಯ್ಯನ ಬಳಿ ಓಡಿ ಹೋಗ್ತಾರೆ. ಈಗ ಆರೋಪ ಬಂದಿದೆ, ಹೋಗಪ್ಪ, ಅಜ್ಜಯ್ಯನ ಬಳಿ ಹೋಗಿ ಆಣೆ– ಪ್ರಮಾಣ ಮಾಡಪ್ಪ' ಎಂದು ಏಕ ವಚನದಲ್ಲಿ ಕಾಲೆಳೆದರು.

ಶಿವಕುಮಾರ್ ಬೆಂಗಳೂರು ಅಭಿವೃದ್ಧಿ ಸಚಿವರಲ್ಲ. ಅವರು ಬೆಂಗಳೂರು ನಿರ್ನಾಮ ಸಚಿವ. ಕೆಂಪೇಗೌಡರು ಕಟ್ಟಿದ ಬೆಂಗಳೂರಿಗೆ ಡಿ.ಕೆ.ಶಿವಕುಮಾರ್ ಕಳಂಕ ತರುತ್ತಿದ್ದಾರೆ. ಕೇವಲ ಕೃಷಿಯಿಂದ ಅಪಾರ ಸಂಪತ್ತು ಗಳಿಸಿರುವ ಇವರು ಅದು ಹೇಗೆ ಎಂಬುದನ್ನು ಮುಖ್ಯಮಂತ್ರಿ ಸೇರಿ ಎಲ್ಲರಿಗೂ ಹೇಳಿಕೊಡಲಿ ಎಂದರು.



ಡಾ. ಸಿ.ಎನ್. ಅಶ್ವತ್ಥನಾರಾಯಣ

'ಕಮಿಷನ್ ಆರೋಪ ಸಾಬೀತಾದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂಬ ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿ, 'ನೀನು ರಾಜಕೀಯ ನಿವೃತ್ತಿನಾದ್ರೂ ಆಗು, ಕಾಂಗ್ರೆಸ್ ಅನ್ನು ನಿರ್ನಾಮನಾದ್ರೂ ಮಾಡು' ಎಂದು ಲೇವಡಿ ಮಾಡಿದರು.

'ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಎಟಿಎಂ ಸರ್ಕಾರವಾಗಿದೆ. ಲೋಕಸಭಾ ಚುನಾವಣೆಗಾಗಿ ಹಣ ದೋಚುವುದರಲ್ಲಿ ನಿರತವಾಗಿದೆ. ಸಿಎಂ, ಸೂಪರ್ ಸಿಎಂ ಮತ್ತು ಶ್ಯಾಡೋ ಸಿಎಂಗಳಿದ್ದಾರೆ. ವೈಎಸ್‌ಟಿ ಜತೆಗೆ ಸುರ್ಜೇವಾಲ ಬರ್ತಾರೆ ಟಾರ್ಗೆಟ್ ಕೊಡುತ್ತಾರೆ. ಅದಕ್ಕೆ ತಕ್ಕಂತೆ ಕಲೆಕ್ಷನ್ ಮಾಡ್ತಾರೆ. ಡಿ.ಕೆ.ಶಿ ಟ್ರ್ಯಾಕ್ ರೆಕಾರ್ಡ್ ಎಲ್ಲರಿಗೂ ಗೊತ್ತಿದೆ' ಎಂದರು.

ಕಮಿಷನ್ ಆರೋಪ ಸುಳ್ಳು: ಗುತ್ತಿಗೆದಾರರ ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಬಿಲ್‌ಗಳ ಹಣ ಪಾವತಿಸಲು ಕಮಿಷನ್ ಕೇಳಲಾಗಿದೆ ಎನ್ನುವುದು ಸುಳ್ಳು' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗುತ್ತಿಗೆದಾರರ ಸಮಸ್ಯೆಗಳನ್ನು ಪರಿಹರಿಸುವಂತೆ ಬಾಕಿ ಬಿಲ್‌ಗಳ ಹಣ ಬಿಡುಗಡೆ ಮಾಡುವಂತೆ ಆಡಳಿತ ಪಕ್ಷದ ಸಚಿವರು, ಶಾಸಕರಿಗೆ ಮನವಿ ಸಲ್ಲಿಸಲಾಗಿದೆ. ನಮ್ಮ ಸಂಘವು ಗುತ್ತಿಗೆದಾರರ ಹಕ್ಕುಗಳನ್ನು ರಕ್ಷಣೆಗೆ ಹೋರಾಡುತ್ತಿದೆ. ಆದರೆ, ವಿರೋಧ ಪಕ್ಷಗಳು ಮಾಡುತ್ತಿರುವ ಕಮಿಷನ್ ಆರೋಪಕ್ಕೆ ಮತ್ತು ನಮಗೂ ಯಾವುದೇ ರೀತಿಯ ಸಂಬಂಧವಿಲ್ಲ. ನಾವು ಯಾವುದೇ ಒಂದು ಪಕ್ಷದ ಪರವಾಗಿ ಕೆಲಸ ಮಾಡುತ್ತಿಲ್ಲ' ಎಂದು ಸ್ಪಷ್ಟಪಡಿಸಿದರು.

' ಡಿ.ಕೆ. ಶಿವಕುಮಾರ್ ಅವರು ಯಾವುದೇ ಗುತ್ತಿಗೆದಾರರ ಬಳಿ ಅಥವಾ ಅಧಿಕಾರಿಗಳ ಮೂಲಕ ಬಿಲ್ ಪಾವತಿಗೆ ಕಮಿಷನ್ ಯಾಚಿಸಿಲ್ಲ. ಕೆಲವು ಮಧ್ಯವರ್ತಿಗಳು ಶೇ 10ರಿಂದ 15ರವರೆಗೆ ಕಮಿಷನ್ ನೀಡಿದರೆ ಬಿಲ್ ಪಾವತಿ ಮಾಡುತ್ತಾರೆ ಎಂದು ಪ್ರಚಾರ ಮಾಡಿದ್ದಾರೆ' ಎಂದು ಹೇಳಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದಿರುವ ಕಾಮಗಾರಿಗಳ ನೈಜತೆ ಪರಿಶೀಲಿಸಲು ವಿಶೇಷ ತನಿಖಾ ತಂಡವನ್ನು ರಚಿಸಿದ್ದು, ಅದರ ವರದಿ ಬರುವವರೆಗೂ ಕಾದರೆ ಸಕಾಲದಲ್ಲಿ ಬಿಲ್ ಪಡೆಯಲು ಆಗುವುದಿಲ್ಲ. ಆದ್ದರಿಂದ, ಈಗಾಗಲೇ ಮುಖ್ಯ ಎಂಜಿನಿಯರ್‌ಗಳು ನಡೆಸಿರುವ ತನಿಖಾ ವರದಿಯ ಆಧಾರದ ಮೇಲೆ ಹಣ ಬಿಡುಗಡೆಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯ ಆಯುಕ್ತರಿಗೆ ತುಷಾರ್ ಗಿರಿನಾಥ್ ಅವರಿಗೆ ಸೂಚಿಸಬೇಕು' ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ

ಶೌಚಾಲಯದಲ್ಲಿ 1.5 ಕೆ.ಜಿ ಪೇಸ್ಟ್ ರೂಪದ ಚಿನ್ನ ಪತ್ತೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಇಮಿಗ್ರೇಷನ್ ಬಳಿ ಇರುವ ಶೌಚಾಲಯದಲ್ಲಿ ಎರಡು ಕಪ್ಪು ಬಣ್ಣದ ಕವರ್‌ನಲ್ಲಿ 1.51 ಕೆ.ಜಿ ಚಿನ್ನ ಪತ್ತೆಯಾಗಿದೆ.

ಸೋಮವಾರ ಮಧ್ಯಾಹ್ನ ಕಸ್ಟಮ್ಸ್ ಅಧಿಕಾರಿಗಳಿಗೆ ಶೌಚಾಲಯದಲ್ಲಿ ಕಪ್ಪು ಟೇಪ್ ಹಾಕಿರುವ ಕವರ್ ಇರುವ ಬಗ್ಗೆ ಮಾಹಿತಿ ದೊರೆತಿದೆ. ಕವರ್ ಪರಿಶೀಲಿಸಿದಾಗ ಅದರಲ್ಲಿರುವುದು ಪೇಸ್ಟ್ ರೂಪದಲ್ಲಿರುವ ಚಿನ್ನ ಎಂದು ತಿಳಿಯಿತು.

ಚಿನ್ನ ಯಾರಿಗೆ ಸೇರಿದ್ದು ಎಂಬ ಮಾಹಿತಿ ಇಲ್ಲ. ಪೇಸ್ಟ್ ರೂಪದಲ್ಲಿರುವ ಚಿನ್ನ ಕಳ್ಳಸಾಗಣೆಗೆ ಯತ್ನಿಸಿದ ಪ್ರಯಾಣಿಕರು ಸಿಕ್ಕಿ ಬೀಳುವ ಭಯದಿಂದ ಶೌಚಾಲಯದಲ್ಲಿ ಬಿಟ್ಟು ಹೋಗಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಶಂಕಿಸಿದ್ದಾರೆ.

ಕಸ್ಟಮ್ಸ್ ಅಧಿಕಾರಿಗಳು ಪೇಸ್ಟ್ ಪ್ರಯೋಗಾಲಯಕ್ಕೆ ಕಳಿಸಿ ಪರಿಶೀಲನೆ ಮಾಡಿಸಿದ್ದಾರೆ. ಚಿನ್ನದ ಮೌಲ್ಯ ₹66.97 ಲಕ್ಷ ಎಂದು ತಿಳಿದು ಬಂದಿದೆ. ತನಿಖೆ ಪ್ರಗತಿಯಲ್ಲಿದೆ.



ಮನಗೆದ್ದ ತಾವರಗೇರಾದ ಮನೆ

ತಾವರಗೇರಾ (ಕೊಪ್ಪಳ ಜಿಲ್ಲೆ): ಹರ್ ಘರ್ ತಿರಂಗಾ ಅಭಿಯಾನದ ಸಂದೇಶ ಸಾರುವ ಭಾವಚಿತ್ರಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ತಾವರಗೇರಾದ ಮನೆಯೊಂದು ಆಯ್ಕೆಯಾಗಿದೆ.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಶಕುಂತಲಾ ಮಲ್ಲಪ್ಪ ನಾಲತ್ತವಾಡ ಎಂಬುವರು 2016–17ರಲ್ಲಿ ಮನೆ ನಿರ್ಮಿಸಿಕೊಂಡಿದ್ದರು. ಅವರು ತಮ್ಮ ಮನೆಯ ಮೇಲೆ ಆಜಾದಿಕಾ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ತ್ರಿವರ್ಣ ಧ್ವಜ ಹಾರಿಸಿದ್ದು, ರಾಜ್ಯಮಟ್ಟದಲ್ಲಿ ಹೋದ ವರ್ಷ ಪ್ರಥಮ ಸ್ಥಾನ ಪಡೆದಿತ್ತು. ಈಗ ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರದ ಗಮನ ಸೆಳೆದಿದೆ.

ಹರ್ ಘರ್ ತಿರಂಗಾ ಪ್ರಚಾರದ ಬಗ್ಗೆ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾದ ಕೇಂದ್ರ ಸರ್ಕಾರದ ಜಾಹೀರಾತಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾವಚಿತ್ರದ ಜೊತೆಗೆ ಶಕುಂತಲಾ ಅವರ ಕುಟುಂಬದ ಸದಸ್ಯರ ಹಾಗೂ ಮನೆಯ ಫೋಟೊವನ್ನು ಪ್ರಕಟಿಸಲಾಗಿದೆ. ಅವರಿಗೆ ಪಟ್ಟಣ ಪಂಚಾಯಿತಿ ವತಿಯಿಂದ ಸನ್ಮಾನಿಸಲಾಯಿತು.

'ಸರ್ಕಾರದ ಯೋಜನೆ ಸದುಪಯೋಗ ಪಡೆದು ಉತ್ತಮ ಮನೆ ನಿರ್ಮಿಸಲಾಗಿದೆ. 2021–2022ರಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಲಭಿಸಿತ್ತು.



ಪಂಜಿನ ಮೆರವಣಿಗೆ

ವಿಭಜನ ವಿಭೀಷಕ ಸ್ಮೃತಿ ದಿನದ (ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಕರಾಳ ಘಟನೆಯ ಸಂತಾಪ ಕಾರ್ಯಕ್ರಮ) ಅಂಗವಾಗಿ ಬಿಜೆಪಿ ವತಿಯಿಂದ ನಗರದ ಗೆದ್ದಲಹಳ್ಳಿಯಿಂದ ಹೆಬ್ಬಾಳದವರೆಗೆ ಸೋಮವಾರ ರಾತ್ರಿ ಪಂಜಿನ ಮೆರವಣಿಗೆ ನಡೆಸಲಾಯಿತು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಶಾಸಕ ಎಸ್.ಆರ್. ವಿಶ್ವನಾಥ್ ಇದ್ದರು

– ಪ್ರಜಾವಾಣಿ ಚಿತ್ರ

ಬೆಂಕಿ ಅವಘಡ: ಅಧಿಕಾರಿಗಳ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಮುಖ್ಯ ಕಚೇರಿ ಆವರಣದಲ್ಲಿರುವ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಸಂಭವಿಸಿದ್ದ ಬೆಂಕಿ ಅವಘಡ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಹಿರಿಯ ಅಧಿಕಾರಿಗಳನ್ನು ವಿಚಾರಣೆ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಆಗಸ್ಟ್ 11ರಂದು ನಡೆದಿದ್ದ ಅವಘಡ ಸಂಬಂಧ ಪ್ರಯೋಗಾಲಯದ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಬಿ.ಎಸ್. ದೂರು ನೀಡಿದ್ದರು. ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಇದೀಗ ಪ್ರಕರಣ ಸಂಬಂಧ ಹೆಚ್ಚಿನ ಮಾಹಿತಿ ಕಲೆಹಾಕುತ್ತಿರುವ ಪೊಲೀಸರು, ಪ್ರಹ್ಲಾದ್ ಹಾಗೂ ಇತರೆ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆಯಲು ತೀರ್ಮಾನಿಸಿದ್ದಾರೆ.

'ಪ್ರಕರಣದ ಆರೋಪಿಗಳಾದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆನಂದ್, ಸ್ವಾಮಿ ಹಾಗೂ ಸುರೇಶ್‌ಕುಮಾರ್ ಅವರಿಗೆ ಈಗಾಗಲೇ ನೋಟಿಸ್ ನೀಡಲಾಗಿದ್ದು, ಸದ್ಯದಲ್ಲೇ ವಿಚಾರಣೆ ನಡೆಸಲಾಗುವುದು. ಅದಕ್ಕೂ ಮುನ್ನ ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆಯಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಯೋಗಾಲಯದಲ್ಲಿ ಯಾವ ಕೆಲಸ ಮಾಡಲಾಗುತ್ತಿತ್ತು? ಯಾವ ವಸ್ತುಗಳು ಇದ್ದವು ? ಯಾವ ಸಿಬ್ಬಂದಿ ಕೆಲಸ ಮಾಡುತ್ತಿದ್ದರು ? ಅವಘಡ ಸಂಭವಿಸದಂತೆ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು? ಅವಘಡಕ್ಕೆ ಕಾರಣವೇನು ? ಎಂಬಿತ್ಯಾದಿ ಮಾಹಿತಿಗಳನ್ನು ಪಡೆಯಬೇಕಿದೆ. ಪ್ರಹ್ಲಾದ್ ಅವರಿಂದ ಪುನಃ ಹೇಳಿಕೆ ಪಡೆಯಬೇಕಿದೆ' ಎಂದು ಮೂಲಗಳು ತಿಳಿಸಿವೆ.

'ಹಿರಿಯ ಅಧಿಕಾರಿಗಳು ನೀಡುವ ಮಾಹಿತಿ ಸೂಕ್ತವಾಗಿದ್ದರೆ, ಅದರನ್ವಯ ತನಿಖೆ ಮುಂದುವರಿಸಲಾಗುವುದು. ಮಾಹಿತಿಯಲ್ಲಿ ಗೊಂದಲಗಳು ಕಂಡುಬಂದರೆ, ಮುಖ್ಯ ಆಯುಕ್ತರ ವಿಚಾರಣೆಯನ್ನೂ ನಡೆಸಲಾಗುವುದು' ಎಂದು ಹೇಳಿವೆ.

ಗಾಯಗೊಂಡಿದ್ದ ಇಬ್ಬರ ಸ್ಥಿತಿ ಇನ್ನೂ ಗಂಭೀರ

ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿರುವ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಆ.11ರಂದು ಸಂಭವಿಸಿದ್ದ ಬೆಂಕಿ ಅವಘಡದಿಂದ ಗಾಯಗೊಂಡಿದ್ದ ಒಂಬತ್ತು ಮಂದಿಯಲ್ಲಿ ಇಬ್ಬರ ಸ್ಥಿತಿ ಇನ್ನೂ ಗಂಭೀರವಾಗಿದೆ.

ಶೇ 25ರಷ್ಟು ಸುಟ್ಟಗಾಯಗಳಾಗಿರುವ ಮುಖ್ಯ ಎಂಜಿನಿಯರ್ ಶಿವಕುಮಾರ್ ಅವರು ಉಸಿರಾಟದಲ್ಲಿ ತೊಂದರೆ ಇದೆ. ಶೇ 28ರಷ್ಟು ಸುಟ್ಟಗಾಯಗಳಾಗಿದ್ದ ಆಪರೇಟರ್ ಜ್ಯೋತಿ ಅವರಿಗೆ ಮುಖಕ್ಕೆ ಹೆಚ್ಚು ಸಮಸ್ಯೆಯಾಗಿದ್ದು, ಉಸಿರಾಟದ ಸಮಸ್ಯೆ ಇದೆ. ಇವರಿಬ್ಬರ ಆಮ್ಲಜನಕ ಮಟ್ಟ ಸ್ಥಿರವಾಗಿದ್ದು, ಹೆಚ್ಚು ನಿಗಾವಹಿಸಲಾಗಿದೆ. ಕಾರ್ಯಪಾಲಕ ಎಂಜಿನಿಯರ್ ಕಿರಣ್ ಅವರ ಸ್ಥಿತಿ ಇದೀಗ ಸುಧಾರಿಸಿದ್ದು, ಸ್ಥಿರವಾಗಿದೆ. ಆ.13ರಂದು ಡಯಾಲಿಸಿಸ್ ಮಾಡಲಾಗಿದೆ. ಇನ್ನುಳಿದ ಆರು ಜನರ ಸ್ಥಿತಿ ಸ್ಥಿರವಾಗಿದೆ. ಕೆಲವು ದಿನ ನಿಗಾವಹಿಸಲಾಗುತ್ತದೆ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಪ್ರಕಟಣೆ ತಿಳಿಸಿದೆ.

'ಇನ್ನು 6 ತಿಂಗಳಲ್ಲಿ ಬಿಜೆಪಿ ಉಳಿಯಲ್ಲ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಇನ್ನು ಆರು ತಿಂಗಳಲ್ಲಿ ಬಿಜೆಪಿ ಉಳಿಯಲ್ಲ. ಇದಕ್ಕೆ ನಾನು ಗ್ಯಾರಂಟಿ ಕೊಡುತ್ತೇನೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಭವಿಷ್ಯ ನುಡಿದರು.

'ಇನ್ನು 6 ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ಬೀಳುತ್ತೆ' ಎಂದ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ನೀಡಿದ ಹೇಳಿಕೆಗೆ ಸೋಮವಾರ ನಗರದಲ್ಲಿ ಪ್ರತಿಕ್ರಿಯಿಸಿದ ಸಚಿವರು, 'ನಾನು ಸವಾಲು ಹಾಕುತ್ತೇನೆ. 6 ತಿಂಗಳಲ್ಲಿ ಸರ್ಕಾರ ರಚಿಸಲಿ. ರಾಷ್ಟ್ರಪತಿ ಆಳ್ವಿಕೆ ತರುತ್ತಾರಾ? ಮಣಿಪುರದಂತಹ ಸ್ಥಿತಿ ಇದೆಯಾ? ನಮಗೂ ರಾಜಕೀಯ ಮಾಡುವುದಕ್ಕೆ ಬರುತ್ತದೆ. ಅವರೊಬ್ಬರಿಗೇ ಬರುತ್ತದೆಯಾ? ನಾವೂ 140 ವರ್ಷಗಳಿಂದ ಪಕ್ಷವನ್ನು ಕಟ್ಟಿಕೊಂಡು ಬರುತ್ತಿದ್ದೇವೆ' ಎಂದರು.



ಪ್ರಿಯಾಂಕ್ ಖರ್ಗೆ

'ಕರ್ನಾಟಕದಲ್ಲಿ ಅವರದ್ದು(ಬಿಜೆಪಿ) ಏನೂ ನಡೆದಿಲ್ಲ. ಮುಂದೆಯೂ ನಡೆಯಲ್ಲ. ಇನ್ನು ಆರು ತಿಂಗಳಲ್ಲಿ ಎಷ್ಟು ಜನ ಉಳಿದುಕೊಳ್ಳುತ್ತಾರೆ ನೋಡಿ' ಎಂದರು. ಎಷ್ಟು ಜನ ಸಂಪರ್ಕದಲ್ಲಿ ಇದ್ದಾರೆ ಎಂಬ ಪ್ರಶ್ನೆಗೆ, 'ನನಗೆ ಗೊತ್ತಿಲ್ಲ. ಬಿಜೆಪಿಯವರನ್ನು ಕೇಳಿ. ಎಷ್ಟು ಜನ ಅಸಮಾಧಾನ ಇದ್ದಾರೆ ಎಂಬ ಬಗ್ಗೆ ಅವರನ್ನೇ ಕೇಳಿ' ಎಂದರು.

'ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಕೃತಕ ಬಹುಮತ ಮಾಡುತ್ತಾರೆ. ಮಹಾರಾಷ್ಟ್ರದಲ್ಲಿ ಬಿಜೆಪಿ ತಿರಸ್ಕೃತವಾದ ಬಳಿಕ ಇದೇ ಪದ್ಧತಿ ಅಳವಡಿಸಿಕೊಂಡರು. ಆದರೆ, ಕರ್ನಾಟಕದಲ್ಲಿ ಅಂತಹ ಆಟ ನಡೆಯಲ್ಲ. ಯತ್ನಾಳ್ ಅವರಿಗೆ ಮನವಿ ಮಾಡುತ್ತೇನೆ, ಕಾಂಗ್ರೆಸ್‌ನಲ್ಲಿ ಹುಳುಕು ಹುಡುಕುವ ಬದಲು ಅದರ ಅರ್ಧದಷ್ಟು ಪ್ರಯತ್ನವನ್ನು ಪಕ್ಷದ ಏಳಿಗೆಗೆ ಬಳಸಲಿ' ಎಂದು ಕುಟುಕಿದರು.

'ನಳಿನ್ ಕುಮಾರ್ ಕಟೀಲ್ ಅವರ ಮಾತಿಗೆ ಕವಡೆ ಕಾಸಿನಷ್ಟೂ ಬೆಲೆ ಇಲ್ಲ. ಶಾಸಕರೊಬ್ಬರು ಕೇಂದ್ರ ಸಚಿವ ಕೊಲೆಗೆ ಯತ್ನ ನಡೆಸಿದ್ದಾಗಿ ಆರೋಪಿಸುತ್ತಿದ್ದಾರೆ. ಬಸವರಾಜ ಬೊಮ್ಮಾಯಿ ಅವರು ದೆಹಲಿಗೆ ಹೋಗಿ ಬಂದು ಸುಸ್ತಾಗಿದ್ದಾರೆ. ಮೊದಲು ತಮ್ಮಲ್ಲಿನ ಹುಳುಕು ಮುಚ್ಚಿಕೊಳ್ಳಲಿ' ಎಂದರು.

'ಸಿನಿಮಾ ರಂಗದಲ್ಲಿ ಸಾಕಷ್ಟು ಬದಲಾವಣೆ ತಂದಿರುವ ನಟ ಉಪೇಂದ್ರ ವಿವಾದಾತ್ಮಕವಾಗಿ ಮಾತನಾಡಿದ್ದು ತಪ್ಪು. ಪ್ರಬುದ್ಧ ರಾಜಕೀಯಕ್ಕಾಗಿ ಪ್ರಜಾಕೀಯ ಪಕ್ಷ ಕಟ್ಟಿದವರು ಅಪ್ರಬುದ್ಧವಾಗಿ ಮಾತನಾಡಿದರೆ ನೋವಾಗುತ್ತದೆ. ಕಾನೂನು ಬದ್ಧವಾಗಿ ಎಲ್ಲರೂ ನಡೆದುಕೊಳ್ಳಬೇಕು' ಎಂದು ಅವರು ಹೇಳಿದರು.

'ಹಣ ಮಾಡಲು ನಿಂತ ಕಾಂಗ್ರೆಸ್ಸಿಗರು'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಕಾಂಗ್ರೆಸ್‌ನವರು ನಾಲ್ಕು ವರ್ಷ ಅಧಿಕಾರದಿಂದ ದೂರವಿದ್ದು, ಒಂದು ರೀತಿ ಹಸಿದ ಹುಲಿಗಳಾಗಿದ್ದಾರೆ. ಆದ್ದರಿಂದ ಎಲ್ಲರೂ ಹಣ ಮಾಡಲು ಹೊರಟಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ದೂರಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಗುತ್ತಿಗೆದಾರರೇ ರಾಜ್ಯ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಸತ್ಯವನ್ನೇ ನುಡಿಯುತ್ತಿದ್ದಾರೆ. ಈ ಸರ್ಕಾರ ನೂರಕ್ಕೆ ನೂರರಷ್ಟು ಭ್ರಷ್ಟ ಎಂಬುದನ್ನೇ ಅವರದೇ ಪಕ್ಷದ ಶಾಸಕರು ಹೇಳುತ್ತಿದ್ದಾರೆ ಎಂದರು.

'ಕೇವಲ ಎರಡು ತಿಂಗಳಲ್ಲೇ ಸರ್ಕಾರ ಅಧಃಪತನಕ್ಕೆ ತಲುಪಿದೆ ಎಂದು ಕಾಂಗ್ರೆಸ್ ಪಕ್ಷದವರೇ ಹೇಳುತ್ತಿದ್ದಾರೆ. ಮುಖ್ಯಮಂತ್ರಿಯವರೇ ತಮ್ಮ ಆಪ್ತರ ಬಳಿ ಎರಡೇ ತಿಂಗಳಲ್ಲಿ ನಮ್ಮ ಸರ್ಕಾರದ ಹೆಸರು ಖರಾಬಾಗುತ್ತಿದೆ ಎಂದಿರುವುದು ಗೊತ್ತಾಗಿದೆ' ಎಂದು ರವಿಕುಮಾರ್ ತಿಳಿಸಿದರು.

ಕಾಂಗ್ರೆಸ್ ಸರ್ಕಾರದ ವಿರುದ್ಧ ಇದೇ 16 ರ ಬಳಿಕ ಪೋಸ್ಟರ್ ಅಭಿಯಾನವೂ ಸೇರಿ ದೊಡ್ಡ ಮಟ್ಟದ ಹೋರಾಟವನ್ನು ಹಮ್ಮಿಕೊಳ್ಳುತ್ತೇವೆ. ಬಹಳಷ್ಟು ಇಲಾಖೆಗಳಲ್ಲಿ ವ್ಯಾಪಕ ಭ್ರಷ್ಟಾಚಾರದಿಂದ ಜನ ಬೇಸತ್ತು ಹೋಗಿದ್ದಾರೆ. ಜನ ಇವರಿಗೆ ಮುಂದಿನ ದಿನಗಳಲ್ಲಿ ಪಾಠ ಕಲಿಸುತ್ತಾರೆ.

ಸಚಿವ ಚಲುವರಾಯಸ್ವಾಮಿ ಲಂಚಕ್ಕಾಗಿ ಬೇಡಿಕೆ ಇಟ್ಟಿದ್ದು ಸುಳ್ಳೇ? ರಾಜ್ಯಪಾಲರು ಅವರ ವಿರುದ್ಧ ಕ್ರಮ ಸೂಚಿದ್ದಾರಲ್ಲವೇ ಎಂದು ಪ್ರಶ್ನಿಸಿದ ಅವರು, ಭ್ರಷ್ಟಾಚಾರದ ವಿಚಾರದಲ್ಲಿ ಶೂನ್ಯ ಸಹಿಷ್ಣು ಎಂದಿದ್ದ ರಾಹುಲ್‌ಗಾಂಧಿ ಭ್ರಷ್ಟ ಸಚಿವರ ವಿರುದ್ಧ ಕ್ರಮ ಕೈಗೊಳ್ಳದೇ ಏಕೆ ಸುಮ್ಮನಿದ್ದಾರೆ? ಗುತ್ತಿಗೆದಾರರ ಹಣ ಬಿಡುಗಡೆ ಮಾಡದೇ ಸತಾಯಿಸುತ್ತಿರುವುದೇಕೆ ಎಂದೂ ಪ್ರಶ್ನಿಸಿದರು.

ಚಿತ್ರಾವಳಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣದಲ್ಲಿ ಕೆಎಂಎಫ್‌ನ ಹೊಸ ತಿಂಡಿಗಳನ್ನು ಬಿಡುಗಡೆಗೊಳಿಸಿದರು. ಹೊಸ ಸವಿ ಸವಿದು ಮೆಚ್ಚುಗೆ ಸೂಚಿಸಿದರು.



ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ನಗರದ ಚರ್ಚ್‌ಸ್ಟ್ರೀಟ್‌ನಲ್ಲಿ ಬಾಂಬ್ ನಿಷ್ಕ್ರಿಯ ತಂಡ ಸೋಮವಾರ ತಪಾಸಣೆ ನಡೆಸಿತು. –ಪ್ರಜಾವಾಣಿ ಚಿತ್ರ

ಭ್ರಷ್ಟ ಸರ್ಕಾರ: 'ಮುಖ್ಯಮಂತ್ರಿ' ಚಂದ್ರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಭ್ರಷ್ಟಾಚಾರ, ಲೂಟಿ ತಾಂಡವವಾಡುತ್ತಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯಾಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ದೂರಿದರು.



'ಮುಖ್ಯಮಂತ್ರಿ' ಚಂದ್ರು

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಮಿಷನ್ ಮತ್ತು ಕಲೆಕ್ಷನ್‌ನಲ್ಲಿ ತೊಡಗಿದ್ದ ಸರ್ಕಾರವನ್ನು ಕಿತ್ತುಹಾಕಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಸರ್ಕಾರ ಮತ್ತು ಗುತ್ತಿಗೆದಾರರ ನಡುವೆ ನಡೆದಿರುವ ಎಲ್ಲ ವ್ಯವಹಾರದ ದಾಖಲೆಗಳನ್ನು ತನಿಖೆಗೆ ಒಳಪಡಿಸಬೇಕು. ಎಷ್ಟು ಬಿಲ್‌ಗಳ ಮೊತ್ತ ಬಾಕಿ ಇದೆ. ಕಾಮಗಾರಿ ಎಷ್ಟಾಗಿದೆ. ಅದರಲ್ಲಿ ಎಷ್ಟು ಭ್ರಷ್ಟಾಚಾರ ನಡೆದಿದೆ ಎಂದು ಬಹಿರಂಗಪಡಿಸಬೇಕು' ಎಂದು ಒತ್ತಾಯಿಸಿದರು.

'ಹಿಂದಿನ ಬಿಜೆಪಿ ಸರ್ಕಾರ ಶೇ 40ರಷ್ಟು ಕಮಿಷನ್ ಪಡೆಯುತ್ತಿತ್ತು. ಕಾಂಗ್ರೆಸ್ ಸರ್ಕಾರ ಬಾಕಿ ಹಣ ಬಿಡುಗಡೆಗೆ ಶೇ 15ರಷ್ಟು ಕಮಿಷನ್ ಸೇರಿ ಶೇ 55ರಷ್ಟು ಹಣ ಲೂಟಿ ಮಾಡಿದರೆ ಅಭಿವೃದ್ಧಿ ಕಾರ್ಯಗಳು ನಡೆಯುವುದು ಹೇಗೆ' ಎಂದು ಪ್ರಶ್ನಿಸಿದರು.

'ಬಿಬಿಎಂಪಿಯಲ್ಲಿ ನಡೆಯುತ್ತಿರುವ ಬೃಹತ್ ಭ್ರಷ್ಟಾಚಾರವನ್ನು ತಡೆಯಬೇಕಿದ್ದರೆ ತಕ್ಷಣ ಚುನಾವಣೆ ನಡೆಸಬೇಕು. ಆದರೆ, ಕಾಂಗ್ರೆಸ್ ಸರ್ಕಾರ ಸಹ ಬಿಬಿಎಂಪಿ ಚುನಾವಣೆ ಬಗ್ಗೆ ನಿರಾಸಕ್ತಿ ತೋರುತ್ತಿದೆ. ಭ್ರಷ್ಟಾಚಾರ ಬೆಂಬಲಿಸುತ್ತಿದೆ' ಎಂದರು.

'2024ರ ಲೋಕಸಭೆ ಚುನಾವಣೆಗೂ ಮುನ್ನ ಹಾಲಿ ಮುಖ್ಯ ಚುನಾವಣಾ ಆಯುಕ್ತರು ನಿವೃತ್ತರಾಗುತ್ತಿದ್ದಾರೆ. ಅದಕ್ಕೂ ಮೊದಲೇ ತಮಗೆ ಬೇಕಾದ ಮುಖ್ಯ ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡುವ ಸಂದರ್ಭ ಸೃಷ್ಟಿಸಲು ಚುನಾವಣಾ ಆಯೋಗವನ್ನು ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಕೇಂದ್ರ ಸರ್ಕಾರ ಸಂಚು ರೂಪಿಸುತ್ತಿದೆ. ಇದು ಸಂವಿಧಾನ ವಿರೋಧಿ ಕೃತ್ಯ. ಇದನ್ನು ಬಲವಾಗಿ ವಿರೋಧಿಸಬೇಕು' ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆ ಗ್ರಾ.ಪಂ.ಅಧ್ಯಕ್ಷೆ

ಯಲಹಂಕ: ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಅಮರಾವತಮ್ಮ ಹಾಗೂ ಉಪಾಧ್ಯಕ್ಷರಾಗಿ ಎಸ್. ಜಿ.ಪ್ರಶಾಂತ್ ರೆಡ್ಡಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಅಮರಾವತಮ್ಮ

'ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೆ. ಪಂಚಾಯಿತಿ ಸದಸ್ಯೆಯಾಗುತ್ತೇನೆ, ಅಧ್ಯಕ್ಷೆಯಾಗುತ್ತೇನೆ ಎಂದೆಲ್ಲ ನಿರೀಕ್ಷಿಸಿರಲಿಲ್ಲ' ಎಂದು ಅಮರಾವತಮ್ಮ ಹೇಳಿದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ ಹೇಳಿಕೆ

ಮಕ್ಕಳ ಆನ್‌ಲೈನ್ ಗೀಳು ಮುಕ್ತಿಗೆ 10 ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್, ಆನ್‌ಲೈನ್ ಗೀಳಿನಿಂದ ಮಕ್ಕಳನ್ನು ಹೊರತರಲು ಜಿಲ್ಲಾವಾರು ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದ್ದು, ಅದಕ್ಕಾಗಿ ವಿವಿಧ ಕ್ಷೇತ್ರಗಳ ತಜ್ಞರು, ಸಾಮಾಜಿಕ ಕಾರ್ಯಕರ್ತರನ್ನು ಒಳಗೊಂಡ 10 ತಂಡಗಳನ್ನು ರಚಿಸಲಾಗುತ್ತಿದೆ ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ ಹೇಳಿದರು.

ಅನನ್ಯ ಎಜುಕೇಷನ್ ಅಂಡ್ ಎಂಪವರ್‌ಮೆಂಟ್ ಟ್ರಸ್ಟ್, ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಷನ್ ಸೋಮವಾರ ಹಮ್ಮಿಕೊಂಡಿದ್ದ 'ಮಕ್ಕಳ ಮೇಲಿನ ಆನ್‌ಲೈನ್ ಲೈಂಗಿಕ ಶೋಷಣೆ ತಡೆ' ಕುರಿತ ಸಮಾಲೋಚನಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಕೋವಿಡ್ ನಂತರ ಬಹುತೇಕ ಮಕ್ಕಳು ಆನ್‌ಲೈನ್‌ಗೆ ಅಂಟಿಕೊಂಡಿದ್ದಾರೆ. ಅವರನ್ನು ನಿಧಾನವಾಗಿ ವ್ಯಸನದಿಂದ ಹೊರತಂದು ಪುಸ್ತಕಗಳ ಓದು, ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಬೇಕಿದೆ. ದುಡುಕಿದರೆ ಮಕ್ಕಳ ಜೀವಕ್ಕೆ ಅಪಾಯ ಎದುರಾಗಲಿದೆ. ಇಂತಹ ಸೂಕ್ಷ್ಮ ವಿಚಾರಗಳನ್ನು ಅರ್ಥಮಾಡಿಸಲು ತಂಡದ ಸದಸ್ಯರು ಕನಿಷ್ಠ ಮೂರು ಜಿಲ್ಲೆಗಳಿಗೆ ಭೇಟಿ ನೀಡುವರು. ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ, ಪೋಷಕರ ಜತೆ ಚರ್ಚಿಸುವರು. ಸುದೀರ್ಘ ಅವಧಿ ಬಯಸುವ ಈ ಕಾರ್ಯವನ್ನು ತಂಡಗಳು ಕನಿಷ್ಠ ಐದು ವರ್ಷಗಳಾದರೂ ನಿರ್ವಹಿಸಬೇಕು ಎನ್ನುವ ಆಲೋಚನೆ ಇದೆ ಎಂದರು.

ಸಿಐಡಿ ಆರ್ಥಿಕ ವಿಭಾಗದ ಎಸ್.ಪಿ. ಎಂ.ಡಿ.ಶರತ್ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಖಾಸಗಿತನದ ಸುರಕ್ಷೆಯ ಖಾತ್ರಿ ಇರುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಅನಗತ್ಯ ಫೋಟೊ, ವಿಚಾರ ವಿನಿಮಯ ಮಾಡಿಕೊಳ್ಳಬಾರದು. ಸೈಬರ್ ಅಪರಾಧಗಳ ಕುರಿತು ಪೋಷಕರು ನಿಗಾವಹಿಸಬೇಕು. ಮಕ್ಕಳಿಗೆ ಜಾಗೃತಿ ಮೂಡಿಸಬೇಕು. ವಂಚನೆ, ಅಪಾಯದ ಮುನ್ಸೂಚನೆ ಸಿಕ್ಕ ತಕ್ಷಣ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷ ವೈ.ಮರಿಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇಂಟರ್‌ನ್ಯಾಷನಲ್ ಜಸ್ಟೀಸ್ ಮಿಷನ್ ವಿಭಾಗೀಯ ಉಪಾಧ್ಯಕ್ಷ ಎ.ಎಂ.ಅಶೋಕ್, ನಿಮ್ಹಾನ್ಸ್ ಮಾನಸಿಕ ಸಮಾಜಶಾಸ್ತ್ರದ ವಿಭಾಗದ ಮಾಜಿ ಉಪಾಧ್ಯಕ್ಷ ಡಾ.ಆರ್. ಧನಶೇಖರ್ ಸಾಂಡಿಯನ್, ಡಿಟಿಎಚ್ ಸಂಸ್ಥೆಯ ನಿರ್ದೇಶಕ ತಂಗಪೆರುಮಾಳ್ ಪೊನ್‌ಪಾಂಡಿ, ಚೈಲ್ಡ್ ರೈಟ್ ಟ್ರಸ್ಟ್ ಕಾರ್ಯಕಾರಿ ನಿರ್ದೇಶಕ ವಾಸುದೇವ ಶರ್ಮ, ಬೆಂಗಳೂರು ಕೇಂದ್ರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಭಾರತಿದೇವಿ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ತಂಡದಲ್ಲಿ ವಿವಿಧ ಕ್ಷೇತ್ರಗಳ ತಜ್ಞರು, ಸಾಮಾಜಿಕ ಕಾರ್ಯಕರ್ತರು ಭಾಗಿ
- ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ, ಪೋಷಕರ ಜತೆ ತಂಡದಿಂದ ಚರ್ಚೆ
- ಕನಿಷ್ಠ 5 ವರ್ಷಗಳಾದರೂ ತಂಡ ನಿರ್ವಹಿಸಬೇಕು ಎನ್ನುವ ಆಲೋಚನೆ



ಬೆಂಗಳೂರಿನಲ್ಲಿ ಸೋಮವಾರ ಮಕ್ಕಳ ಮೇಲಿನ ಆನ್‌ಲೈನ್ ಲೈಂಗಿಕ ಶೋಷಣೆ ತಡೆ ಕುರಿತ ಸಮಾಲೋಚನಾ ಸಭೆಯಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ ಮಾತನಾಡಿದರು. ಅಶೋಕ್ ಕುಮಾರ್, ತಂಗಪೆರುಮಾಳ್ ಪೊನ್‌ಪಾಂಡಿ, ಭಾರತಿ ದೇವಿ ಇದ್ದರು — ಪ್ರಜಾವಾಣಿ ಚಿತ್ರ


ದೇಶ ವಿಭಜನೆ ಒಂದು ದುರಂತ ಕಥೆ ಸ್ಮೃತಿ ಕುರಿತ ಪ್ರದರ್ಶಿಕೆಯನ್ನು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ವೀಕ್ಷಿಸಿದರು. ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್‌.ರವಿಕುಮಾರ್ ಇದ್ದರು.

'ವಿಭಜನೆಯ ಸತ್ಯ ಮರೆ ಮಾಚಿದ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಅಲ್ಪಸಂಖ್ಯಾತರು ಸುರಕ್ಷಿತವಾಗಿದ್ದಾರೆ. ಆದರೆ, ಕಾಂಗ್ರೆಸ್‌ನವರು ವಿದೇಶಗಳಿಗೆ ಹೋಗಿ ಭಾರತದಲ್ಲಿ ಅಲ್ಪಸಂಖ್ಯಾತರು ಸುರಕ್ಷಿತ ಅಲ್ಲ ಎಂದು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ವತಿಯಿಂದ ಸೋಮವಾರ ಆಯೋಜಿಸಿದ್ದ ದೇಶ ವಿಭಜನೆ ಒಂದು ದುರಂತ ಕಥೆ ಸ್ಮೃತಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಅಧಿಕಾರದ ಆಸೆಗಾಗಿ ಕಾಂಗ್ರೆಸ್‌ನವರು ತುಷ್ಟೀಕರಣ ರಾಜಕಾರಣ ಮುಂದುವರೆಸಿದ್ದಾರೆ ಎಂದು ಹರಿಹಾಯ್ದರು.

'ಜಗತ್ತಿನ ಇತಿಹಾಸದಲ್ಲಿ ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ಭಾರತದಂತಹ ಕೆಟ್ಟ ಸಂದರ್ಭ ಯಾವ ದೇಶಕ್ಕೂ ಬಂದಿಲ್ಲ. ಪರಕೀಯರ ಆಡಳಿತದಿಂದ ಸ್ವಾತಂತ್ರ್ಯ ಬಂದಾಗ ದೇಶ ಅಲ್ಲೋಲ–ಕಲ್ಲೋಲ ಆಗಿರುವ ಇತಿಹಾಸ ಭಾರತಕ್ಕೆ ಮಾತ್ರ ಇದೆ. ಇಷ್ಟೆಲ್ಲಾ ಆದರೂ ಸತ್ಯ ಹೇಳುವ ವ್ಯವಸ್ಥೆ ಬರಲಿಲ್ಲ. ಈ ದೇಶವನ್ನು ಬಹುಕಾಲ ಆಳ್ವಿಕೆ ಮಾಡಿದ ಕಾಂಗ್ರೆಸ್ ಸತ್ಯವನ್ನು ಮರೆಮಾಚಿತು' ಎಂದರು.

'ದೆಹಲಿಯಲ್ಲಿ ನಿರಾಶ್ರಿತರ ಕ್ಯಾಂಪ್‌ಗಳು ಈಗಲೂ ಇವೆ. ಅವರು ಅನುಭವಿಸಿರುವ ಯಾತನೆ ಕೇಳಲು ಆಗುವುದಿಲ್ಲ. ಹೃದಯ ಕಿವುಚುತ್ತದೆ. ಇಂತಹ ಹೇಯ ಕೃತ್ಯ ನಮ್ಮ ದೇಶದಲ್ಲಿ ಆಗಿದೆಯಾ ಅಂತ ನೋಡಿದರೆ ನಮಗೆ ನಾಚಿಕೆ ಆಗುತ್ತದೆ' ಎಂದು ಹೇಳಿದರು.

'ಈ ದೇಶದಲ್ಲಿ ಕಾಂಗ್ರೆಸ್ ಹುಟ್ಟುವುದಕ್ಕೆ ಮೊದಲೇ ಸ್ವಾತಂತ್ರ್ಯ ಹೋರಾಟ ಆರಂಭವಾಗಿತ್ತು. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ನರಗುಂದದ ಬಾಳಾ ಸಾಹೇಬ ಇವರ ಬಗ್ಗೆ ಇತಿಹಾಸದಲ್ಲಿ ವಿವರಗಳಿಲ್ಲ. ಕೇವಲ ಗಾಂಧಿ–ನೆಹರೂ ಅವರ ಹಿಂಬಾಲಕರ ವಿವರಗಳಿವೆ' ಎಂದರು.

'ದೇಶ ವಿಭಜನೆಗೆ ಒಪ್ಪಿದರೆ ಮಾತ್ರ ಸ್ವಾತಂತ್ರ್ಯ ನೀಡುತ್ತೇವೆ ಎಂದು ಬ್ರಿಟಿಷರು ಹೇಳಿದರು. ಆಗ ಗಾಂಧೀಜಿ ಮತ್ತು ನೆಹರು ಬ್ರಿಟಿಷರ ಮಾತಿಗೆ ಬೆಲೆ ಕೊಟ್ಟು ವಿಭಜನೆಗೆ ಒಪ್ಪಿದರು. ಇದರಿಂದ ಭೌಗೋಳಿಕ ಮಾತ್ರವಲ್ಲ, ಭಾರತೀಯರ ಜೀವನದ ವಿಭಜನೆ ಆಯಿತು. ರಕ್ತದ ಕೋಡಿ ಹರಿಯಿತು. ಅತ್ಯಾಚಾರ, ಕೊಲೆ, ಅನಾಚಾರಗಳು ನಡೆದವು. ಪ್ರತಿ ಊರಿನಲ್ಲೂ ಮನಸುಗಳು ಒಡೆದವು' ಎಂದು ಬೊಮ್ಮಾಯಿ ಹೇಳಿದರು.

'1 ಕಿ.ಮೀ ಕಾಮಗಾರಿಗೆ 10 ಕಿ.ಮೀ ಬಿಲ್'

ಉಡುಪಿ: ಬಿಜೆಪಿ ಸರ್ಕಾರದ ಅವಧಿಯಲ್ಲಿ 1ಕಿ.ಮೀ ಕಾಮಗಾರಿ ಮಾಡಿ 10 ಕಿ.ಮೀ ಕಾಮಗಾರಿಗೆ ಬಿಲ್ ಕೊಟ್ಟಿದ್ದಾರೆ. 24 ಗಂಟೆಯೊಳಗೆ ಕಾಮಗಾರಿ ಮಂಜೂರಾಗಿ ಕೆಲಸವನ್ನೂ ಮುಗಿಸಲಾಗಿದೆ. ವಾಸ್ತವದಲ್ಲಿ ಇದೆಲ್ಲ ಸಾಧ್ಯವೇ ಎಂದು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಶ್ನಿಸಿದರು.

ಸೋಮವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ, ಸಮರ್ಪಕವಾಗಿ ಕಾಮಗಾರಿ ಮಾಡಿದ ಗುತ್ತಿಗೆದಾರರಿಗೆ ಮಾತ್ರ ಸರ್ಕಾರ ಬಿಲ್ ಪಾವತಿಸಲಿದೆ. ಬಿಬಿಎಂಪಿ ನಡೆದಿರುವ ಅವ್ಯವಹಾರದ ಬಗ್ಗೆ ವಿಶೇಷ ತನಿಖಾ ತಂಡ ರಚನೆ ಮಾಡಲಾಗಿದ್ದು ತನಿಖೆ ನಡೆಯುತ್ತಿದೆ ಎಂದು ತಿಳಿಸಿದರು.

ಕಳೆದ ಮೂರು ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ಹೊಸ ಯೋಜನೆಗೆ ಕೈಹಾಕಿಲ್ಲ. ಹಿಂದಿನ ಸರ್ಕಾರದ ಕಾಮಗಾರಿಗಳು ನಡೆಯುತ್ತಿವೆ. ಹೊಸ ಕಾಮಗಾರಿಗಳು ನಡೆಯದಿರುವಾಗ ಕಮಿಷನ್ ವಿಚಾರ ಎಲ್ಲಿಂದ ಬರಲಿದೆ. ಕಾಂಗ್ರೆಸ್ ಕಮಿಷನ್ ಕೇಳಿರುವ ಯಾವ ಪ್ರಕರಣಗಳು ಇಲ್ಲ ಎಂದು ಸಚಿವೆ ಹೇಳಿದರು.



ಐಟಿಐ ಮುಖ್ಯರಸ್ತೆ ತಡೆದು ಪೋಷಕರು ಹಾಗೂ ವಿದ್ಯಾರ್ಥಿಗಳು ಪ್ರತಿಭಟಿಸಿದರು

ಕೆ.ಆರ್‌. ಪುರಂ: ಐಟಿಐ ದ್ವಾರ ತೆರವಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸರ್ಕಾರಿ ಆಸ್ಪತ್ರೆ ಹಿಂಭಾಗದಿಂದ ಪೂರ್ವ ಭಾಗದ ಐಟಿಐ ಕಾಲೊನಿಗೆ ಪ್ರವೇಶಿಸಲು ಅಡ್ಡಿಯಾಗಿರುವ ಐಟಿಐ ಕಾಂಪೌಂಡ್ ಗೇಟ್ ಅನ್ನು ತೆರವುಗೊಳಿಸುವಂತೆ ಒತ್ತಾಯಿಸಿ ಐಟಿಐ ಮುಖ್ಯರಸ್ತೆ ತಡೆದು ಪೋಷಕರು ಹಾಗೂ ವಿದ್ಯಾರ್ಥಿಗಳು ಪ್ರತಿಭಟಿಸಿದರು.

ಸರ್ಕಾರಿ ಆಸ್ಪತ್ರೆ ಹಿಂಭಾಗ ಪೂರ್ವ ಭಾಗದಲ್ಲಿ ಐಟಿಐ ಕಾಲೊನಿಗೆ ಪ್ರವೇಶಿಸಲು ಸುಮಾರು ಐವತ್ತು ವರ್ಷಗಳಿಂದ ಇರುವ ಮಾರ್ಗವನ್ನು ಲಾಕ್ ಡೌನ್ ನೆಪವೊಡ್ಡಿ ಐಟಿಐ ಅಧಿಕಾರಿಗಳು ಮುಚ್ಚಿರುವುದು ಸರಿಯಲ್ಲ. ಗೇಟ್ ಅನ್ನು ಮುಚ್ಚಿರುವುದರಿಂದ ಐಟಿಐ ಶಾಲೆಗೆ ಮಕ್ಕಳನ್ನು ಕರೆದೊಯ್ಯಲು ಹರಸಾಹಸಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪೋಷಕರು ದೂರಿದರು.

ಐಟಿಐ ಕಾಲೊನಿಯಲ್ಲಿರುವ ಐಟಿಐ ವಿದ್ಯಾಮಂದಿರ ಶಾಲೆಯಲ್ಲಿ ಸುಮಾರು ಒಂದೂವರೆ ಸಾವಿರಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಐಟಿಐ ಪೂರ್ವ ಭಾಗದ ಮಾರ್ಗವನ್ನು ತೆರವುಗೊಳಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಪಾಲಿಕೆ ಮಾಜಿ ಸದಸ್ಯ ಬಂಡೆ ರಾಜಣ್ಣ ಎಚ್ಚರಿಸಿದರು.

ಪ್ರತಿಭಟನೆ ಸ್ಥಳಕ್ಕೆ ಬಂದ ಐಟಿಐ ಸಂಸ್ಥೆ ಅಧಿಕಾರಿಗಳು, ಈ ಸಂಬಂಧ ಪರಿಶೀಲಿಸಿ ಒಂದು ವಾರದೊಳಗೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಾಗಿ ಭರವಸೆ ನೀಡಿದರು.

ಮತ್ತಿಕೆರೆ: ಸಂಚಾರಿ ವಿಜ್ಞಾನ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ಬಿಬಿಎಂಪಿ ಮತ್ತಿಕೆರೆ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಸ್ತು ಸಂಗ್ರಹಾಲಯ ಹಾಗೂ ಇಸ್ರೊ ವತಿಯಿಂದ 'ಸಂಚಾರಿ ವಿಜ್ಞಾನ ಪ್ರದರ್ಶನ' ಆಯೋಜಿಸಲಾಗಿದೆ.

ಕಾಲೇಜಿನ ಪ್ರಾಂಶುಪಾಲ ಜಿ.ಎನ್. ಆನಂದ್ ಸೋಮವಾರ ಪ್ರದರ್ಶನಕ್ಕೆ ಚಾಲನೆ ನೀಡಿದರು. ಕಾಲೇಜಿನಲ್ಲಿ ಎರಡು ಸಂಚಾರಿ ವಿಜ್ಞಾನ ಪ್ರದರ್ಶನವಿತ್ತು. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭೇಟಿ ನೀಡಿ ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು.

ಇಸ್ರೊ ಸಾಧನೆಯಾದ ಆರ್ಯಭಟದಿಂದ ಚಂದ್ರಯಾನ-2ರವರೆಗಿನ ಎಲ್ಲಾ ರಾಕೆಟ್ ಸ್ಯಾಟಲೈಟ್ ಮಾದರಿಗಳನ್ನು ಈ ಸಂಚಾರಿ ಬಸ್ಸಿನಲ್ಲಿ ಇರಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಬೆಳೆಸುವುದು, ದೇಶದ ಸಾಧನೆಯ ಅರಿವು ಮೂಡಿಸುವುದು ಈ ಪ್ರದರ್ಶನದ ಉದ್ದೇಶವಾಗಿದೆ ಎಂದು ಆನಂದ್ ತಿಳಿಸಿದರು.

ವಿದ್ಯಾರ್ಥಿಗಳಿದ್ದಲ್ಲಿಗೆ ಸಂಚಾರಿ ವಾಹನದ ಮೂಲಕ ವಿಜ್ಞಾನವನ್ನು ಮೂಡಿಸಲಾಗುತ್ತಿದೆ. ಸಂಚಾರಿ ವಾಹನದಲ್ಲಿ ವಿದ್ಯುತ್ ಮತ್ತು ಕಾಂತತ್ವದ ಕುರಿತಾದ ಸುಮಾರು 20 ಮಾದರಿಗಳಿವೆ. ಇಸ್ರೊ ವಿಜ್ಞಾನಿಯಾದ ಎಚ್.ಎಲ್. ಶ್ರೀನಿವಾಸ್ ಹಾಗೂ ವಿಐಟಿಎಂ ಶಿಕ್ಷಣಾಧಿಕಾರಿಯಾದ ಪ್ರಶಾಂತ್ ಕುಮಾರ್ ಬಿಸ್ವಾಲ್ ವಿಜ್ಞಾನ ಪ್ರದರ್ಶನದ ಮೇಲುಸ್ತುವಾರಿ ವಹಿಸಿದ್ದರು.



'ಸಂಚಾರಿ ವಿಜ್ಞಾನ ಪ್ರದರ್ಶನ'ದ ಬಸ್ ಹೊರಗೆ ಒಳಗೆ ವಿದ್ಯಾರ್ಥಿಗಳು

ಸೂರು ಒದಗಿಸಲು ಮೂಲ ನಿವಾಸಿ ಮಹಾ ಒಕ್ಕೂಟ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸೂರಿಗಾಗಿ ಒತ್ತಾಯಿಸಿ ಮೂಲ ನಿವಾಸಿ ಮಹಾ ಒಕ್ಕೂಟದ ಕಾರ್ಯಕರ್ತರು ಕೆ.ಆರ್. ಪುರದ ತಾಲ್ಲೂಕು ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯ ಬಿದರಹಳ್ಳಿ ಹೋಬಳಿ ಚಿಮಸಂದ್ರ ಗ್ರಾಮದ ಸರ್ವೆ ನಂ 115 ರಲ್ಲಿ 79 ಎಕರೆ 13 ಗುಂಟೆ ಗೋಮಾಳ ಜಮೀನು, ಹಿರಂಡಹಳ್ಳಿ ಸರ್ವೇ ನಂ.39 ರಲ್ಲಿ 4 ಎಕರೆ, ಚಿಮಸಂದ್ರ ಗ್ರಾಮದ 77ರಲ್ಲಿ 155 ಎಕರೆ, ಪಟ್ಟಂದೂರು ಅಗ್ರಹಾರ ಸೇರಿದಂತೆ ವಿವಿಧ ನೂರಾರು ಎಕರೆ ಸರ್ಕಾರಿ ಜಮೀನು ಹೊಂದಿದೆ. ಈ ಸರ್ಕಾರಿ ಜಮೀನಿನಲ್ಲಿ ಬಡವರಿಗೆ ನಿವೇಶನ ಹಾಗೂ ಆಶ್ರಯ ಯೋಜನೆಯಡಿಯಲ್ಲಿ ವಸತಿ ಸಮುಚ್ಚಯದಲ್ಲಿ ವಸತಿ ಹಂಚುವಂತೆ ಒತ್ತಾಯಿಸಿ ಬೆಂಗಳೂರು ಪೂರ್ವ ತಾಲ್ಲೂಕು ತಹಶಿಲ್ದಾರ್ ಗೆ ಮನವಿಯನ್ನು ಸಲ್ಲಿಸಿದರು.

ಕರ್ನಾಟಕ ರಿಪಬ್ಲಿಕನ್ ಸೇನೆ ರಾಜ್ಯಾಧ್ಯಕ್ಷ ಜಿಗಣಿ ಶಂಕರ್ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು. ಅರ್ಹ ಫಲಾನುಭವಿಗಳಿಗೆ ನಿಯಮಾನುಸಾರ ನಿವೇಶನ ನೀಡಲು ಕ್ರಮ ವಹಿಸುವುದಾಗಿ ತಹಶೀಲ್ದಾರ್ ವೈ. ರವಿ ಭರವಸೆ ನೀಡಿದರು.

ನಗರದಲ್ಲಿ ಇಂದು

ವಾಸುದೇವಾಚಾರ್ಯ ಅವರ ಪುಣ್ಯತಿಥಿ, ಎಸ್. ರಂಗನಾಥ್ ಅವರ 'ಸಂಗೀತದ ಬಗ್ಗೆ ವಿದ್ವಾಂಸರ ಅಭಿಪ್ರಾಯ' ಪುಸ್ತಕ ಬಿಡುಗಡೆ: ಗಾಯನ: ಲಕ್ಷ್ಮಿ ನಾಗರಾಜ್, ಇಂದು ನಾಗರಾಜ್, ಪಿಟೀಲು: ಆರ್. ಅಚ್ಯುತ್ ರಾವ್, ಮೃದಂಗ: ಕೇಶವ ದತ್ತ, ಘಟ: ಶರತ್ ಕೌಶಿಕ್, ಆಯೋಜನೆ: ಶ್ರೀಮದ್ವಾದಿರಾಜ ಆರಾಧನ ಟ್ರಸ್ಟ್, ಸ್ಥಳ: ವಾಸುದೇವ ಗಾನ ಮಂದಿರ, ವಾದಿರಾಜ ಕಲಾಭವನ, ಅಕ್ಷಯನಗರ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10ರಿಂದ


ಹಂ.ಪ. ನಾಗರಾಜಯ್ಯ

ಐದು ಪುಸ್ತಕಗಳ ಬಿಡುಗಡೆ: ಕೆ. ಮುರಳೀಧರ ಮತ್ತು ರಾ.ನಂ. ಚಂದ್ರಶೇಖರ ಅವರ 'ಕನ್ನಡ ಯುವಜನತೆಗೆ ಕೈದೀವಿಗೆ', ಡಿ.ವಿ. ಗುರುಪ್ರಸಾದ್ ಅವರ 'ಮಾಯನ್ನರ ಮಾಯಾನಗರಿ', ಪಿ. ನಾರಾಯಣಸ್ವಾಮಿ ಅವರ 'ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದ 35 ದಿಟ್ಟ ಮಹಿಳೆಯರು', ಜಯಪ್ರಕಾಶ್ ನಾಗತಿಹಳ್ಳಿ ಅವರ 'ತಿರುವುಗಳ ಅರಿವು', ಎಸ್. ಕೆ. ಉಮೇಶ್ ಅವರ 'ಉರಿದ ಊರು' ಪುಸ್ತಕಗಳ ಬಿಡುಗಡೆ: ಹಂ.ಪ. ನಾಗ ರಾಜಯ್ಯ, ಆಯೋಜನೆ ಮತ್ತು ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 11

'ಸಾವಯವ ಸಂತೆ' ಅತಿಥಿಗಳು: ರಿಷಿ, ಸುಜಾತ ವೆಂಕಟೇಶ್, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್ ಆರ್ಗ್ಯಾನಿಕ್ ಸ್ಟೇಟ್, ಮಲ್ಲೇಶ್ವರ, ಬೆಳಿಗ್ಗೆ 11.30

ಸಾಧಕ ವೈದ್ಯರಿಗೆ ಪ್ರಶಸ್ತಿ ಪ್ರದಾನ: ವಾರ್ಷಿಕ ಪ್ರಶಸ್ತಿ ಪುರಸ್ಕೃತರು: ಡಾ. ಸುಧಾರಾಣಿ ಕೆ., ಡಾ. ಲಕ್ಷ್ಮಿ ಚಂಪಕ ವಾಸ್, ಡಾ.ಕೆ.ಎಸ್. ಮಾಧವ ರಾವ್, ಮೆಚ್ಚುಗೆ ಪ್ರಮಾಣಪತ್ರ: ಡಾ.ಎ. ಸುಬ್ಬಣ್ಣ ಶೆಟ್ಟಿ, ಗುರುವಂದನೆ: ಡಾ.ಗಂಗಾಧರ ಎನ್. ಬೆಳವಾಡಿ, ಡಾ. ವೀಣಾ ಆಚಾರ್, ಡಾ.ಎಚ್.ಸಿ. ನಂಜುಂಡಪ್ಪ, ಡಾ. ಇ.ಆರ್. ನಾಗರಾಜ್, ಡಾ. ಗುರುಚರಣ ಸಿಂಗ್, ಆಯೋಜನೆ: ಬೆಂಗಳೂರು ಮೆಡಿಕಲ್ ಕಾಲೇಜ್ ಅಲ್ಯುಮಿನಿ ಅಸೋಸಿಯೇಷನ್, ಸ್ಥಳ: ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್, ಚಾಮರಾಜಪೇಟೆ, ಸಂಜೆ 5.30

'ಸ್ವರ ಸಪ್ತಕ್': ಗಾಯನ: ಲಕ್ಷ್ಮಿನಾರಾಯಣ ಭಟ್, ತಬಲಾ: ಸಂತೋಷ್ ಹೆಗಡೆ, ಹಾರ್ಮೋನಿಯಂ: ವಿಘ್ನೇಶ್ ಭಾಗವತ್, ಸಿತಾರ್: ಪಾರ್ಥ ಬೋಸ್, ತಬಲಾ: ರಾಹುಲ್ ಪೊಪಲಿ, ಆಯೋಜನೆ: ಸಪ್ತಕ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30


'ಮುಸ್ಸಂಜೆಯ ಮೌನ' ನಾಟಕ ಪ್ರದರ್ಶನ: ಆಯೋಜನೆ: ನೋಬೋ ನಗರ ಸೈಟ್ ಓನರ್ಸ್ ಆ್ಯಂಡ್ ರೆಸಿಡೆಂಟ್ ಅಸೋಸಿಯೇಷನ್, ಸ್ಥಳ: ಸರಸ್ವತಿ ಕಲಾ ಮಂದಿರ, ನೋಬೋನಗರ, ಸಂಜೆ 6

ಸ್ವಾತಂತ್ರ್ಯ ದಿನಾಚರಣೆಯ ವಿಶೇಷ

ಅತಿಥಿಗಳು: ಮೋಹನ್ ಭಾಗವತ್, ದತ್ತಾತ್ರೇಯ ಹೊಸಬಾಳೆ, ಆಯೋಜನೆ: ಸಮರ್ಥ ಭಾರತ, ಸ್ಥಳ: ವಾಸವಿ ಕನ್ವೆನ್ಷನ್ ಹಾಲ್, ಬಸವನಗುಡಿ, ಬೆಳಿಗ್ಗೆ 7

ರಕ್ತದಾನ ಶಿಬಿರ, ಧ್ವಜಾರೋಹಣ: ಪುಸ್ತಕ ಮನೆ ಹರಿಹರಪ್ರಿಯ, ಆಯೋಜನೆ: ಸಾರಕ್ಕಿ ಕೆರೆ ನಡಿಗೆದಾರರ ಸಂಘ, ಸ್ಥಳ: ಸಾರಕ್ಕಿ ಕೆರೆ ಈಶಾನ್ಯ ದ್ವಾರ, ಬೆಳಿಗ್ಗೆ 7

ಸ್ವಾತಂತ್ರ್ಯ ದಿನಾಚರಣೆ: ಉದ್ಘಾಟನೆ: ಎಲ್.ಎನ್. ಮುಕುಂದ ರಾಜ್, ಅತಿಥಿ: ಜಗದೀಶ್, ಅಧ್ಯಕ್ಷತೆ: ಸಿ.ಕೆ. ರವಿಚಂದ್ರ,


ಎಲ್‌.ಎನ್‌. ಮುಕುಂದರಾಜ್

ಸಾಮೂಹಿಕ ಧ್ವಜಾರೋಹಣ: ಗಾಯಿತ್ರಿ, ರಾಜಶೇಖರ್ ಶೆಟ್ಟಿ, ರಾಜಗೋಪಾಲ್, ಜಯಪ್ರಕಾಶ್ ಗುಪ್ತ, ಆಯೋಜನೆ: ರಾಜ್ಯ ನಡಿಗೆದಾರರ ಒಕ್ಕೂಟ, ಸ್ಥಳ: ಲಾಲ್‌ಬಾಗ್ ಪಶ್ಚಿಮದ್ವಾರದ ಬಳಿ, ಬೆಳಿಗ್ಗೆ 7.30

ರಾಷ್ಟ್ರ ಧ್ವಜ ಪಥಸಂಚಲನ, ಸ್ವಾತಂತ್ರ್ಯ ಮತ್ತು ಸಂವಿಧಾನ ಸಭೆ, ಧ್ವಜಾರೋಹಣ: ಎಂ. ವೆಂಕಟಸ್ವಾಮಿ, ಅತಿಥಿಗಳು: ಬಿ.ಟಿ. ಲಲಿತಾ ನಾಯಕ್, ಕೆ.ಟಿ. ವಿಜಯ್ ಕುಮಾರ್, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಸದಾಶಿವನಗರದಿಂದ ನಾಗಸೇನ ಶಾಲೆವರೆಗೂ, ಬೆಳಿಗ್ಗೆ 8.30

ತಿರಂಗಾ ಯಾತ್ರೆ: ಆಯೋಜನೆ: ನಿಲಾದ್ರಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಶ್ರೀರಾಮ ಸಿಂಘಾನಿಯಾ ಅಪಾರ್ಟ್‌ಮೆಂಟ್, ಬೆಳಿಗ್ಗೆ 10

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಮಾಲಾರ್ಪಣೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಉಪಸ್ಥಿತಿ: ರಾಕೇಶ್ ಸಿಂಗ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ಎಚ್. ವಿಶ್ವನಾಥ್, ರಿಜ್ವಾನ್ ಅರ್ಷದ್, ಆಯೋಜನೆ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಆವರಣ, ರೈಲ್ವೆ ನಿಲ್ದಾಣದ ಎದುರು, ಬೆಳಿಗ್ಗೆ 11

'ಬುಕ್ ಬ್ರಹ್ಮ ಸ್ವಾತಂತ್ರ್ಯೋತ್ಸವ ಕಥಾ ಸ್ಪರ್ಧೆ ಮತ್ತು ಕಾದಂಬರಿ ಪುರಸ್ಕಾರ–2023 ಪ್ರಶಸ್ತಿ ಪ್ರದಾನ: ಅತಿಥಿಗಳು: ಪರಮಿತ ಸತ್ಪತಿ ತ್ರಿಪಾಠಿ, ಚಾರು ನಿವೇದಿತಾ, ಉದಯ ಶಂಕರ್ ಪುರಾಣಿಕ್, ಆಯೋಜನೆ: ಬುಕ್ ಬ್ರಹ್ಮ, ಸ್ಥಳ: ಪೂರ್ವಂಕರ ಸಭಾಂಗಣ, ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 4.30ರಿಂದ

ಸಾಂಸ್ಕೃತಿಕ ಕಾರ್ಯಕ್ರಮಗಳು: ಉಪಸ್ಥಿತಿ: ಸಿದ್ದರಾಮಯ್ಯ, ಸಿತಾರ್: ಪ್ರದೀಪ್ ಮತ್ತು ತಂಡ, ದೇಶಭಕ್ತಿ ಗೀತೆ: ಮೃತ್ಯುಂಜಯ ದೊಡ್ಡವಾಡ ಮತ್ತು ತಂಡ, ಸುಗಮ ಸಂಗೀತ: ಕಂಬದ ರಂಗಯ್ಯ ಮತ್ತು ತಂಡ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಅಲ್ಲಲ್ಲಿ ಧ್ವಜಾರೋಹಣ

ಸುಪ್ರಜಾನಗರ: ಪ್ರಶಾಂತ್ ಸಂಬರಗಿ, ಪರಮೇಶ್, ಆಯೋಜನೆ ಮತ್ತು ಸ್ಥಳ: ಸುಪ್ರಜಾನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಧ್ವಜ ಸ್ತಂಭ, ಸುಪ್ರಜಾನಗರ, ಬೆಳಿಗ್ಗೆ 8.30

ಕ್ವೀನ್ಸ್ ರಸ್ತೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಸಿದ್ದರಾಮಯ್ಯ, ಸ್ಥಳ: ಕೆಪಿಸಿಸಿ ಕಚೇರಿ ಮುಂಭಾಗ, ಬೆಳಿಗ್ಗೆ 8.15

ಜಯನಗರ: ಡಾ. ಎಂ.ಕೆ. ರಮೇಶ್, ಆಯೋಜನೆ ಮತ್ತು ಸ್ಥಳ: ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಳಿಗ್ಗೆ 9

ಜ್ಞಾನ ಭಾರತಿ ಆವರಣ: ಜಯಕರ ಎಸ್.ಎಂ., ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 9

ಡಾ.ಬಿ.ಆರ್. ಅಂಬೇಡ್ಕರ್ ವೀದಿ: ಲಿಂಗರಾಜ ಗಾಂಧಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 9

ಜಿಕೆವಿಕೆ ಆವರಣ: ಆಯೋಜನೆ: ಅಖಿಲ ಕರ್ನಾಟಕ ಮಹಮದೀಯರ ಕನ್ನಡ ವೇದಿಕೆ, ಸ್ಥಳ: ಮತ್ತಿಕೆರೆ ಮಸ್ಜೀದ್–ಎ–ತಾಹ ಆಡಳಿತ ಮಂಡಳಿ, ಎಂ.ಎಸ್.ಆರ್. ರಸ್ತೆ, ಮತ್ತಿಕೆರೆ, ಬೆಳಿಗ್ಗೆ 9

ಎಸ್.ವಿ. ಸುರೇಶ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಬೆಳಿಗ್ಗೆ 9

ಮಹಾತ್ಮ ಗಾಂಧಿ ರಸ್ತೆ: ಸಿದ್ದರಾಮಯ್ಯ, ಸ್ಥಳ: ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನ, ಬೆಳಿಗ್ಗೆ 9

ಹೊಂಬೇಗೌಡ ನಗರ: ಎಚ್. ಎನ್. ನಾಗ ಮೋಹನದಾಸ್, ಅಧ್ಯಕ್ಷತೆ: ಎಚ್. ಶರತ್ ಚಂದ್ರ, ಆಯೋಜನೆ ಮತ್ತು ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆಯ ಆವರಣ, ಬೆಳಿಗ್ಗೆ 9.30


ಎಚ್‌.ಎನ್‌. ನಾಗಮೋಹನದಾಸ್

ವಿಶ್ವೇಶ್ವರಪುರ: ಸ್ಥಳ: ಸಜ್ಜನರಾವ್ ವೃತ್ತ, ಬೆಳಿಗ್ಗೆ 10

ಕೊಡಿಗೇಹಳ್ಳಿ: ಅತಿಥಿಗಳು: ಎಚ್. ಎಸ್.ಬಿ. ನಾಯಕ್, ಕೃಷ್ಣಪ್ಪ, ಡಿ. ಸಿದ್ಧರಾಜು, ಆಯೋಜನೆ: ನ್ಯೂ ಹಾರ್ಡ್‌ವಿಕ್ ಇಂಡಿಯನ್ ಸ್ಕೂಲ್, ಬೆಳಿಗ್ಗೆ 8.30

ಕುವೆಂಪುನಗರ: ಕೆ.ಸಿ. ಗಂಗಾಧರ್, ಭರತ್ ಬಾಷ, ವಿ. ನಾರಾಯಣ, ಆಯೋಜನೆ: ಒಕ್ಕಲಿಗರ ಜಾಗೃತಿ ವೇದಿಕೆ, ಸ್ಥಳ: ವೀರಾಂಜನೇಯ ಸ್ವಾಮಿ ದೇವಸ್ಥಾನದ ಆವರಣ, ಬೆಳಿಗ್ಗೆ 10.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ತಮ್ಮ ಬಳಿ ಈಗಾಗಲೇ ಇರುವುದರ ಬಗ್ಗೆ ಯಾರಿಗೆ ತೃಪ್ತಿ ಇರುವುದಿಲ್ಲವೋ ಅಂತಹವರು ಎಂದಿಗೂ ಸಂತೋಷದಿಂದ ಇರಲು ಸಾಧ್ಯವಿಲ್ಲ.

–ಗೌತಮ ಬುದ್ಧ

ಆನೆಗಳ ಸಂಖ್ಯೆಯಲ್ಲೂ ದಾಖಲೆ ಏರಿಕೆ ಸಂಘರ್ಷ ತಪ್ಪಿಸಿ, ಸಾಮರಸ್ಯ ರೂಪಿಸಿ

ಆನೆಗಳ ವಿಷಯದಲ್ಲಿ ಕರ್ನಾಟಕಕ್ಕೆ ಸಿಕ್ಕ ಜಾಗತಿಕ ಪ್ರಸಿದ್ಧಿ ನಮ್ಮ ದೇಶದ ಬೇರಾವ ರಾಜ್ಯಗಳಿಗೂ ಇಲ್ಲ. ಹಿಂದೆ ಮೈಸೂರು ಅರಸರ ಕಾಲದಲ್ಲಿ ಕಬಿನಿ, ಕಾಕನಕೋಟೆ ಅರಣ್ಯಗಳಲ್ಲಿ ಕಾಡಾನೆಗಳನ್ನು ಖೆಡ್ಡಾಕ್ಕೆ ಕೆಡವಿ ಪಳಗಿಸುವುದನ್ನು ನೋಡಲೆಂದೇ ವಿದೇಶಿ ಗಣ್ಯರು ಬರುತ್ತಿದ್ದರು. ಅಂಥ ಕ್ರೂರ ರಂಜನೆಗೆ ತಡೆ ಹಾಕಿದ ನಂತರವೂ ರಾಜವೈಭೋಗದ ಸಂಕೇತವಾಗಿ ಈಗಲೂ ದಸರಾ ಜಂಬೂಸವಾರಿ ಪ್ರವಾಸಿಗರನ್ನು ಆಕರ್ಷಿಸುತ್ತಲೇ ಇದೆ. ಈಚಿನ ಗಜಗಣತಿಯ ಪ್ರಕಾರ, ನಮ್ಮಲ್ಲಿ ಕಾಡಾನೆಗಳ ಸಂಖ್ಯೆ 6,395ಕ್ಕೆ ಏರಿದ್ದು, ಕರ್ನಾಟಕವೇ ಅಗ್ರಸ್ಥಾನದಲ್ಲಿದೆ. ಈಚೆಗಷ್ಟೇ ನಾವೆಲ್ಲ ಹೆಮ್ಮೆಪಡುವಂತೆ ಹುಲಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದನ್ನು ವನ್ಯಪ್ರೇಮಿಗಳು ಸಂಭ್ರಮಿಸಿದ್ದರು. ಹುಲಿಯ ವಿಷಯದಲ್ಲಿ ಅಂದು ಮುಂದಿಟ್ಟ ಪ್ರಶ್ನೆಯನ್ನೇ ಇಂದು ಕಾಡಾನೆಗಳ ವಿಷಯದಲ್ಲೂ ಎತ್ತಬೇಕಾಗಿದೆ: ಸಂಭ್ರಮ ನಮಗೇನೋ ಸರಿ, ಆದರೆ ಕಾಡಂಚಿನಲ್ಲಿ ವಾಸಿಸುವ ಜನರೂ ಈ ಖುಷಿಯಲ್ಲಿ ಪಾಲುದಾರರೇ? ಪ್ರಶ್ನೆ ಗಡಚಿನದು. ಆನೆ– ಮಾನವ ಸಂಘರ್ಷ ವರ್ಷವರ್ಷಕ್ಕೆ ಹೆಚ್ಚುತ್ತಿದೆ. ಹಿಂದೆಲ್ಲ ಖೆಡ್ಡಾದಲ್ಲಿ ಕಾಡಾನೆಗಳು ಮಾತ್ರ ಗಾಸಿಗೊಂಡು, ಸೋತು ಶರಣಾಗುತ್ತಿದ್ದವು. ಈಗ ಗ್ರಾಮೀಣ ಜನರೂ ಹೈರಾಣಾಗುತ್ತಿದ್ದಾರೆ; ಪ್ರಾಣ ತೆರುತ್ತಿದ್ದಾರೆ; ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಅವರಿಗೇನೊ ಸರ್ಕಾರ ತುಸು ನಿಧಾನವಾಗಿಯಾದರೂ ಪರಿಹಾರ ನೀಡುತ್ತಿದೆ. ಆದರೆ ಆನೆಗಳ ಸಂಕಷ್ಟಕ್ಕೆ ಪರಿಹಾರ ಏನಿದೆ, ಎಲ್ಲಿದೆ? ಈ ವರ್ಷದ ಮೊದಲ ಆರು ತಿಂಗಳುಗಳಲ್ಲೇ 22 ಆನೆಗಳು ಸತ್ತಿವೆ. ಆರು ಆನೆಗಳು ಅನಧಿಕೃತ ವಿದ್ಯುತ್ ಬೇಲಿಗೆ ಸಿಲುಕಿ ಸತ್ತಿವೆ. ಅಂಬಾರಿ ಹೊತ್ತು ಮೆರೆದಿದ್ದ ಬಲರಾಮನಿಗೇ ಗುಂಡೇಟು ಬಿದ್ದಿತ್ತಲ್ಲ?



ಆನೆಗಳ ಸಮಸ್ಯೆ ಆನೆಗಾತ್ರದ್ದಾಗುತ್ತಿದೆ. ಅಭಯಾರಣ್ಯಗಳ ಧಾರಣಾ ಶಕ್ತಿಯನ್ನು ಮೀರಿ ಅವುಗಳ ಸಂಖ್ಯೆ ಹೆಚ್ಚುತ್ತಿದೆ

ಆನೆಗಳ ಸಮಸ್ಯೆ ಆನೆಗಾತ್ರದ್ದಾಗುತ್ತಿದೆ. ಅಭಯಾರಣ್ಯಗಳ ಧಾರಣಾ ಶಕ್ತಿಯನ್ನು ಮೀರಿ ಅವುಗಳ ಸಂಖ್ಯೆ ಹೆಚ್ಚುತ್ತಿದೆ. ಮೇವು ಹುಡುಕಿಕೊಂಡು 792 ಆನೆಗಳು ಆಸುಪಾಸಿನ ಕಾಡುಮೇಡುಗಳಲ್ಲಿ ಅಲೆಯುತ್ತಿದ್ದು, 161 ಆನೆಗಳು ಕಾಫಿ ಎಸ್ಟೇಟ್‌ನಂಥ ಖಾಸಗಿ ಕ್ಷೇತ್ರದಲ್ಲಿ ಬದುಕು ಕಟ್ಟಿಕೊಂಡಿವೆ. ಕಾಡಿನಿಂದ ಕಾಡಿಗೆ ಅವುಗಳ ಮುಕ್ತ ಸಂಚಾರಕ್ಕೆಂದು ಪ್ರತ್ಯೇಕ ಕಾರಿಡಾರ್ ನಿರ್ಮಿಸಬೇಕೆಂಬ ವಿಚಾರವಿದ್ದರೂ ಹೆದ್ದಾರಿಜಾಲ, ವಿದ್ಯುತ್ ಮಾರ್ಗ, ಜಲಾಶಯ, ಗಣಿಗಾರಿಕೆಯಂಥ ಅಡೆತಡೆಗಳ ಜೊತೆ ಅಲ್ಲಲ್ಲಿ ಪ್ರತಿಷ್ಠಿತ ಬಿಳಿಯಾನೆಗಳೇ ರೆಸಾರ್ಟ್ ನಿರ್ಮಿಸಿಕೊಂಡು ಕೂತಿರುವಾಗ ಕೃಷಿಕರನ್ನು ಮಾತ್ರ ಎತ್ತಂಗಡಿ ಮಾಡುವಷ್ಟಕ್ಕೆ ಈ ಯೋಜನೆ ಸೀಮಿತವಾಗುತ್ತದೆ. ಆನೆಗಳು ರೈತರ ಹೊಲಕ್ಕೆ ನುಗ್ಗದಂತೆ ರೈಲುಕಂಬಿಗಳ ಸದೃಢ ಬೇಲಿಯನ್ನು ಎಲ್ಲಾ ಕಡೆ ವಿಸ್ತರಿಸಲು ಹಣಕಾಸಿನ ಅಡಚಣೆ ಎದುರಾಗಿದೆ. ಗಜದಟ್ಟಣೆ ಹೆಚ್ಚಾಗಿರುವ ಪ್ರದೇಶಗಳಿಂದ ನೂರಾರು ಆನೆಗಳನ್ನು ಬೇರೆಡೆ ಎತ್ತಂಗಡಿ ಮಾಡಲು ಹೋದರೆ ಸಮಸ್ಯೆಯ ಎತ್ತಂಗಡಿ ಆದೀತೆ ವಿನಾ ಪರಿಹಾರ ಮಾರ್ಗವಂತೂ ಆಗಲಿಕ್ಕಿಲ್ಲ.

ವನ್ಯಜೀವಿಗಳ ಸಂಖ್ಯೆ ಹೆಚ್ಚಿದಂತೆಲ್ಲ ಗ್ರಾಮವಾಸಿಗಳು ಮತ್ತು ಕಾಡುಪ್ರಾಣಿಗಳ ನಡುವೆ ಸಂಘರ್ಷ ಹೆಚ್ಚುತ್ತಲೇ ಹೋಗುವುದು ಮಾಮೂಲು. ಅದರಾಚೆ ಇನ್ನೊಂದು ಬಗೆಯ ಸಂಘರ್ಷವಿದೆ. ಅದು ಅಧಿಕಾರಿ ವರ್ಗ ಮತ್ತು ವನಸಂಶೋಧಕರ ನಡುವಣ ತಿಕ್ಕಾಟ. ಅಧಿಕಾರಿಗಳಲ್ಲಿ ಅರಣ್ಯದ ಹಿತರಕ್ಷಣೆಗಿಂತ ಇಲಾಖೆಯ ಹಿತರಕ್ಷಣೆ, ಸ್ವಂತದ ಹಿತರಕ್ಷಣೆಯೇ ಹೆಚ್ಚಿರುತ್ತದೆಂದು ಸಂಶೋಧಕರು ವಾದಿಸಿದರೆ, ಇಲಾಖೆಯ ಕೆಲಸಗಳಿಗೆಲ್ಲ ವನ್ಯಪ್ರೇಮಿ ಸಂಘ–ಸಂಸ್ಥೆಗಳು ಅಡ್ಡಗಾಲು ಹಾಕುತ್ತವೆಂದು ಅಧಿಕಾರಿ ವರ್ಗ ಆರೋಪಿಸುತ್ತಿರುತ್ತದೆ. ಈ ಎರಡು ಬಣಗಳು ಪರಸ್ಪರರ ಚಟುವಟಿಕೆಗಳ ಮೇಲೆ ಕಣ್ಣಿಡುವುದು ವನ್ಯಪರಿಸರದ ಒಟ್ಟಾರೆ ಹಿತರಕ್ಷಣೆಗೆ ಒಳ್ಳೆಯದೇ ಹೌದಾದರೂ ಕೆಲವು ಪ್ರಸಂಗಗಳಲ್ಲಿ ಉಲ್ಟಾ ಆಗಿದ್ದೂ ಇದೆ. ಹೆಣ್ಣಾನೆಗಳಿಗೆ ಸಂತಾನಶಕ್ತಿ ನಿಯಂತ್ರಣ ಲಸಿಕೆ ಹಾಕಬೇಕೆಂದು ಅಧಿಕಾರಿಗಳು ನಿರ್ಣಯಿಸಿದರೆ, ಅದರಿಂದ ಸಂಘರ್ಷ, ಸಂಕಟಗಳು ಹೆಚ್ಚೇ ಆಗುತ್ತವೆಂದು ಸಂಶೋಧಕರು, ವನ್ಯಪ್ರೇಮಿಗಳು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದೂ ಇದೆ. ಹುಲಿ, ಚಿರತೆ, ಆನೆ, ಹಂದಿ, ಕೋತಿ ಮತ್ತು ಕಾಟಗಳನ್ನು ಹೇಗೆ ಸಂಭಾಳಿಸಬೇಕು ಎಂಬುದರ ಬಗ್ಗೆ ಈ ಎರಡು ಬಣಗಳಲ್ಲಿ ಒಮ್ಮತದ ಅಭಿಪ್ರಾಯವೇ ಅಪರೂಪ. ಅರಣ್ಯಾಸಕ್ತರನ್ನು ದೂರವಿಟ್ಟು ಮೂರು ರಾಜ್ಯಗಳ ಅರಣ್ಯ ಸಿಬ್ಬಂದಿಯೇ ಈಚಿನ ಗಣತಿಕಾರ್ಯ ಮುಗಿಸಿದೆಯೆಂದು ಇಲಾಖೆ ಹೆಮ್ಮೆಯಿಂದ ಹೇಳಿಕೊಂಡಿದೆಯಾದರೂ ಅದು ಈ ಸಂಘರ್ಷದ ಅನಪೇಕ್ಷಿತ ಮುಖವನ್ನು ತೋರುತ್ತದೆ ವಿನಾ ಬೇರೇನಲ್ಲ. ಆನೆಗಳ ಗಣತಿ ವಿಧಾನ, ರೇಡಿಯೊ ಕಾಲರ್ ಅಳವಡಿಕೆ, ಸಂಖ್ಯಾನಿಯಂತ್ರಣ ತಂತ್ರ, ಫಸಲು ನಷ್ಟದ ಅಂದಾಜು, ಕಳೆಸಸ್ಯಗಳ ನಿರ್ವಹಣೆ, ರಕ್ಷಾಬೇಲಿಗಳ ವಿನ್ಯಾಸ ಇವೆಲ್ಲವುಗಳಲ್ಲೂ ಅದೆಷ್ಟೇ ಪ್ರಶ್ನೆಗಳಿದ್ದರೂ ಅಂತಿಮವಾಗಿ ಸರ್ಕಾರಿ ಅನುದಾನವನ್ನೇ ಅವಲಂಬಿಸಿ ವನ್ಯ ಕಾರ್ಯಾಚರಣೆ ನಡೆಯುತ್ತದೆ. ಈಗಂತೂ ಹಣಕಾಸಿನ ಕಾರಣವನ್ನು ಮುಂದಿಟ್ಟು ಕೇಂದ್ರ ಸರ್ಕಾರವೇ 'ಹುಲಿ ಯೋಜನೆ' ಮತ್ತು 'ಆನೆ ಯೋಜನೆ' ಎರಡನ್ನೂ ಒಂದುಗೂಡಿಸಿ, ಅಧಿಕಾರಿಗಳ ಸಂಖ್ಯೆಯನ್ನೇ ಕಡಿಮೆ ಮಾಡುವ ದಿಸೆಯಲ್ಲಿ ಹೆಜ್ಜೆಯಿಟ್ಟಿದೆ. ಅರಣ್ಯ ರಕ್ಷಣಾ ಕಾನೂನುಗಳಿಗೆ ಸಂಬಂಧಿಸಿದಂತೆ ಈಚೆಗೆ ಸಂಸತ್ತಿನಲ್ಲಿ ಅಂಗೀಕರಿಸಲಾದ ಎರಡೂ ತಿದ್ದುಪಡಿಗಳು ಹೂಡಿಕೆದಾರರ ಅನುಕೂಲಕ್ಕೇ ಆದ್ಯತೆ ಕೊಟ್ಟಂತಿವೆ. ವನಕಲ್ಯಾಣಕ್ಕಿಂತ ಜನಕಲ್ಯಾಣವೇ ಹೆಚ್ಚೆಂಬ ಧೋರಣೆ ಸರ್ಕಾರಕ್ಕಿದ್ದರೆ ಆ ಎರಡೂ ರಂಗಗಳನ್ನು ಮುಖಾಮುಖಿ ಮಾಡಿದಂತಾಗುತ್ತದೆ. ಗೆಲುವು ಅಂತಿಮವಾಗಿ ಮನುಷ್ಯನಿಗೇ ಎಂದು ನಾವೆಣಿಸುವುದೂ ತಪ್ಪಾಗುತ್ತದೆ. ಪ್ರಕೃತಿಯನ್ನು ಸೋಲಿಸಿ ಸಾಧಿಸಿದ ಗೆಲುವು ಗೆಲುವೇ?

ದಿನದ ಟ್ವೀಟ್


ಎಚ್ಚೆತ್ತುಕೊಳ್ಳಬೇಕಾಗಿದೆ



ಕೊಡಗಿಗೆ ವಾರಾಂತ್ಯದಲ್ಲಿ ಭೇಟಿ ನೀಡುತ್ತಿರುವ ಪ್ರವಾಸಿಗರು ಮತ್ತು ವಾಹನಗಳ ಸಂಖ್ಯೆಯು ಪರಿಸರದ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮವಾಗಿರುವ ಈ ಪುಟ್ಟ ಜಿಲ್ಲೆಯ ಧಾರಣಾ ಸಾಮರ್ಥ್ಯವನ್ನು ಮೀರಿರುತ್ತದೆ. ಪ್ರವಾಸೋದ್ಯಮವು ಸ್ಥಳೀಯ ಆರ್ಥಿಕತೆಗೆ ಪೂರಕವಾಗಿ ಒದಗಿಬಂದರೆ, ಅತಿಯಾದ ಪ್ರವಾಸೋದ್ಯಮವು ವಿನಾಶಕ್ಕೆ ದಾರಿ ಮಾಡುತ್ತದೆ. ಸರ್ಕಾರ ಹಾಗೂ ಸ್ಥಳೀಯ ಶಾಸಕರು ಈಗಲೇ ಎಚ್ಚೆತ್ತುಕೊಳ್ಳಬೇಕಾಗಿದೆ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ



ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ-ದಲ್ಲಿ ಪದೇಪದೇ ಸಂಭವಿಸುತ್ತಿರುವ ಪ್ರಾಕೃತಿಕ ವಿಕೋಪವು ಬಹುಮಟ್ಟಿಗೆ ಅಭಿವೃದ್ಧಿಯ ಹೆಸರಿನಲ್ಲಿ ಪರಿಸರಕ್ಕೆ ಮಾಡಿರುವ ವಿವೇಚನಾ ರಹಿತ ಹಾನಿಯ ಪರಿಣಾಮವೇ ಆಗಿದೆ. ಅಂತಹ ದರ್ಪಕ್ಕೆ ಬೆಲೆ ತೆರಲೇಬೇಕಾಗುತ್ತದೆ. ಪರಿಸರವನ್ನು ಧ್ವಂಸ ಮಾಡಿದರೆ ಪರಿಸರವು ನಿಮ್ಮನ್ನು ಧ್ವಂಸ ಮಾಡುತ್ತದೆ.

ಸಂಕರ್ಷಣ್ ಠಾಕೂರ್, ಪತ್ರಕರ್ತ

25 ವರ್ಷಗಳ ಹಿಂದೆ

ಶನಿವಾರ, 15-8-1998

• ಕೇಂದ್ರಕ್ಕೆ ಗಡುವು ನೀಡಿಲ್ಲ: ಜಯಲಲಿತಾ

ಚೆನ್ನೈ, ಆಗಸ್ಟ್ 14 (ಪಿಟಿಐ): 'ಕೇಂದ್ರದ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ದಿನ ನಿಗದಿ ಮಾಡಿರುವವರು ಪತ್ರಿಕಾ ಹಾಗೂ ಟಿ.ವಿ ಮಾಧ್ಯಮದವರೇ ಹೊರತು ನಾನಲ್ಲ' ಎಂದು ಅಣ್ಣಾ ಡಿಎಂಕೆ ನಾಯಕಿ ಜಯಲಲಿತಾ ಹೇಳಿದ್ದಾರೆ.

'ಇದುವರೆಗೆ ಸರ್ಕಾರಕ್ಕೆ ನಾನು ಯಾವುದೇ ಗಡುವು ನೀಡಿಲ್ಲ; ಅದು ಕೇವಲ ಮಾಧ್ಯಮಗಳ ಸೃಷ್ಟಿ. ಸರ್ಕಾರವನ್ನು ಟೀಕಿಸುವುದು, ಅದರ ಸಾಧನೆ ಮಸುಕುಗೊಳಿಸುವ ಉದ್ದೇಶ ನನ್ನದಲ್ಲ' ಎಂದಿದ್ದಾರೆ.

• 356ನೇ ವಿಧಿ ದುರ್ಬಳಕೆಗೆ ನಾರಾಯಣನ್ ವಿರೋಧ

ನವದೆಹಲಿ, ಆಗಸ್ಟ್ 14 (ಯುಎನ್‌ಐ)– 'ಭಾರತವು ಅಣ್ವಸ್ತ್ರ ಪರೀಕ್ಷೆ ನಡೆಸಿದ್ದು ಅವುಗಳನ್ನು ಬಳಸುವ ಉದ್ದೇಶದಿಂದಲ್ಲ' ಎಂದು ಒತ್ತಿ ಹೇಳಿದ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು, ಸಂವಿಧಾನದ 356ನೇ ವಿಧಿಯ ದುರ್ಬಳಕೆ ಮಾಡುವುದನ್ನು ತೀವ್ರವಾಗಿ ವಿರೋಧಿಸಿದ್ದಾರೆ.

ಆರ್ಥಿಕ ಸುಧಾರಣೆಯ ಪ್ರಕ್ರಿಯೆ ಹಿಂದಕ್ಕೆ ತೆಗೆದುಕೊಳ್ಳಲಾಗುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಬುಧವಾರ, 15-8-1973

• ಲಾಕ್–ಔಟ್, ಮುಷ್ಕರ ತಾತ್ಕಾಲಿಕ ನಿಲುಗಡೆಗೆ ರಾಷ್ಟ್ರಪತಿ ಗಿರಿ ಕರೆ

ನವದೆಹಲಿ, ಆಗಸ್ಟ್ 14– ರಾಷ್ಟ್ರ ಎದುರಿಸುತ್ತಿರುವ ಆರ್ಥಿಕ ತೊಂದರೆಗಳ ದೃಷ್ಟಿಯಿಂದ ಕೊನೆಯ ಪಕ್ಷ ಮೂರು ವರ್ಷಗಳ ಕಾಲ ಮುಷ್ಕರಗಳು ಮತ್ತು ಲಾಕ್– ಔಟ್‌ಗಳ ಮೇಲೆ ನಿಲುಗಡೆ ಹಾಕಬೇಕೆಂದು ರಾಷ್ಟ್ರಪತಿ ವಿ.ವಿ. ಗಿರಿ ಇಂದು ಕಳಕಳಿಯ ಮನವಿ ಮಾಡಿದರು.

27ನೇ ಸ್ವಾತಂತ್ರ್ಯೋತ್ಸವದ ಹಿಂದಿನ ದಿನ ರಾಷ್ಟ್ರಕ್ಕೆ ನೀಡಿದ ಸಂದೇಶದಲ್ಲಿ ಅವರು, ರಾಷ್ಟ್ರದ ದೃಷ್ಟಿಯಿಂದ ಮಾತ್ರವೇ ಅಲ್ಲ; ವೈಯಕ್ತಿಕ ಹಿತದೃಷ್ಟಿಯಿಂದಲೂ ಮುಷ್ಕರಗಳನ್ನು ನಿಲ್ಲಿಸಲು ಕಾರ್ಮಿಕರಿಗೆ ತಿಳಿಸಿದರು.

• ಆಹಾರ ಬಳಕೆಯಲ್ಲಿ ಸ್ವಯಂಹತೋಟಿ: ಬೆಲೆ ಏರಿಕೆ ತಡೆಗೆ ಅರಸು ಕರೆ

ಬೆಂಗಳೂರು, ಆಗಸ್ಟ್ 14– ಬೆಲೆ ಏರಿಕೆ ಸಮಸ್ಯೆಯನ್ನು ಎದುರಿಸುವಲ್ಲಿ ಗ್ರಾಹಕರ ಅಸಮರ್ಥತೆಯ ಪ್ರದರ್ಶನ ಹಾಗೂ ಉದಾಸೀನ ಮನೋಭಾವ ಪ್ರಬಲ ತೊಡಕಾಗಿದೆ ಎಂದು ಮುಖ್ಯಮಂತ್ರಿ ಡಿ.ದೇವರಾಜ ಅರಸು ಹೇಳಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಆಕಾಶವಾಣಿಯಲ್ಲಿ ಪ್ರಸಾರವಾದ ಭಾಷಣದಲ್ಲಿ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು.

ಜಾಗತಿಕ ವೇದಿಕೆಯಲ್ಲಿ ಭಿನ್ನ ರಾಗ, ಮೇಲುಗೈ ಪಡೆದ ಆರ್ಥಿಕ ಅಜೆಂಡಾ

ಪ್ಲಾಸ್ಟಿಕ್ ಮಾಲಿನ್ಯ ತಡೆ: ಸಹಮತ ಸಾಧ್ಯವೇ?



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ನಾಗರಿಕ ಸೇವಾ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಯೊಬ್ಬ ಕರೆ ಮಾಡಿ 'ಸರ್, ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಣದ ಬಗ್ಗೆ ಪ್ರಬಂಧ ಬರೆಯೋಕೆ ತಯಾರಾಗ್ತಾ ಇದ್ದೆ, ಅದ್ರಲ್ಲೂ ಭಾರತದ ನಿಲುವಿನ ಕುರಿತು ಬರೀಬೇಕಿತ್ತು. ಕೆಲವು ಪತ್ರಿಕೆಗಳಲ್ಲಿ ಓದ್ತಾ ಇದ್ದೆ, ಪ್ಲಾಸ್ಟಿಕ್ ನಿಯಂತ್ರಣದ ಬಗೆಗಿನ ಜಾಗತಿಕ ಒಪ್ಪಂದಕ್ಕೆ ನಾವು ವಿರೋಧ ಮಾಡ್ತಿದ್ದೇವಂತೆ. ನಮ್ಮ ಹಾಗೆ ವಿರೋಧಿಸಿರೋ ದೇಶಗಳ ಗುಂಪನ್ನು 'ನೋ ಆ್ಯಂಬಿಷನ್ ಕೊಯಿಲಿಶನ್ (ನ್ಯಾಕ್– ಮಹತ್ವಾಕಾಂಕ್ಷೆ ಇಲ್ಲದ ದೇಶಗಳ ಒಕ್ಕೂಟ) ಅಂತ ಕರೀತಾರಂತೆ ಹೌದಾ? ಯಾಕೆ ಸರ್?' ಎಂದ.

ಹೌದು, ಆತನ ಮಾತಿನಲ್ಲಿ ಸತ್ಯಾಂಶವಿತ್ತು. ಈ ವರ್ಷದ ಮೇ ತಿಂಗಳಿನಲ್ಲಿ ನಡೆದ ಜಾಗತಿಕ ಮಟ್ಟದ ಸಭೆಯಲ್ಲಿ ಅದು ಬಯಲಾಗಿತ್ತು. ವೇದಿಕೆ ಮೇಲೆ ಹೇಳಿಕೆ ನೀಡುವಾಗ, ಪ್ಯಾನಲ್ ಚರ್ಚೆ ಮಾಡುವಾಗ, ಪ್ಲಾಸ್ಟಿಕ್ ಎಂಬುದು ಮನುಷ್ಯನೂ ಸೇರಿದಂತೆ ಸಕಲ ಜೀವಿಗಳ ಶತ್ರು, ಅದನ್ನು ನಿಷೇಧಿಸಲೇಬೇಕು ಎಂದು ದೊಡ್ಡ ಗಂಟಲಲ್ಲಿ ಮಾತನಾಡುವ ನಮ್ಮ ನಾಯಕರು, ಜಾಗತಿಕ ವೇದಿಕೆಯಲ್ಲಿ ಮಾತ್ರ ಅಲ್ಲಿನ ನಿರ್ಣಯಗಳಿಗೆ ಉಲ್ಟಾ ಹೊಡೆಯುವ ಚಾಳಿ ಶುರುಮಾಡಿಕೊಂಡಿದ್ದಾರೆ.

ಈ ವರ್ಷದ ವಿಶ್ವ ಪರಿಸರ ದಿನಾಚರಣೆಯ ಧ್ಯೇಯವಾಕ್ಯವು ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟುವುದೇ ಆಗಿತ್ತು. ವಿಶ್ವ ಪ್ಲಾಸ್ಟಿಕ್ ಒಪ್ಪಂದದ (ಜಿಪಿಟಿ- ಗ್ಲೋಬಲ್ ಪ್ಲಾಸ್ಟಿಕ್ ಟ್ರೀಟಿ) ಕರಡು ತಯಾರಿಸಿ, ಪ್ಲಾಸ್ಟಿಕ್ ಮಾಲಿನ್ಯದ ಅಂತ್ಯವಲ್ಲದೆ ಪ್ಲಾಸ್ಟಿಕ್‌ನ ಉತ್ಪಾದನೆ ಮತ್ತು ಬಳಕೆಯನ್ನು ವಿಶೇಷವಾಗಿ ವಾಣಿಜ್ಯರೂಪದಲ್ಲಿ ಕಡಿಮೆ ಮಾಡುವುದು ಹೇಗೆ ಎಂಬುದನ್ನು ನಿರ್ಧರಿಸಲು 193 ದೇಶಗಳು ಮೇ 29ರಂದು ಪ್ಯಾರಿಸ್‌ನಲ್ಲಿ ಸಭೆ ಸೇರಿದ್ದವು.

ಎಲ್ಲ ದೇಶಗಳಿಗೂ ಜವಾಬ್ದಾರಿ ಮತ್ತು ಕಾನೂನಾತ್ಮಕವಾದ ಹೊಣೆಗಾರಿಕೆ ವಹಿಸುವ 'ಝೀರೊ ಡ್ರಾಫ್ಟ್' (ಪ್ರಾಥಮಿಕ ಹಂತದ ಕರಡು) ತಯಾರಿಕೆಯ ಉದ್ದೇಶದಿಂದ 'ಇಂಟರ್ ಗವರ್ನಮೆಂಟಲ್ ನೆಗೋಶಿಯೇಟಿಂಗ್ ಕಮಿಟಿಯು (ಐಎನ್‌ಸಿ) ಈ ಸಭೆಯನ್ನು ಆಯೋಜಿಸಿತ್ತು. ಐದು ದಿನ ಸಭೆ ನಡೆದ ನಂತರ, ಝೀರೊ ಡ್ರಾಫ್ಟ್ ತಯಾರಿಕೆಯನ್ನು ನವೆಂಬರ್‌ವರೆಗೆ ಮುಂದೂಡಲಾಗಿದೆ ಎಂದು ಹೇಳಿಕೆ ನೀಡಿದ ಐಎನ್‌ಸಿ, 'ಆ ಕೆಲಸ ಮಾಡಲು ಯುಎನ್‌ಇಪಿ (ಯುನೈಟೆಡ್ ನೇಷನ್ಸ್ ಎನ್ವಿರಾನ್‌ಮೆಂಟ್ ಪ್ರೋಗ್ರಾಂ) ಸಚಿವಾಲಯಕ್ಕೆ ಹೇಳಿದ್ದೇವೆ, ನವೆಂಬರ್‌ನಲ್ಲಿ ನೈರೋಬಿಯಲ್ಲಿ ನಡೆಯುವ ಸಭೆಯ ವೇಳೆಗೆ ಕರಡು ತಯಾರಾಗುತ್ತದೆ, ಅಲ್ಲಿ ಚರ್ಚಿಸೋಣ' ಎಂದು ಸಭೆಯನ್ನು ಬರ್ಖಾಸ್ತುಗೊಳಿಸಿತು.

ಅದಕ್ಕೆ ಪ್ರಮುಖ ಕಾರಣ, ನೋ ಆ್ಯಂಬಿಷನ್ ಕೊಯಿಲಿಶನ್‌ನವರು ಮಾಡಿದ ಗದ್ದಲ. ಸಭೆಯ ಎರಡನೇ ದಿನದ ಕಾರ್ಯಕಲಾಪಗಳನ್ನು ಹೈಜಾಕ್ ಮಾಡಿದ ಅವರು, ತಮ್ಮ ದೇಶಗಳಲ್ಲಿ ಪ್ಲಾಸ್ಟಿಕ್ ಉತ್ಪಾದನೆ, ಬಳಕೆಗಳಿಂದ ಎಷ್ಟೇ ಮಾಲಿನ್ಯ ಉಂಟಾದರೂ ಅದರಿಂದ ಆರ್ಥಿಕ ಲಾಭವಿದೆ ಎಂಬ ಕಾರಣದಿಂದ ಸಭೆಯು ಯಾವುದೇ ಒಮ್ಮತಕ್ಕೆ ಬರದಂತೆ ಗದ್ದಲ ಎಬ್ಬಿಸಿದರು. ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಣಕ್ಕೆ ತಾನು ಬದ್ಧ ಎಂದು ಕಳೆದ ವರ್ಷ ಉರುಗ್ವೆಯಲ್ಲಿ ನಡೆದ ಸಭೆಯಲ್ಲಿ ಒಪ್ಪಿಗೆ ನೀಡಿದ್ದ ನಮ್ಮ ವಕ್ತಾರರು, ನಿಯಮ 37 ಮತ್ತು 38.1 ಈ ಎರಡೂ ಸರಿ ಇಲ್ಲ ಎಂದು ಈ ಸಭೆಯಲ್ಲಿ ತಗಾದೆ ತೆಗೆದರು.

ಪಾದರಸ ಮಾಲಿನ್ಯ ತಡೆಯಲು ರೂಪಿಸಲಾದ ಮಿನಮಾಟ ಒಪ್ಪಂದದಂತೆ ಪ್ಲಾಸ್ಟಿಕ್‌ನ ವಿಷಯದಲ್ಲೂ ನಿರ್ಣಯ ಕೈಗೊಳ್ಳಲಾಗಿರುವುದನ್ನು ನಾವು ಪ್ರಶ್ನಿಸುತ್ತೇವೆ ಎಂದಿದ್ದ ಭಾರತ, 'ನಿಯಮ 37 ಮತ್ತು 38.1 ಎರಡೂ ಕಾರ್ಯಸಾಧುವಲ್ಲ. ಅವುಗಳನ್ನು ನಮ್ಮಂಥ ಅಭಿವೃದ್ಧಿಪರ ದೇಶಗಳಿಗೆ ಅನ್ವಯಿಸಲಾಗದು' ಎಂದು ಪಟ್ಟು ಹಿಡಿದು, ಎರಡೂ ನಿಯಮಗಳನ್ನು ಸದ್ಯಕ್ಕೆ ತಡೆಹಿಡಿದರೆ ಮಾತ್ರ ಮುಂದಿನ ಮಾತು ಎಂದುಬಿಟ್ಟಿತು. ನಿಯಮ 37ರ ಪ್ರಕಾರ, ಯಾವುದೇ ನಿರ್ಣಯದ ಬಗ್ಗೆ ವಿಶ್ವದ ಪ್ರತಿಯೊಂದು ದೇಶಕ್ಕೂ ಒಂದು ಮತ ಚಲಾವಣೆಯ ಅಧಿಕಾರ ಇರುತ್ತದೆ ಮತ್ತು ಆರ್ಥಿಕತೆಯ ಹೆಸರಿನಲ್ಲಿ ಒಕ್ಕೂಟ ಸ್ಥಾಪಿಸಿಕೊಂಡ ದೇಶಗಳ ಪರವಾಗಿ ಯಾವುದಾದರೊಂದು ದೇಶ ಮತ ಹಾಕಬಹುದು.

ಪರಸ್ಪರ ಮಾತುಕತೆಗಳಿಂದ ಒಮ್ಮತಾಭಿಪ್ರಾಯಕ್ಕೆ ಬರಲಾಗದಿದ್ದರೆ ಬಹುಮತ ಸಾಬೀತು ಮಾಡಲು ಮತದಾನ ನಡೆಯಬೇಕು ಎಂದು ಎರಡನೇ ನಿಯಮ (38.1) ಹೇಳುತ್ತದೆ. ಮತದಾನವಾದರೆ ಮುಂದಿನ ದಿನಗಳಲ್ಲಿ ನಿರ್ಣಯಗಳನ್ನು ಬದಲಾಯಿಸುವುದು ಕಷ್ಟ, ಅದರ ಬದಲಿಗೆ ಒಮ್ಮತಾಭಿಪ್ರಾಯಕ್ಕೆ ಬರುವುದೇ ಸರಿಯಾದ ದಾರಿ ಎಂಬ ವಾದ ನಮ್ಮದು. ನಮ್ಮ ಈ ನಿಲುವನ್ನು ಸೌದಿ ಅರೇಬಿಯ, ರಷ್ಯಾ, ಚೀನಾ, ಇರಾನ್, ಅರ್ಜೆಂಟೀನಾ, ಸಂಯುಕ್ತ ಅರಬ್ ರಾಷ್ಟ್ರಗಳು ಬೆಂಬಲಿಸಿದವು.

ಸಭೆಯ ಮೂರನೆಯ ದಿನ ಇನ್ನಷ್ಟು ಅಧ್ವಾನಗಳು ಬೆಳಕಿಗೆ ಬಂದವು. ಕೆಲವು ದೇಶಗಳಂತೂ ಪ್ಲಾಸ್ಟಿಕ್ ಉದ್ಯಮದಲ್ಲಿ ನಮಗೆ ಭಾರಿ ಲಾಭವಿದೆ, ಅದನ್ನು ಸ್ಥಗಿತಗೊಳಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳಿಬಿಟ್ಟವು. ಅಷ್ಟಾದರೂ ಎರಡು ಸಮಿತಿಗಳನ್ನು ರಚಿಸಿದ ಐಎನ್‌ಸಿ, ಒಂದು ಸಮಿತಿಯು ಉದ್ದೇಶ ಮತ್ತು ಇನ್ನೊಂದು ಸಮಿತಿಯು ಅನುಷ್ಠಾನ ಕ್ರಮಗಳ ಕುರಿತು ಚರ್ಚಿಸಲಿ ಎಂದು ಸಲಹೆ ನೀಡಿತು. ಉದ್ದೇಶದ ಬಗ್ಗೆ ಯಾವ ದೇಶದ ತಕರಾರೂ ಇರಲಿಲ್ಲ. ತಕರಾರು ಇರುವುದು ಹೇಗೆ, ಎಷ್ಟು ದಿನಗಳೊಳಗೆ ಮತ್ತು ಯಾರು ಯಾರಿಗೆ ಹಣಕಾಸು, ತಂತ್ರಜ್ಞಾನದ ನೆರವು ನೀಡುತ್ತಾರೆ, ನೀಡಬೇಕು ಎನ್ನುವುದರ ಬಗ್ಗೆ.

ಪ್ಲಾಸ್ಟಿಕ್ ಮಾಲಿನ್ಯ ಕೊನೆಗೊಳಿಸುವುದೆಂದರೆ, ಪ್ಲಾಸ್ಟಿಕ್‌ನ ಸಂಪೂರ್ಣ ನಿರ್ಮೂಲನದವರೆಗೆ ಮನುಷ್ಯನ ಹಾಗೂ ವಾತಾವರಣದ ಆರೋಗ್ಯ ಕಾಪಾಡಲು ಆದ್ಯತೆ ಇರಬೇಕು ಎಂದು ಬಹುತೇಕ ಸದಸ್ಯ ರಾಷ್ಟ್ರಗಳು ವಾದಿಸಿದವು. ಆದರೆ, ಭಾರತ ಮಾತ್ರ ಉದ್ದೇಶ ಸಾಧನೆಗೆ ಕಾಲಮಿತಿ ಸರಿಯಲ್ಲ ಎಂದು ಪಟ್ಟುಹಿಡಿಯಿತು.

ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಣದ ಮೂಲ ಉದ್ದೇಶದ ಕುರಿತು ಏನಾದರೂ ತಕರಾರುಗಳಿವೆಯೇ ಎಂಬ ಪ್ರಶ್ನೆಗೆ 'ಸಮಸ್ಯೆ ಇರುವುದು ಪ್ಲಾಸ್ಟಿಕ್‌ನಿಂದಲ್ಲ, ಅದನ್ನು ಎಲ್ಲೆಂದರಲ್ಲಿ ಬಿಸಾಡುವುದರಲ್ಲಿ. ಆದ್ದರಿಂದ ನಮ್ಮ ಗಮನ ಇರಬೇಕಾದದ್ದು ಪ್ಲಾಸ್ಟಿಕ್ ತ್ಯಾಜ್ಯದ ಸರಿಯಾದ ನಿರ್ವಹಣೆಯ ಕಡೆಗೇ ವಿನಾ ಅದರ ನಿಷೇಧದ ಕಡೆಗಲ್ಲ. ಪ್ಲಾಸ್ಟಿಕ್ ಅನ್ನು ಸಂಪೂರ್ಣ ನಿಷೇಧಿಸುವುದಕ್ಕೆ, ಅದರ ಬೇಡಿಕೆ ಅಥವಾ ಸರಬರಾಜನ್ನು ಕಡಿಮೆಗೊಳಿಸುವುದಕ್ಕೆ ನಮ್ಮ ಒಪ್ಪಿಗೆ ಇಲ್ಲ ಎಂದುಬಿಟ್ಟಿತು. ನಮ್ಮ ವಾದವನ್ನೇ ಅನುಸರಿಸಿದ ಚೀನಾ, ಕೊರಿಯಾ, ರಷ್ಯಾ, ಇರಾನ್ ಮತ್ತು ಇಂಡೊನೇಷ್ಯಾವು ಭಾರತ ಹೇಳುತ್ತಿರುವುದು ಸರಿ ಎಂದವು.

ಪ್ರತಿ ದೇಶವೂ ಪ್ಲಾಸ್ಟಿಕ್ ಮಾಲಿನ್ಯ ತಡೆಯಲು ಸಾವಿರಾರು ಕೋಟಿ ಹಣ ವ್ಯಯಿಸುತ್ತಿದೆ. ಇನ್ನೊಂದೆಡೆ, ಪ್ಲಾಸ್ಟಿಕ್ ಉತ್ಪಾದನೆ ದಿನೇದಿನೇ ಹೆಚ್ಚುತ್ತಿದೆ. ಹಿಂದಿನ ಹತ್ತು ವರ್ಷಗಳಲ್ಲಿ ಉತ್ಪತ್ತಿಯಾದ ಪ್ಲಾಸ್ಟಿಕ್ ಕಳೆದ ನೂರು ವರ್ಷಗಳಲ್ಲಿ ಉತ್ಪತ್ತಿಯಾದದ್ದಕ್ಕಿಂತ ಹೆಚ್ಚು. ದೇಶಗಳ ಮಟ್ಟದಲ್ಲಿ ಪ್ಲಾಸ್ಟಿಕ್ ಕುರಿತ ಕ್ರಿಯಾ ಯೋಜನೆಗಳು ಜಾರಿಯಲ್ಲಿವೆ. ಅಚ್ಚರಿಯೆಂಬಂತೆ, ಆಫ್ರಿಕಾದ ದೇಶಗಳು ಪ್ಲಾಸ್ಟಿಕ್ ನಿಷೇಧದ ಕುರಿತು ಉತ್ಸಾಹ ತೋರಿಸಿವೆ. ಇದು ಮುಂದುವರಿದ ದೇಶಗಳ ಅಚ್ಚರಿಗೆ ಕಾರಣವಾಗಿದ್ದು, ದೇಶಗಳ ನಡುವೆ ಅಘೋಷಿತ ಸಂಘರ್ಷ ಶುರುವಾಗಲಿದೆ. ಸಮಯ ಸಂದರ್ಭ ನೋಡಿಕೊಂಡು ಕೆಲಸ ಮಾಡಬೇಕೇ ವಿನಾ ಅದಕ್ಕೊಂದು ಪ್ರಮಾಣಫಲಕ ಬರೆದುಕೊಂಡು ಮಾಡುವುದು ಸರಿಯಲ್ಲ ಎಂದಿರುವ ನಮ್ಮನ್ನು ಅಮೆರಿಕ ಮತ್ತು ರಷ್ಯಾ ಬೆಂಬಲಿಸಿವೆ. ವಾತಾವರಣಕ್ಕೆ ತೊಂದರೆ ಕೊಡುವ ಪ್ಲಾಸ್ಟಿಕ್ ಅನ್ನು ನಿಷೇಧಿಸುವ ಮತ್ತು ಉತ್ಪಾದನೆಯನ್ನು ತಡೆಯುವುದರ ಪರ ನಾವಿಲ್ಲ ಎಂದಿವೆ.

ತಮ್ಮದೇ ಆರ್ಥಿಕ ಅಜೆಂಡಾ ಇಟ್ಟುಕೊಂಡಿರುವ ದೇಶಗಳು ಏಕಾಭಿಪ್ರಾಯಕ್ಕೆ ಬರುವುದು ದೂರದ ಮಾತು. ಅದಕ್ಕೆ ತುಂಬಾ ಸಮಯ ಹಿಡಿಯುತ್ತದೆ. ಅದಕ್ಕೆಂದೇ ಮಾಂಟ್ರಿಯಲ್ ಮತ್ತು ತಂಬಾಕು ನಿಯಂತ್ರಣ ಒಪ್ಪಂದಗಳನ್ನು ಮತದಾನದ ಮೂಲಕವೇ ನಿರ್ಣಯಿಸಲಾಗಿತ್ತು. ಎರಡೂ ಒಪ್ಪಂದಗಳು ನಿರೀಕ್ಷೆಗೂ ಮೀರಿ ಯಶಸ್ಸು ಕಂಡವು. ಒಮ್ಮತಾಭಿಪ್ರಾಯಕ್ಕೆ ಬರಲು ಎಲ್ಲ ಪ್ರಯತ್ನಗಳನ್ನು ಮಾಡಿದ ನಂತರವೂ ಸಹಮತ ಸಾಧ್ಯವಾಗದಿದ್ದರೆ ಮತದಾನ ನಡೆಯಲಿ ಎಂಬ ನಿಯಮವನ್ನು ಬೇಡ ಎಂದಿರುವ ನಮ್ಮವರ ಲೆಕ್ಕಾಚಾರವಾದರೂ ಏನು?

ಈಗಾಗಲೇ ಏಕಬಳಕೆ ಪ್ಲಾಸ್ಟಿಕ್ ನಿಷೇಧಿಸಿರುವ ನಾವು, ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಅದೇಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೇವೆ? ಪ್ಲಾಸ್ಟಿಕ್ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲು ಒಪ್ಪದಿರುವ ನಮ್ಮ ಮನೋಭಾವ ಬದಲಾಗುವುದೆಂದು?



ಚುರುಮುರಿ



ಯಾಂಬು ಸೂತ್ರ

• ಲಿಂಗರಾಜು ಡಿ.ಎಸ್.

'ಕರ್ನಾಟಕದ ಪಾಲಿಟಿಕ್ಸ್ ಉದ್ಧಾರಾಗಕ್ಕೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಂದ್ರೆ ಯಾಂತ್ರಿಕ ಬುದ್ಧಿಮತ್ತೆ ಯಾಂಬು ಬಳಕೆಯಾದ್ರೆ ಒಳ್ಳೆದೇನೋ?' ಅಂತ ನನ್ನ ಐಡಿಯಾ ಹಂಚಿಕೊಂಡೆ.

'ಪಾಲಿಟಿಕ್ಸಲ್ಲಿ ಈಗಾಗಲೇ ಚಾಟ್‌ಜಿಪಿಟಿ ಅದಲ್ಲೋ?' ತುರೇಮಣೆ ತಮ್ಮ ಸಂಶೋಧನೆ ತೆರೆದರು.

'ಅದೆಂಗೆ ಸಾ?' ಪ್ರಶ್ನಿಸಿದೆ.

'ಧರಣೆ ಮಾಡಕ್ಕೋಗದು, ಪೆನ್‌ಡ್ರೈವ್ ತೋರಿಸದು, ವರ್ಗಾವಣೆ ದಂಧೆ ಅಂತ ಬಾಯಿ ಬಡಕಂದು ಸುಸ್ತಾಗಿ ಆಸ್ಪತ್ರೆ ಸೇರಿಕಳದು ಇದೇ ಕಸುಬಾಗೋಗ್ಯದೆ. ಚಾಟ್ ಅಂದ್ರೇನಪ್ಪಾ?' ತುರೇಮಣೆ ಕೇಳಿದರು.

'ಇದೇನ್ಸಾ ಹಿಂಗಂದೀರಿ, ಚಾಟ್ ಅಂದ್ರೆ ಹರಟೆ ಅಲ್ಲುವರಾ? ಇದುನ್ನೇ ಚಾಟ್‌ಜಿಪಿಟಿ ಅಂದ್ರೆ ಗ್ರೀಡಿ ಪೊಲಿಟೀಶಿಯನ್ಸ್ ಟೆಕ್ನಿಕ್ ಅನ್ನದು ಅಂತ ಗೊತ್ತಾಯ್ತು! ಯಾಂಬು ಸಿಎಂ ಆದ್ರೆ ಏನಾದ್ರು ಬದಲಾವಣೆ ಆದದೇ?' ಅಂತ ವಿಚಾರಿಸಿದೆ.

'ಏನು ಆದದೋ ಏನೋ ನಾನು ಕಾಣೆ. ಸರ್ಕಾರ ಯಾವಾಗ ಬಿದ್ದತ್ತೋ ಅಂತ ದಾಯಾದಿಗಳು ಕಾಯ್ತಾ ಕೂತವ್ರೆ. ಸ್ವವಿರೋಧ ಪಕ್ಷದವು, ಬನ್ನಿ ಬುಳ್ಳೆಗೆ ಬಿಸಿನೀರು ಕಾಯಿಸ್ತೀವಿ ಅಂತ ದೊಣ್ಣೆ ಹಿಡಕ ನಿಂತುಗಂದು ಕಲ್ಲುಕೋಳಿ ಥರಾ ಕೂಗ್ತಾವೆ. ಜನ ಕಂಡೇಟಗೇ ಕಣ್ಣಗೆ ನೀರಾಕ್ಯಂತಿದ್ದ ಕುಮಾರಣ್ಣ ಈಗ ಎದ್ದು ಪೆನ್‌ಡ್ರೈವ್ ಹಿಡಕಂದು ಮರಳು ಬಸವಣ್ಣನ ಥರಾ ಹುಡ್ರಿಕೆ ಹಾಕ್ತಾವನೆ. ಈ ಥರದ ರಾಜಕಾರಣ ಯಾಂಬುಗೆ ಅರ್ಥಾದದಾ?' ತುರೇಮಣೆ ಕೇಳಿದರು.

'ಮತ್ತೆಂಗೆ?' ಅಂತ ಕೇಳಿದೆ.

'ನೇಮಕಾತಿ, ಪರ್ಸೆಂಟೇಜು, ವರ್ಗಾವಣೆ ಸೂತ್ರದ ಲೆಕ್ಕ, ಬಿಬಿಎಂಪಿ ರೆಕಾರ್ಡ್ ರೂಮಿಗೆ ಬೆಂಕಿ ಬಿದ್ದ ರಹಸ್ಯ, ಹೂಳಲ್ಲಿ ಕಾಸೆತ್ತೋ ಟೆಕ್ನಿಕ್ಕು, ಬಿಟ್‌ಕಾಯಿನ್ ಬಿಟ್ಟೋರ ಹೆಸರು ಯಾಂಬುಗೆ ಗೊತ್ತಾಯ್ತದಾ?' ಅಂತ ಕೇಳಿದರು.

'ಹ್ಞೂಂಕನೇಳಿ ಸಾ, ರಾಜಕೀಯ ಶುದ್ಧಿ ಮಾಡಕ್ಕೆ ಏನು ದಾರಿ?' ಅಂತಂದೆ.

'ಯಾಂಬುವಿಗೆ ಜೇಮ್ಸ್ ಬಾಂಡಿನ ಥರಾ ಲೈಸೆನ್ಸ್ ಟು ಕಿಲ್ ಅಡ್ರು ಕೊಟ್ಟು ರಾಜಕೀಯದ ಪಡಸಾಲೆಗೆ ಬುಡಬೇಕು, ಅಷ್ಟೀಯೆ!' ಅಂತ ತಮ್ಮ ಕ್ರಾಂತಿಕಾರಕ ವಿಚಾರ ತಿಳಿಸಿದರು.

ಸಂಗತ

ವರ್ಗಾವಣೆ: ಬೇಕೆ ಈ ಕಡ್ಡಾಯ 'ಅಸ್ತ್ರ'?

ನಿರ್ದಿಷ್ಟ ಕಾರಣಗಳಿದ್ದಾಗ ಮಾತ್ರ ವರ್ಗಾವಣೆಗೆ ಅನುವು ಮಾಡಿದರೆ ಸಾಲದೆ?

• ಎಚ್.ಕೆ.ಶರತ್


ಭ್ರಷ್ಟಾಚಾರ, ಪಾರದರ್ಶಕತೆಯ ಕೊರತೆ, ರಾಜಕೀಯ ಪ್ರಭಾವ ಹೀಗೆ ಒಂದಿಲ್ಲೊಂದು ಕಾರಣಕ್ಕೆ ಸರ್ಕಾರಿ ನೌಕರರ ವರ್ಗಾವಣೆ ಪ್ರಕ್ರಿಯೆ ಸದ್ದು ಮಾಡುವುದು ಹೊಸ ಬೆಳವಣಿಗೆಯೇನಲ್ಲ. ಸರ್ಕಾರ ನಡೆಸುವವರು ಬದಲಾದಂತೆ, ಆಯಕಟ್ಟಿನ ಸ್ಥಾನಗಳಿಗೆ ತಮಗೆ ಬೇಕಾದವರನ್ನು ಕರೆತರಲು, ಆಗಿಬರದವರನ್ನು ಮೂಲೆಗುಂಪು ಮಾಡಲು ಸಹ ವರ್ಗಾವಣೆಯು ಅಸ್ತ್ರವಾಗಿ ಬಳಕೆಯಾಗುವುದುಂಟು.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ವರ್ಗಾವಣೆ ಪ್ರಕ್ರಿಯೆಗೆ ವೇಗ ದೊರೆತಿದೆ. ಪೊಲೀಸ್ ಅಧಿಕಾರಿಗಳನ್ನು ವರ್ಗಾಯಿಸುವಾಗ ತಮ್ಮ ಮಾತಿಗೆ ಬೆಲೆ ಕೊಟ್ಟಿಲ್ಲ ಎಂದು ಕೆಲ ಶಾಸಕರು ತಮ್ಮದೇ ಪಕ್ಷದ ನೇತೃತ್ವದ ಸರ್ಕಾರದ ಕಾರ್ಯವೈಖರಿ ಕುರಿತು ಅಸಮಾಧಾನ ವ್ಯಕ್ತಪಡಿಸಿರುವುದು ವರದಿಯಾಗಿದೆ. ಪೊಲೀಸ್, ಕಂದಾಯ ಹಾಗೂ ಸಾರಿಗೆ ಇಲಾಖೆಗೆ ಸಂಬಂಧಿಸಿದ ವರ್ಗಾವಣೆಯಲ್ಲಿ ನಡೆಯುವ ಭ್ರಷ್ಟಾಚಾರ, ಹುದ್ದೆ ಹಾಗೂ ಸ್ಥಳ ಆಧರಿಸಿ ನಿಗದಿಪಡಿಸುವ ದರಪಟ್ಟಿ ಸಾರ್ವಜನಿಕ ವಲಯದಲ್ಲೂ ಚರ್ಚೆಗೆ ಒಳಪಡುವುದಿದೆ. ಸರ್ಕಾರಗಳನ್ನು ನಡೆಸುವವರು ಬದಲಾದಂತೆ ವರ್ಗಾವಣೆಯಲ್ಲಿನ ಭ್ರಷ್ಟಾಚಾರದ ಪ್ರಮಾಣದಲ್ಲಿ ಏರುಪೇರಾಗಬಹುದೇ ವಿನಾ, ಇದಕ್ಕೆ ಕಡಿವಾಣ ಬೀಳುವ ನಿದರ್ಶನಗಳು ಕಾಣಸಿಗುವುದು ಅಪರೂಪ.

ವರ್ಗಾವಣೆ ಪ್ರಕ್ರಿಯೆ ಕುರಿತ ಚರ್ಚೆಯು ವರ್ಗಾವಣೆಯ ಅಗತ್ಯ ಅಸಲಿಗೂ ಇದೆಯೇ ಎಂಬುದರತ್ತ ವಾಲುವುದೇ ಇಲ್ಲ. ವರ್ಗಾವಣೆ ಪ್ರಕ್ರಿಯೆಯು ಸರ್ಕಾರಿ ನೌಕರರ ಕಾರ್ಯಕ್ಷಮತೆ ಹೆಚ್ಚಿಸಿ, ಭ್ರಷ್ಟಾಚಾರ ತಗ್ಗಿಸಿ, ಅವರು ಭಾಗವಾಗಿರುವ ವ್ಯವಸ್ಥೆಯ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ ತರಲು ನೆರವಾಗುತ್ತಿದೆಯೋ ಇಲ್ಲವೋ ಎಂದು ಕೂಲಂಕಷವಾಗಿ ಪರಿಶೀಲಿಸುವ ಅಗತ್ಯ ಇದೆ. ಬಡ್ತಿ, ಮಾನವ ಸಂಪನ್ಮೂಲದ ಹೊಂದಾಣಿಕೆಯ ಅನಿವಾರ್ಯ, ಮಿತಿಮೀರಿದ ಭ್ರಷ್ಟಾಚಾರ ಹೀಗೆ ನಿರ್ದಿಷ್ಟ ಕಾರಣಗಳಿದ್ದಾಗ ಮಾತ್ರ ವರ್ಗಾವಣೆಗೆ ಅನುವು ಮಾಡಿಕೊಟ್ಟರೆ ಸಾಲದೆ? ಕಡ್ಡಾಯ ವರ್ಗಾವಣೆ ನಿಯಮ ತೆಗೆದು, ವರ್ಗಾವಣೆ ಪ್ರಮಾಣ ತಗ್ಗಿಸುತ್ತಾ ಹೋದರೆ ಅದರಿಂದ ನೌಕರರು ಹಾಗೂ ಅವರು ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ಕಾರ್ಯವೈಖರಿಯಲ್ಲಿ ಏನಾದರೂ ಬದಲಾವಣೆ ಆಗುವುದೇ ಎಂದು ಅವಲೋಕಿಸುವುದು ಸೂಕ್ತವಲ್ಲವೇ?

ಭ್ರಷ್ಟಾಚಾರಕ್ಕೆ ಕಡಿವಾಣ ವಿಧಿಸಲು ಸೂಕ್ತ ಕ್ರಮವೆಂದು ಬಿಂಬಿಸಲಾಗುವ ವರ್ಗಾವಣೆ ಪ್ರಕ್ರಿಯೆಯಲ್ಲಿಯೇ ಭ್ರಷ್ಟಾಚಾರ ಹಾಗೂ ಸ್ವಜನಪಕ್ಷಪಾತ ಹೆಚ್ಚಿರುವುದು ಬಹಿರಂಗ ಸತ್ಯ. ವಸ್ತುಸ್ಥಿತಿ ಹೀಗಿರುವಾಗ, ಆಡಳಿತ ಸುಧಾರಣೆಗೂ ವರ್ಗಾವಣೆಗೂ ನೇರ ಸಂಬಂಧ ಕಲ್ಪಿಸಲು ಆಗುವುದೇ? ಶಿಕ್ಷಕರು, ಅಧಿಕಾರಿಗಳು, ನೌಕರರು ಒಂದೆಡೆ ನೆಲೆಯೂರಲು ಅವಕಾಶ ಕಲ್ಪಿಸಿದರೆ, ಅದರಿಂದಾಗುವ ಸಕಾರಾತ್ಮಕ ಪರಿಣಾಮಗಳತ್ತಲೂ ಕಣ್ಣುಹಾಯಿಸಬೇಕಲ್ಲವೇ? ಇತ್ತೀಚೆಗೆ ನಡೆದ ಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯಿಂದ, ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನನುಕೂಲಗಳನ್ನೇ ಪರಿಗಣಿಸಿದರೂ ಸಾಕು, ಕೆಲವೊಮ್ಮೆ ವರ್ಗಾವಣೆ ಪ್ರಕ್ರಿಯೆಯು ವ್ಯವಸ್ಥೆಯೊಂದರ ಸುಗಮ ಕಾರ್ಯನಿರ್ವಹಣೆಗೆ ಹೇಗೆ ತೊಡಕುಂಟು ಮಾಡಲಿದೆ ಎಂಬುದರ ಅರಿವಾಗುವುದು.

ಮಾಡುವ ಕೆಲಸವನ್ನು ಪ್ರೀತಿಸುವ, ತಾವು ಕಾರ್ಯನಿರ್ವಹಿಸುವ ಶಾಲೆ, ಕಾಲೇಜು ಅಥವಾ ಉದ್ಯೋಗ ಸ್ಥಳದಲ್ಲಿ ಸುಧಾರಣೆಗಳನ್ನು ತರಲು ಬಯಸುವವರ ಪಾಲಿಗೆ ವರ್ಗಾವಣೆ ಪ್ರಕ್ರಿಯೆ ದೊಡ್ಡ ತೊಡಕಾಗಿ ಪರಿಣಮಿಸುವುದೂ ಇದೆ. ಈ ಬಾರಿ ವರ್ಗಾವಣೆ ಹೊಂದಿದ ಕೆಲ ರಂಗ ಶಿಕ್ಷಕರಿಗೆ ಎದುರಾದ ಅನಿಶ್ಚಿತತೆ ಮತ್ತು ಆತಂಕವನ್ನು ಗಮನಿಸಿದರೆ, ವರ್ಗಾವಣೆ ಪ್ರಕ್ರಿಯೆ ಇರದೇ ಹೋಗಿದ್ದರೆ ಅದರಿಂದ ಇವರಿಗೆ ಹಾಗೂ ಇವರು ಅದುವರೆಗೂ ಕಾರ್ಯನಿರ್ವಹಿಸಿದ ಶಾಲೆಗೆ ಹೆಚ್ಚಿನ ಒಳಿತೇ ಆಗುತ್ತಿತ್ತೇನೊ ಅನಿಸದಿರದು. ತಾವು ಕಾರ್ಯನಿರ್ವಹಿಸುತ್ತಿದ್ದ ಶಾಲೆಯ ಮಕ್ಕಳಲ್ಲಿ ಚಿತ್ರಕಲೆ, ಸಾಹಿತ್ಯ ಹಾಗೂ ರಂಗ ಚಟುವಟಿಕೆಗಳ ಕುರಿತು ಆಸಕ್ತಿ ಮೂಡಿಸಲು ಬಹಳಷ್ಟು ಮುತುವರ್ಜಿ ತೋರಿದವರಿಗೆ, ಮುಂದೆ ಕಾರ್ಯನಿರ್ವಹಿಸಲಿರುವ ಶಾಲೆಯಲ್ಲಿ ಇದಕ್ಕೆಲ್ಲ ಅವಕಾಶ ಮತ್ತು ಬೆಂಬಲ ದೊರೆಯುವುದೋ ಇಲ್ಲವೋ ಎನ್ನುವ ಆತಂಕ ಎದುರಾದಂತಿತ್ತು.



ಇನ್ನು ಕೆಲ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರ ಪೈಕಿ ಹಲವರು ಒಂದೇ ಬಾರಿಗೆ ವರ್ಗವಾಗಿ ಬೇರೆಡೆ ನಿಯೋಜನೆಗೊಂಡಿರುವುದರಿಂದ ವಿದ್ಯಾರ್ಥಿಗಳು ಅನುಭವಿಸುತ್ತಿರುವ ತೊಂದರೆಗಳ ಕುರಿತೂ ಪತ್ರಿಕೆಗಳಲ್ಲಿ ವರದಿಯಾಗಿದೆ. ಜನಸಾಮಾನ್ಯರೊಂದಿಗೆ ಹೆಚ್ಚು ಒಡನಾಡುವ ಅಂಚೆ ಕಚೇರಿ, ಬ್ಯಾಂಕು ಹಾಗೂ ಇತರ ಕೆಲವು ಸರ್ಕಾರಿ ಕಚೇರಿಗಳಲ್ಲಿ ತಮ್ಮ ಹೊಣೆಗಾರಿಕೆ ಅರಿತು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವ ಸಿಬ್ಬಂದಿ ದಿಢೀರನೆ ವರ್ಗಾವಣೆಯಾದಾಗಲೂ ಜನ ಚಡಪಡಿಸುವುದುಂಟು. ಹೀಗಾಗಿ, ತಾವು ಮಾಡುವ ಕೆಲಸದ ಕುರಿತು ಹೆಚ್ಚು ಒಲವು ಹೊಂದಿರುವವರಿಗೆ ಒಂದೆಡೆ ನೆಲೆನಿಂತು ಸುದೀರ್ಘ ಕಾಲ ಕಾರ್ಯನಿರ್ವಹಿಸಲು ಅನುವು ಮಾಡಿಕೊಟ್ಟರೆ, ಅದರಿಂದ ಅವರು ಭಾಗವಾಗಿರುವ ವ್ಯವಸ್ಥೆಯ ಸುಧಾರಣೆಗೆ ನೆರವಾಗುವುದು.

ವರ್ಗಾವಣೆ ಎಂಬುದು ರಾಜಕಾರಣಿಗಳಿಗೆ ತಾವೆಷ್ಟು ಪ್ರಭಾವಶಾಲಿ ಎಂದು ನಿರೂಪಿಸುವ ಸಾಧನವಾಗಿಯೋ ವ್ಯವಸ್ಥೆಯ ಭಾಗ ಎಂದು ಮಾಡಿ ಮುಗಿಸಬೇಕಿರುವ ಕಸರತ್ತಾಗಿಯೋ ತೋರುವ ಬದಲಿಗೆ, ಆಯಾ ವ್ಯವಸ್ಥೆಯ ಕಾರ್ಯಕ್ಷಮತೆ ಹೆಚ್ಚಿಸಲು ನೆರವಾಗುವ ಪ್ರಕ್ರಿಯೆಯಾಗಿ ಮಾರ್ಪಡುವುದು ಸೂಕ್ತವಲ್ಲವೇ?

ವಾಚಕರ ವಾಣಿ

ಭಾಷೆಯ ಉಳಿವಿಗಾಗಿ ಜಡತ್ವ ಕೊಡವಿರಿ

ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣವಾಗಿ 50 ವರ್ಷ ತುಂಬಲಿರುವ ಈ ಸಂದರ್ಭದಲ್ಲಿ, 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದು ಆಗ ಹಾಡಿ ಹೊಗಳಿದ್ದನ್ನು ಪ್ರತಿ ಸರ್ಕಾರಿ ಕಾರ್ಯಕ್ರಮ-ದಲ್ಲಿ ಈಗಲೂ ಹಾಡುತ್ತಲೇ ಇದ್ದೇವೆ. ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ ಎಂದು ನವೆಂಬರ್ ತಿಂಗಳಲ್ಲಿ ವೀರಾವೇಶದಿಂದ ಭಾಷಣ ಮಾಡುತ್ತೇವೆ. ಆದರೆ ಕರ್ನಾಟಕದಲ್ಲಿ ಕನ್ನಡಿಗನೇ ಪರದೇಶಿಯಾಗುವ ಕಾಲ ಸನ್ನಿಹಿತವಾಗುತ್ತಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿವಿಧ ಕನ್ನಡಪರ ಸಂಘಟನೆಗಳು ಭಾಷೆಯ ಉಳಿವಿಗಾಗಿ ತಮ್ಮ ಜಡತ್ವವನ್ನು ಕೊಡವಬೇಕಿದೆ.

ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಆದೇಶ ನೀಡುವ ನ್ಯಾಯಾಧೀಶರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಗುರುತಿಸಿ, ಗೌರವಿಸುತ್ತದೆ. ಆದರೆ, ಅದೇ ನ್ಯಾಯಾಲಯದಲ್ಲಿ ಭಾಷೆಯ ಬೆಳವಣಿಗೆಗಾಗಿ ಶ್ರಮಿಸುವ ಲಿಪಿಕ ವರ್ಗಕ್ಕೆ ಕನಿಷ್ಠಪಕ್ಷ ಒಂದು ಮೆಚ್ಚುಗೆ ಪತ್ರ ನೀಡಲೂ ಆಗುತ್ತಿಲ್ಲ. ಒಡಿಶಾ ಸರ್ಕಾರವು ರಾಜ್ಯದಲ್ಲಿನ ಅಂಗಡಿ ಮುಂಗಟ್ಟು, ವಾಣಿಜ್ಯ ಸಂಸ್ಥೆಗಳಲ್ಲಿನ ನಾಮಫಲಕಗಳು ಅಧಿಕೃತ ಆಡಳಿತಭಾಷೆಯಾದ ಒಡಿಯಾ ಹೊರತುಪಡಿಸಿ ಅನ್ಯ ಭಾಷೆಯಲ್ಲಿದ್ದರೆ, ಮೊದಲ ಬಾರಿಗೆ ಒಂದು ವಾರ ಕಾಲಾವಕಾಶ, ಎರಡನೇ ಬಾರಿಗೆ ₹ 5 ಸಾವಿರ ಜುಲ್ಮಾನೆ, ಮೂರನೇ ಬಾರಿಗೆ ₹ 25 ಸಾವಿರ ದಂಡ, ಕೊನೆಯ ಬಾರಿಗೆ ಪರವಾನಗಿ ರದ್ದುಪಡಿಸುವ ಕ್ರಮ ಜರುಗಿಸುತ್ತದೆ. ಕರ್ನಾಟಕದಲ್ಲೂ ಇಂತಹ ಕಟ್ಟುನಿಟ್ಟಿನ ಆದೇಶ ಜಾರಿಗೆ ಬರಬೇಕು. ಆದರೆ ಸರ್ಕಾರಿ ಆದೇಶಗಳೇ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗುವುದಾದರೆ ಮಾಡುವುದೇನು?

ಎ.ಎಸ್.ಮಕಾನದಾರ, ಗದಗ

ತೆರಿಗೆ ವರಮಾನ ಹಂಚಿಕೆಯಲ್ಲಿ ಅನ್ಯಾಯ

ಒಕ್ಕೂಟ ಸರ್ಕಾರವು ಅನುದಾನ ಹಂಚಿಕೆ ಸೂತ್ರದಲ್ಲಿ ಬದಲಾವಣೆ ಮಾಡಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿರುವುದು (ಪ್ರ.ವಾ., ಆ. 14) ಸರಿಯಷ್ಟೆ. ಮೊದಲನೆಯದಾಗಿ, ಒಕ್ಕೂಟ ಸರ್ಕಾರವು 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ತನ್ನ ತೆರಿಗೆ ವರಮಾನದಿಂದ ಶೇ 41ರಷ್ಟನ್ನು ರಾಜ್ಯಗಳಿಗೆ ವರ್ಗಾಯಿಸಬೇಕು. ಆದರೆ ಅದು ಶೇ 30ರ ಆಸುಪಾಸಿನಲ್ಲಿದೆ. ಇದು ರಾಜ್ಯಗಳಿಗೆ ಆಗುತ್ತಿರುವ ಅನ್ಯಾಯ. ಎರಡನೆಯದಾಗಿ, ಸೆಸ್ ಮತ್ತು ಸರ್‌ಚಾರ್ಜ್‌ಗಳ ರಾಜಸ್ವವನ್ನು ರಾಜ್ಯಗಳ ಜೊತೆ ಹಂಚಿಕೊಳ್ಳುತ್ತಿಲ್ಲ. ಒಕ್ಕೂಟ ತತ್ವಕ್ಕೆ ಇದು ವಿರುದ್ಧವಾಗಿದೆ. ಒಕ್ಕೂಟ ಸರ್ಕಾರದ ಒಟ್ಟು ತೆರಿಗೆ ವರಮಾನದಲ್ಲಿ ಇವುಗಳ ಪಾಲು 2011-12ರಲ್ಲಿ ಶೇ 10.4 ರಷ್ಟಿದ್ದುದು, 2021- 22ರಲ್ಲಿ ಶೇ 28.1ಕ್ಕೇರಿದೆ. ಈ ತೆರಿಗೆಗಳ ರಾಜಸ್ವವನ್ನು 'ಹಂಚಿಕೆ ವರಮಾನ' ಪಟ್ಟಿಗೆ ಸೇರಿಸಬೇಕು.

ಮೂರನೆಯದಾಗಿ, ದೇಶದ ಎನ್‌ಡಿಪಿಗೆ 2020-21ರಲ್ಲಿ ಕರ್ನಾಟಕದ ಎನ್‌ಎಸ್‌ಡಿಪಿ ಪಾಲು ಶೇ 10.88ರಷ್ಟಿದ್ದರೆ, ಉತ್ತರ ಪ್ರದೇಶದ್ದು ಶೇ 9.39. ಆದರೆ ಒಕ್ಕೂಟದ ಒಟ್ಟು ಸಂಪನ್ಮೂಲ ವರ್ಗಾವಣೆಯಲ್ಲಿ 2023-24ರಲ್ಲಿ ಉತ್ತರ ಪ್ರದೇಶದ ಪಾಲು ಶೇ 17.93ರಷ್ಟಿದ್ದರೆ ಕರ್ನಾಟಕದ ಪಾಲು ಶೇ 3.64. ಇದರಿಂದಾಗಿ, ರಾಜ್ಯದ ಆರ್ಥಿಕ ಬೆಳವಣಿಗೆ ಕುಂಠಿತಗೊಂಡರೆ ಸಂಪನ್ಮೂಲ ವರ್ಗಾವಣೆಯಲ್ಲಿ ಒಕ್ಕೂಟ ಅನುಸರಿಸುತ್ತಿರುವ ತಾರತಮ್ಯ ನೀತಿಯು ಕಾರಣವಾಗುತ್ತದೆ. ಈಗ ರಾಜ್ಯ ಸರ್ಕಾರವು ಒಕ್ಕೂಟಕ್ಕೆ ಸಲ್ಲಿಸಿರುವ ಮನವಿಯನ್ನು ಗಂಭೀರವಾಗಿ ಪರಿಗಣಿಸಿ, ಕರ್ನಾಟಕಕ್ಕೆ (ದಕ್ಷಿಣ ಭಾರತದ ರಾಜ್ಯಗಳಿಗೆ) ನ್ಯಾಯ ದೊರಕಿಸಿಕೊಡಬೇಕಾದುದು ಒಕ್ಕೂಟ ಸರ್ಕಾರದ ಜವಾಬ್ದಾರಿಯಾಗಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಬೆಂಜೆನ್ ಬಳಕೆ ಸಲ್ಲ

ಬಿಬಿಎಂಪಿ ಕೇಂದ್ರ ಕಚೇರಿಯ ಪ್ರಯೋಗಾಲಯದಲ್ಲಿ ರಾಸಾಯನಿಕದಿಂದ ಬೆಂಕಿ ಅವಘಡ ಸಂಭವಿಸಿರುವಂತಹ ಸುದ್ದಿ ನಮ್ಮ ದೇಶದಲ್ಲಿ ವಿರಳವೇನಲ್ಲ. ರಾಸಾಯನಿಕಗಳಿಂದ ಪದೇಪದೇ ಆಗುತ್ತಿರುವ ಇಂಥ ಅವಘಡಗಳ ಬಗ್ಗೆ ತನಿಖೆ ನಡೆಯುತ್ತದೆ, ಆದರೆ ಕಲಿಯುತ್ತಿರುವುದು ಶೂನ್ಯ. ಇದು ವಿಷಾದದ ಸಂಗತಿ.

ಪ್ರಸ್ತುತ ಪ್ರಕರಣದಲ್ಲಿ, ಪ್ರಯೋಗಾಲಯದಲ್ಲಿ 'ಬೆಂಜೆನ್' ಎಂಬ ರಾಸಾಯನಿಕ ದ್ರಾವಕದ ಬಳಕೆಯಾಗಿರುವುದು ಬೆಳಕಿಗೆ ಬಂದಿದೆ. ಇದು ಆಘಾತಕಾರಿ ಸಂಗತಿ. ಈ ದ್ರಾವಕವು ಕ್ಯಾನ್ಸರ್‌ಕಾರಕ ಎಂದು ದೃಢಪಟ್ಟಿದೆ. ಬೆಂಜೆನ್‌ನಂಥ ಕ್ಯಾನ್ಸರ್‌ಕಾರಕ ರಾಸಾಯನಿಕಗಳಿಗೆ ಇಂತಿಷ್ಟು ಮಿತಿ ಇರಬೇಕು ಎನ್ನುವುದೇ ಸರಿಯಲ್ಲ. ಇವು ಕನಿಷ್ಠ ಯಾವುದೇ ಪ್ರಮಾಣದಲ್ಲಿದ್ದರೂ ಅಪಾಯಕಾರಿ ಎಂದು ತಿಳಿಯುವುದು ಸೂಕ್ತ. ಆದ್ದರಿಂದ ಬೆಂಜೆನ್‌ಗೆ ಪರ್ಯಾಯವಾದ ವಸ್ತುಗಳನ್ನು ಬಳಸಿ ಅಪಾಯದ ಪ್ರಮಾಣವನ್ನು ಕಡಿಮೆ ಮಾಡಬಹುದು. ರಾಸಾಯನಿಕಗಳಿಂದ ಅವಘಡಗಳು ಸಂಭವಿಸುವುದನ್ನು ತಡೆಯಲು ಸರ್ಕಾರ ಮತ್ತಷ್ಟು ಸೂಕ್ತ ನಿಗಾತಂತ್ರಗಳನ್ನು ರೂಪಿಸಬೇಕಾಗಿದೆ.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ದೆಹಲಿ ಕಾಯ್ದೆ: ವಿರೋಧ ಸರಿಯಲ್ಲ

'ರಾಷ್ಟ್ರ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (ತಿದ್ದುಪಡಿ) ಕಾಯ್ದೆ'ಗೆ ಕೆಲವರು ವಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ. ಈ ಕಾಯ್ದೆಯು ದೆಹಲಿ ಸರ್ಕಾರಕ್ಕಿರುವ ಅಧಿಕಾರಗಳನ್ನೆಲ್ಲ ಕಿತ್ತುಕೊಳ್ಳುವಂತಿದೆ ಎನ್ನುವುದು ಸತ್ಯಕ್ಕೆ ದೂರವಾದ ಆರೋಪ. ಇದು ಯಾವ ಹಂತದಲ್ಲೇ ಆಗಲಿ ಒಕ್ಕೂಟ ವ್ಯವಸ್ಥೆಯ ತತ್ವಕ್ಕೆ ಅಥವಾ ಕೇಂದ್ರ- ರಾಜ್ಯಗಳ ಮಧುರ ಸಂಬಂಧಕ್ಕೆ ವಿರುದ್ಧವಾಗಿಲ್ಲ. ದೆಹಲಿಯ ಆಡಳಿತಾತ್ಮಕ ಸೇವೆಗಳಿಗೆ ಸಂಬಂಧಿಸಿದಂತೆ ಎರಡೂ ಸರ್ಕಾರಗಳ ನಡುವೆ ಇದು ಸಮನ್ವಯವನ್ನು ಸಾಧ್ಯವಾಗಿಸಲಿದೆ.

ದೆಹಲಿಯ ಸುಗಮ ಆಡಳಿತಕ್ಕಾಗಿ ಅಲ್ಲಿಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ 'ನ್ಯಾಷನಲ್ ಕ್ಯಾಪಿಟಲ್ ಸಿವಿಲ್ ಸರ್ವೀಸ್ ಅಥಾರಿಟಿ' (ಎನ್‌ಸಿಸಿಎಸ್‌ಎ) ಎನ್ನುವ ಹೊಸ ಉಪಕ್ರಮಕ್ಕೆ ಕಾಯ್ದೆಯು ಅವಕಾಶ ಮಾಡಿಕೊಟ್ಟಿದೆ. ಈ ಪ್ರಾಧಿಕಾರವು ಗ್ರೂಪ್ 'ಎ' ಅಧಿಕಾರಿಗಳ ನಿಯೋಜನೆ ಮತ್ತು ವರ್ಗಾವಣೆಗೆ ಸಂಬಂಧಿಸಿ ದೆಹಲಿಯ ಲೆಫ್ಟಿನೆಂಟ್ ಗವರ್ನರ್‌ಗೆ ಶಿಫಾರಸು ಮಾಡುವ ಹೊಣೆ ಹೊಂದಿರಲಿದೆ. ಅಲ್ಲದೆ, ಪ್ರಾಧಿಕಾರಕ್ಕೆ ಸರಿಯೆನಿಸಿದರೆ, ಈ ಹೊಣೆಗಾರಿಕೆಯನ್ನು ಅದು ಯಾವುದೇ ಇಲಾಖೆ ಅಥವಾ ಪ್ರಾಧಿಕಾರಕ್ಕೆ ಬೇಕಾದರೂ ವಹಿಸಲು ಅವಕಾಶ ಕೊಡುವ ಮೂಲಕ ಕಾಯ್ದೆಯು ಒಕ್ಕೂಟ ತತ್ವದ ಧರ್ಮವನ್ನು ಎತ್ತಿ ಹಿಡಿದಿದೆ. ಆದರೆ, ಕಾಂಗ್ರೆಸ್ ಪಕ್ಷವು ಈಗ ರಾಜಕೀಯ ಕಾರಣಗಳಿಗಾಗಿ ಇದನ್ನು ವಿರೋಧಿಸುತ್ತಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗಿ ಕಂಡುಬರುತ್ತಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ದೆಹಲಿಯಲ್ಲಿ ಭ್ರಷ್ಟಾಚಾರದ ಸೋಂಕಿಲ್ಲದ ಮತ್ತು ಸಂಪೂರ್ಣ ಜನಪರ ಆಡಳಿತದ ಸಂಸ್ಕೃತಿಯನ್ನು ಸೃಷ್ಟಿಸುವುದು ಅತ್ಯಗತ್ಯವಾಗಿದೆ. ಅದಕ್ಕಾಗಿಯೇ ಕೇಂದ್ರ ಸರ್ಕಾರವು ಈ ಕಾಯ್ದೆಯನ್ನು ಜಾರಿ ಮಾಡುತ್ತಿದೆ.

ಮಹೇಶ್ ಎಂ.ಜಿ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತ ಮಾತೆ ಭಾರತೀಯರೆಲ್ಲರ ಧ್ವನಿ

ನನ್ನ ಪ್ರೀತಿಯ ಭಾರತ ಮಾತೆಯು ನೆಲವಷ್ಟೇ ಅಲ್ಲ. ಅದು ಒಂದಷ್ಟು ಚಿಂತನೆಗಳೂ ಅಲ್ಲ. ಅದು ನಿರ್ದಿಷ್ಟ ಸಂಸ್ಕೃತಿ, ಇತಿಹಾಸ ಅಥವಾ ಧರ್ಮವೂ ಅಲ್ಲ. ಅದು ಜನರಿಗೆ ನೀಡಲಾಗಿರುವ ಬೇರೆ ಬೇರೆ ಜಾತಿಗಳೂ ಅಲ್ಲ. ಎಷ್ಟೇ ದುರ್ಬಲನಿರಲಿ ಅಥವಾ ಎಷ್ಟೇ ಬಲಶಾಲಿ ಆಗಿರಲಿ, ಅದು ಪ್ರತೀ ಭಾರತೀಯನ ಧ್ವನಿ. ಭಾರತವೆಂದರೆ, ಈ ಎಲ್ಲ ಧ್ವನಿಗಳಲ್ಲಿ ಅಡಗಿರುವ ಸಂತೋಷ, ಭೀತಿ, ನೋವು

• ರಾಹುಲ್ ಗಾಂಧಿ



ಸ್ವಾತಂತ್ರ್ಯದ ಸಂದರ್ಭದಲ್ಲಿ ಭಾರತ ಮಾತೆ ಕುರಿತು ಲೇಖನ

'ಮಾತುಗಳು ಹೃದಯದಿಂದ ಬಂದರೆ ಅದು ನೇರವಾಗಿ ಹೃದಯವನ್ನೇ ತಾಕುತ್ತದೆ'– ಇದು ಕವಿ ರೂಮಿಯ ಸಾಲು.

ನಾನು ಮನೆ ಎಂದು ಭಾವಿಸಿರುವ ನೆಲದಲ್ಲಿ ನಡೆದಾಡುತ್ತಾ ನೂರ ನಲವತ್ತೈದು ದಿನಗಳನ್ನು ಕಳೆದ ವರ್ಷ ಕಳೆದಿದ್ದೆ. ಕಡಲ ಕಿನಾರೆಯಿಂದ ನಾನು ಆರಂಭಿಸಿದೆ. ತಾಪ, ದೂಳು, ಮಳೆ ಎಲ್ಲದರ ನಡುವೆ ನಡೆದೆ. ಅರಣ್ಯ, ಪಟ್ಟಣಗಳು, ಬೆಟ್ಟಗಳು ಎಲ್ಲವನ್ನೂ ಎಡತಾಕಿ ನನ್ನ ಪ್ರೀತಿಯ ಮಂಜಿನ ನಾಡು ಕಾಶ್ಮೀರವನ್ನು ತಲುಪಿದೆ.

ದಾರಿಯುದ್ದಕ್ಕೂ ಹಲವು ಜನರು ನನ್ನನ್ನು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ: ನೀನು ಇದನ್ನು ಏಕೆ ಮಾಡುತ್ತಿದ್ದೀಯ? ಇಂದಿಗೂ ಕೆಲವರು ಕೇಳುತ್ತಾರೆ, ಏಕೆ? ನೀನು ಹುಡುಕುತ್ತಿರುವುದಾದರೂ ಏನನ್ನು? ನೀನು ಕಂಡುಕೊಂಡದ್ದು ಏನನ್ನು?

ನಾನು ಇಷ್ಟಪಟ್ಟ ಆ ಒಂದು ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕಿತ್ತು. ಆ ಒಂದು ವಿಚಾರಕ್ಕಾಗಿ ನನ್ನ ಜೀವವನ್ನೂ ಸೇರಿಸಿ ಎಲ್ಲವನ್ನೂ ತ್ಯಜಿಸಲು ಸಿದ್ಧನಿದ್ದೇನೆ. ಆ ಒಂದು ವಿಚಾರದಿಂದಾಗಿ ಈ ಹಲವು ವರ್ಷಗಳಲ್ಲಿ ನಾನು ಅಷ್ಟೊಂದು ನೋವು ಮತ್ತು ಅಪಮಾನವನ್ನು ಎದುರಿಸಿದ್ದೇನೆ.

ನಾನು ಪ್ರೀತಿಸಿದ ಆ ವಿಚಾರ ಯಾವುದು ಎಂಬುದನ್ನು ನಿಖರವಾಗಿ ತಿಳಿದುಕೊಳ್ಳಲು ಬಯಸಿದ್ದೆ. ಅದು ಈ ನೆಲವೇ? ಈ ಪರ್ವತಗಳೇ? ಈ ಸಮುದ್ರವೇ? ಅದೊಂದು ವ್ಯಕ್ತಿಯೇ? ಅದು ಜನರೇ ಅಥವಾ ಚಿಂತನೆಗಳೇ? ಆದರೆ, ಇನ್ನೂ ಏನೋ ಇದೆ. ಈ ರೀತಿಯಲ್ಲಿ ಮೋಡಿಗೆ ಒಳಗಾಗಬೇಕಾದರೆ ನನ್ನ ಹೃದಯ ಎಂತಹ ರೀತಿಯದ್ದು ಎಂಬುದನ್ನೂ ನಾನು ಅರ್ಥ ಮಾಡಿಕೊಳ್ಳಬೇಕಿತ್ತೇ?

ಹಲವು ವರ್ಷಗಳಿಂದ ದಿನವೂ ಎಂಟರಿಂದ ಹತ್ತು ಕಿಲೋಮೀಟರ್ ಓಡುವ ಅಭ್ಯಾಸ ನನಗೆ ಇದೆ. ಹಾಗಾಗಿ ನಾನು– 'ಇಪ್ಪತ್ತೈದು?' 25 ಕಿಲೋಮೀಟರ್ ನಾನು ಬಹಳ ಸುಲಭವಾಗಿ ನಡೆದುಬಿಡಬಲ್ಲೆ ಎಂದು ಭಾವಿಸಿದ್ದೆ. ಈ ನಡಿಗೆ ನನಗೆ ಬಹಳ ಸುಲಭದ್ದು ಎಂಬುದು ಖಚಿತವೇ ಇತ್ತು.

ಕೆಲವೇ ದಿನಗಳಲ್ಲಿ ನೋವಿನ ಅನುಭವ ಆಯಿತು. ನನ್ನ ಮಂಡಿಯ ಹಳೆಯ ನೋವು ಕಾಣಿಸಿಕೊಂಡಿತು. ತಾಸುಗಟ್ಟಲೆ ಫಿಸಿಯೋಥೆರಪಿ ಮಾಡಿಸಿಕೊಂಡ ಬಳಿಕ ಮರೆಯಾಗಿದ್ದ ನೋವು ಮರಳಿ ಬಂದಿದೆ. ಮರುದಿನ ಬೆಳಿಗ್ಗೆ, ಕಬ್ಬಿಣದ ಕಂಟೇನರ್‌ನಲ್ಲಿ ಒಬ್ಬನೇ ಕುಳಿತು ಕಣ್ಣೀರಾದೆ. ನನ್ನ ಮುಂದೆ ಚಾಚಿಕೊಂಡಿರುವ 3,800 ಕಿಲೋಮೀಟರ್‌ಗಳನ್ನು ನಡೆಯುವುದು ಹೇಗೆ? ನನ್ನೊಳಗಿದ್ದ ಅಹಂ ಜಾರಿ ಹೋಗಿತ್ತು.

ಮುಂಜಾನೆ ಬೆಳಕು ಕಾಣಿಸಿಕೊಳ್ಳುವ ಮುನ್ನವೇ ನಾವು ನಡಿಗೆ ಆರಂಭಿಸುತ್ತಿದ್ದೆವು. ಬಹುತೇಕ ತಕ್ಷಣವೇ ನೋವು ಶುರುವಾಗುತ್ತಿತ್ತು. ಹಸಿದ ತೋಳದಂತೆ ಅದು ನಾನು ಹೋದಲ್ಲೆಲ್ಲ ಹಿಂಬಾಲಿಸುತ್ತಿತ್ತು. ನಾನು ನಿಲ್ಲುವುದಕ್ಕೆ ಕಾಯುತ್ತಿತ್ತು. ನಡಿಗೆ ಆರಂಭಿಸಿ ಕೆಲವು ದಿನಗಳಾಗುವಷ್ಟರಲ್ಲಿ ಫಿಸಿಯೋಥೆರಪಿಸ್ಟ್ ನಮ್ಮನ್ನು ಕೂಡಿಕೊಂಡರು. ಅವರು ಬಂದವರು ಸಲಹೆಗಳನ್ನು ಕೊಟ್ಟರು. ನೋವು ಹಾಗೆಯೇ ಮುಂದುವರಿಯಿತು.

ಬಳಿಕ ನಾನು ಏನನ್ನೋ ಗಮನಿಸಲು ಆರಂಭಿಸಿದೆ. ನಡಿಗೆ ನಿಲ್ಲಿಸೋಣ ಎಂದು, ಕೈಚೆಲ್ಲಿ ಬಿಡೋಣ ಎಂದು ನಾನು ಪ್ರತಿ ಬಾರಿ ಯೋಚಿಸಿದಾಗಲೂ ಯಾರೋ ಒಬ್ಬರು ಬಂದು ಮುಂದುವರಿಸುವ ಚೈತನ್ಯ ತುಂಬುವ ಉಡುಗೊರೆ ಕೊಟ್ಟು ಹೋಗುತ್ತಿದ್ದರು. ಒಂದು ಬಾರಿ ಅದು ಪ್ರೀತಿಯ ಪುಟ್ಟ ಹುಡುಗಿಯ ಚಂದದ ಪತ್ರದ ರೂಪದಲ್ಲಿತ್ತು. ಮತ್ತೊಂದು ಬಾರಿ ಬಾಳೆಕಾಯಿ ಚಿಪ್ಸ್‌ನೊಂದಿಗೆ ಬಂದ ವೃದ್ಧೆ. ಮತ್ತೊಮ್ಮೆ ವ್ಯಕ್ತಿಯೊಬ್ಬರು ಥಟ್ಟಂತ ಓಡಿಬಂದು ನನ್ನ ತಬ್ಬಿಕೊಂಡರು. ಇದು ಹೇಗೆ ಎಂದರೆ ಮೌನ ಚೈತನ್ಯವೊಂದು ನನಗೆ ನೆರವಾಗುತ್ತಲೇ ಇದ್ದಂತೆ, ಕತ್ತಲೆಯ ಅರಣ್ಯದಲ್ಲಿ ಮಿಂಚುಹುಳಗಳ ಬೆಳಕಿನಂತೆ, ಇದು ಎಲ್ಲೆಲ್ಲೂ ಇತ್ತು. ನನಗೆ ನಿಜಕ್ಕೂ ಅದರ ಅಗತ್ಯ ಇತ್ತು ಅನಿಸಿದಾಗಲೆಲ್ಲ ನನಗೆ ನೆರವು ನೀಡಿ ಮಾರ್ಗದರ್ಶನ ಮಾಡಲು ಅದು ಇತ್ತು.

ಯಾತ್ರೆಯು ಮುಂದುವರಿಯಿತು. ಮೊದ ಮೊದಲಿಗೆ, ನನಗೆ ಹೇಳಬೇಕನಿಸಿದ್ದನ್ನು ಹೇಳಬೇಕು ಎಂದುಕೊಂಡಿದ್ದೆ. ನನಗೆ ಅರ್ಥವಾಗಿದೆ ಎಂಬುದನ್ನು ಅವರಿಗೆ ತೋರಿಸಬೇಕು ಎಂದು ಬಯಸಿದ್ದೆ. ಅವರ ಸಮಸ್ಯೆಗಳಿಗೆ ಇರುವ ಪರಿಹಾರಗಳ ಕುರಿತು ಮಾತನಾಡಬೇಕು ಎಂದುಕೊಂಡಿದ್ದೆ. ಬಹಳ ಬೇಗನೆ ಜನರ ಸಂಖ್ಯೆ ದೊಡ್ಡದಾಯಿತು. ನೋವು ಅಷ್ಟೇ ಜೋರಾಯಿತು ಮತ್ತು ನಾನು ಅವರನ್ನು ಗಮನಿಸಲಾರಂಭಿಸಿದೆ ಮತ್ತು ಆಲಿಸಲಾರಂಭಿಸಿದೆ.



ನಾವು ನಡೆಯುವಲ್ಲೆಲ್ಲ ಒಂದು ರೀತಿಯ ಅಬ್ಬರ ಇತ್ತು. ದೊಡ್ಡ ದನಿಯಲ್ಲಿ ಘೋಷಣೆ, ಕ್ಯಾಮೆರಾ ಕ್ಲಿಕ್ಕಿಸುವ ಸದ್ದು, ಜನರ ತಳ್ಳಾಟ, ನೂಕಾಟ. ಮತ್ತೆ ಮತ್ತೆ, ಮತ್ತೆ ಮತ್ತೆ. ಪ್ರತಿ ದಿನವೂ ಎಂಟರಿಂದ ಹತ್ತು ತಾಸು ನಾನು ಸುಮ್ಮನೆ ಆಲಿಸಲಾರಂಭಿಸಿದೆ ಮತ್ತು ಮಂಡಿಯನ್ನು ನಿರ್ಲಕ್ಷಿಸಲು ಶ್ರಮಿಸಿದೆ.

ಒಂದು ದಿನ, ನಾನು ಎಂದೂ ಅನುಭವಿಸದ ಮೌನವನ್ನು ಅನುಭವಿಸಿದೆ. ನನ್ನ ಕೈಹಿಡಿದು ಸಾಗುತ್ತಾ ಮಾತನಾಡುತ್ತಿದ್ದ ವ್ಯಕ್ತಿಯ ಧ್ವನಿಯಲ್ಲದೆ ಬೇರೇನೂ ಕೇಳುತ್ತಿರಲಿಲ್ಲ. ಸಣ್ಣವನಿದ್ದಾಗಿನಿಂದ ನನ್ನೊಳಗೆ ಇದ್ದು ಮಾತನಾಡುತ್ತಿದ್ದ ಆ ಒಳಧ್ವನಿ ಇಲ್ಲವಾಗಿತ್ತು. ಏನೋ ಒಂದು ಸತ್ತು ಹೋದಂತೆ ಅನಿಸಿತು.

ಆತ ರೈತ, ತನ್ನ ಬೇಸಾಯದ ಕುರಿತು ಮಾತನಾಡಿದ. ಕೊಳೆತು ಹೋದ ಹತ್ತಿಯ ರಾಶಿ ತೋರಿಸಿ ಆತ ಅಳುತ್ತಿದ್ದ. ವರ್ಷಗಳಿಂದ ಆತ ಪಟ್ಟಿದ್ದ ಸಂಕಷ್ಟ ಆತನ ಕೈಗಳಲ್ಲಿ ಕಾಣಿಸುತ್ತಿತ್ತು. ತನ್ನ ಮಕ್ಕಳ ಕುರಿತು ಆತನಲ್ಲಿದ್ದ ಭಯ ಆ ಹತ್ತಿ ರಾಶಿಯಲ್ಲಿ ಕಾಣುತ್ತಿತ್ತು. ಮುದುಡಿರುವ ಆತನ ಮುಖದಲ್ಲಿ ಆತ ಹಸಿವಿನಲ್ಲಿ ಕಳೆದ ರಾತ್ರಿಗಳನ್ನು ಕಾಣಬಹುದಿತ್ತು. ತನ್ನ ತಂದೆ ಸಾಯುವುದನ್ನು ಅಸಹಾಯಕವಾಗಿ ನೋಡಬೇಕಾಗಿ ಬಂದದ್ದರ ಕುರಿತು ಆತ ಹೇಳಿದ. ಹೆಂಡತಿಗೆ ಕೊಡಲು ಹಣವೇ ಇಲ್ಲದೆ ಅವಮಾನಿತನಾದದ್ದನ್ನೂ ಹೇಳಿದ. ನಾನು ಹೇಳುವಂತಹುದು ಏನೂ ಇರಲಿಲ್ಲ. ನಡೆಯುವುದನ್ನು ನಿಲ್ಲಿಸಿ ಆತನನ್ನು ತಬ್ಬಿಕೊಂಡೆ.

ಇಂತಹುದು ಮತ್ತೆ ಮತ್ತೆ ನಡೆಯಿತು. ಮಕ್ಕಳೊಂದಿಗೆ, ತಾಯಂದಿರೊಂದಿಗೆ, ವಿದ್ಯಾರ್ಥಿಗಳೊಂದಿಗೆ ಆಯಿತು. ವರ್ತಕರು, ಬಡಗಿಗಳು ಮತ್ತು ಕಾರ್ಮಿಕರೊಂದಿಗೆ ಆಯಿತು. ಸೈನಿಕರೊಂದಿಗೂ ಆಯಿತು. ಈಗ, ನನಗೆ ನನ್ನ ಧ್ವನಿ ಅಥವಾ ಗುಂಪಿನ ಧ್ವನಿ ಕೇಳಿಸುತ್ತಲೇ ಇಲ್ಲ. ನನ್ನ ಕಿವಿಯಲ್ಲಿ ಮಾತನಾಡುತ್ತಿರುವ ವ್ಯಕ್ತಿಯಿಂದ ನನ್ನ ಗಮನ ಬೇರೆಲ್ಲೂ ಹೋಗುತ್ತಿರಲಿಲ್ಲ. ನನ್ನೊಳಗಿದ್ದ ವಟಗುಟ್ಟುವಿಕೆ ಮತ್ತು ನ್ಯಾಯತೀರ್ಮಾನದ ಸ್ವಭಾವ ಹೋಗಿಯೇ ಬಿಟ್ಟಿದೆ. ಅನುತ್ತೀರ್ಣನಾಗುವುದರ ಭೀತಿಯ ಕುರಿತು ವಿದ್ಯಾರ್ಥಿಯೊಬ್ಬ ಹೇಳಿಕೊಂಡಾಗ ನಾನು ಅದನ್ನು ಆಲಿಸಿದೆ. ಒಂದು ಬೆಳಿಗ್ಗೆ, ಜೀವನೋಪಾಯಕ್ಕಾಗಿ ಭಿಕ್ಷೆ ಬೇಡಲು ಬೀದಿಗೆ ತಳ್ಳಲ್ಪಟ್ಟ ಸಣ್ಣ ಮಕ್ಕಳ ಗುಂಪೊಂದು ನನ್ನ ಮುಂದೆ ನಡುಗುತ್ತಿರುವುದನ್ನು ಕಂಡ ಬಳಿಕ, ಟಿ–ಶರ್ಟ್ ಹಾಕಿಕೊಂಡು ಎಲ್ಲಿಯವರೆಗೆ ನಡೆಯಲು ಸಾಧ್ಯವೋ ಅಲ್ಲಿಯವರೆಗೆ ನಡೆಯಬೇಕು ಎಂದು ನಿರ್ಧರಿಸಿದೆ.

ನನ್ನ ಪ್ರೀತಿಯು ಯಾವುದಾಗಿತ್ತು ಎಂಬುದು ನನ್ನ ಮುಂದೆ ದಿಢೀರ್ ತೆರೆದುಕೊಂಡಿತು. ನನ್ನ ಪ್ರೀತಿಯ ಭಾರತ ಮಾತೆಯು ನೆಲವಷ್ಟೇ ಅಲ್ಲ. ಅದು ಒಂದಷ್ಟು ಚಿಂತನೆಗಳೂ ಅಲ್ಲ. ಅದು ನಿರ್ದಿಷ್ಟ ಸಂಸ್ಕೃತಿ, ಇತಿಹಾಸ ಅಥವಾ ಧರ್ಮವೂ ಅಲ್ಲ. ಅದು ಜನರಿಗೆ ನೀಡಲಾಗಿರುವ ಬೇರೆ ಬೇರೆ ಜಾತಿಗಳೂ ಅಲ್ಲ. ಎಷ್ಟೇ ದುರ್ಬಲನಿರಲಿ ಅಥವಾ ಎಷ್ಟೇ ಬಲಶಾಲಿ ಆಗಿರಲಿ, ಅದು ಪ್ರತೀ ಭಾರತೀಯನ ಧ್ವನಿ. ಭಾರತವೆಂದರೆ, ಈ ಎಲ್ಲ ಧ್ವನಿಗಳಲ್ಲಿ ಅಡಗಿರುವ ಸಂತೋಷ, ಭೀತಿ, ನೋವು.

ಭಾರತದ ಧ್ವನಿಯನ್ನು ಆಲಿಸಿದ ಬಳಿಕ ನನ್ನ ಧ್ವನಿ, ನನ್ನ ಬಯಕೆಗಳು, ನನ್ನ ಮಹತ್ವಾಕಾಂಕ್ಷೆಗಳು ಎಲ್ಲವೂ ಧ್ವನಿ ಕಳೆದುಕೊಂಡವು. ಭಾರತವು ತನ್ನವರೊಂದಿಗೆ ಮಾತನಾಡುತ್ತದೆ, ಆದರೆ ಆ ವ್ಯಕ್ತಿಯು ವಿನೀತನಾಗಿದ್ದಾಗ ಮತ್ತು ಪೂರ್ಣವಾಗಿ ಮೌನಿಯಾಗಿದ್ದಾಗ ಮಾತ್ರ.

ಇದು ಎಷ್ಟೊಂದು ಸರಳವಿದೆ ನೋಡಿ. ಸಮುದ್ರದಲ್ಲಿಯಷ್ಟೇ ಕಾಣಸಬಹುದಾದುದನ್ನು ನಾನು ಈವರೆಗೆ ನದಿಯಲ್ಲಿ ಹುಡುಕಾಡುತ್ತಿದ್ದೆ.

ಲೇಖಕ: ವಯನಾಡ್‌ನ ಸಂಸದ



ಚಂದ್ರಯಾನ–3ರ ಮರಳು ಶಿಲ್ಪವನ್ನು ರೂಪಿಸುವ ಮೂಲಕ 77ನೇ ಸ್ವಾತಂತ್ರ್ಯ ದಿನಾಚರಣೆಗೆ ಪುರಿಯ ಸುದರ್ಶನ ಮರಳು ಕಲಾ ಶಾಲೆಯ ವಿದ್ಯಾರ್ಥಿಗಳು ಸೋಮವಾರ ಶುಭಕೋರಿದರು




'ಪ್ರತಿ ಮನೆಯಲ್ಲೂ ತಿರಂಗಾ' ಅಭಿಯಾನದ ಭಾಗವಾಗಿ 77ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾ ದಿನವಾದ ಸೋಮವಾರ ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿರುವ 23ನೇ ಇಂಡೊ ಟಿಬೆಟಿಯನ್ ಗಡಿ ಪೊಲೀಸರು ತಿರಂಗಾ ಹಿಡಿದು ಪೋಸು ನೀಡಿದರು

–ಪಿಟಿಐ ಚಿತ್ರಗಳು

ಸಿನಿ ಬಿಟ್ಸ್

ಸೆಪ್ಟೆಂಬರ್‌ನಲ್ಲಿ ಮತ್ತೆ ಬರ್ತಾಳೆ 'ಸಿರಿ'



ಆಶಿಕಾ ರಂಗನಾಥ್

'ಅಮಿಗೋಸ್' ಸಿನಿಮಾ ಮೂಲಕ ನಟ ನಂದಮೂರಿ ಕಲ್ಯಾಣ್ ರಾಮ್ ಜೊತೆ ಟಾಲಿವುಡ್‌ನಲ್ಲಿ ಮಿಂಚಿದ್ದ ಸ್ಯಾಂಡಲ್‌ವುಡ್‌ನ 'ಪಟಾಕಿ ಪೋರಿ' ಆಶಿಕಾ ರಂಗನಾಥ್, ಹೊಸ ತೆಲುಗು ಪ್ರಾಜೆಕ್ಟ್‌ಗಳತ್ತ ಚಿತ್ತ ಹರಿಸಿದ್ದಾರೆ.

'ಮುಂದಿನ ತೆಲುಗು ಸಿನಿಮಾ ಯಾವಾಗ?' ಎನ್ನುವ ಅಭಿಮಾನಿಗಳ ಪ್ರಶ್ನೆಗೆ 'ಕೆಲವು ಸ್ಕ್ರಿಪ್ಟ್‌ಗಳನ್ನು ಕೇಳುತ್ತಿದ್ದೇನೆ. ಆದಷ್ಟು ಬೇಗ ಪ್ರಾಜೆಕ್ಟ್‌ಗಳಿಗೆ ಸಹಿ ಮಾಡುತ್ತೇನೆ' ಎಂದಿದ್ದಾರೆ ಆಶಿಕಾ. ಸಿಂಪಲ್ ಸುನಿ ನಿರ್ದೇಶನದ 'ಅವತಾರ ಪುರುಷ' ಸಿನಿಮಾದ ಎರಡನೇ ಭಾಗ ಇದೇ ಸೆಪ್ಟೆಂಬರ್‌ನಲ್ಲಿ ರಿಲೀಸ್ ಆಗುವ ಸುಳಿವು ನೀಡಿದ್ದಾರೆ ಆಶಿಕಾ. ಈ ಸಿನಿಮಾದಲ್ಲಿ 'ಸಿರಿ' ಎಂಬ ಪಾತ್ರದಲ್ಲಿ ಆಶಿಕಾ, ನಟ ಶರಣ್‌ಗೆ ಜೋಡಿಯಾಗಿದ್ದರು. ಇತ್ತೀಚೆಗೆ ತಮ್ಮ ಜನ್ಮದಿನದ ಸಂದರ್ಭದಲ್ಲಿ ಆಶಿಕಾ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದು, 'ಸುನಿ ನಿರ್ದೇಶನದ 'ಗತವೈಭವ' ಸಿನಿಮಾ ಮೇಲೆ ಸಾಕಷ್ಟು ನಿರೀಕ್ಷೆಯನ್ನು ನಾನು ಹೊಂದಿದ್ದೇನೆ. ಎಲ್ಲವೂ ಅಂದುಕೊಂಡಂತೆ ಆದಲ್ಲಿ, 'ಅವತಾರ ಪುರುಷ–2' ಸೆಪ್ಟೆಂಬರ್‌ನಲ್ಲಿ ರಿಲೀಸ್ ಆಗಲಿದೆ. ಪಿಆರ್‌ಕೆ ಪ್ರೊಡಕ್ಷನ್ಸ್‌ನ 'O2' ಸಿನಿಮಾದ ಫಸ್ಟ್ ಲುಕ್ ಕೂಡಾ ಶೀಘ್ರದಲ್ಲೇ ರಿಲೀಸ್ ಆಗಲಿದೆ' ಎಂದಿದ್ದಾರೆ.

ತಮಿಳಿನಲ್ಲಿ 'ಪಟ್ಟತ್ತು ಅರಸನ್' ಸಿನಿಮಾ ಬಳಿಕ, ನಟ ಸಿದ್ಧಾರ್ಥ್ ಅವರ ಜೊತೆಗೂ ಹೊಸ ಸಿನಿಮಾವೊಂದರಲ್ಲಿ ಆಶಿಕಾ ನಟಿಸಿದ್ದು, ಇದರ ಶೀರ್ಷಿಕೆ ಇನ್ನಷ್ಟೇ ಅನಾವರಣಗೊಳ್ಳಬೇಕಿದೆ. ಈ ಸಿನಿಮಾ ಇದೇ ವರ್ಷಾಂತ್ಯಕ್ಕೆ ತೆರೆಗೆ ಬರುವ ಸಾಧ್ಯತೆ ಇದೆ ಎಂದಿದ್ದಾರೆ ಆಶಿಕಾ.

'ಬಾಯ್ಸ್ ಹಾಸ್ಟೆಲ್' ಸೇರಿದ ಹುಡುಗರು!



ನಿತಿನ್ ಕೃಷ್ಣಮೂರ್ತಿ ನಿರ್ದೇಶನದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾ ರಾಜ್ಯದ ಹಲವು ಚಿತ್ರಮಂದಿರಗಳಲ್ಲಿ 25 ದಿನಗಳನ್ನು ಪೂರೈಸಿದೆ. ಈ ಸಂದರ್ಭದಲ್ಲೇ ಸಿನಿಮಾ ಹೊರ ರಾಜ್ಯಕ್ಕೆ ಕಾಲಿಡಲು ಸಜ್ಜಾಗಿದೆ.

ಕನ್ನಡದಲ್ಲಿ ಗೆದ್ದ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾ ತೆಲುಗಿಗೆ 'ಬಾಯ್ಸ್ ಹಾಸ್ಟೆಲ್' ಎಂಬ ಹೆಸರಿನಲ್ಲಿ ಡಬ್ ಆಗುತ್ತಿದ್ದು, ಸಿನಿಮಾ ಇದೇ 26ಕ್ಕೆ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ರಿಲೀಸ್ ಆಗಲಿದೆ. ಚಿತ್ರ ನಿರ್ಮಾಣ ಸಂಸ್ಥೆಗಳಾದ ಅನ್ನಪೂರ್ಣ ಸ್ಟುಡಿಯೋಸ್ ಹಾಗೂ ಚಾಯ್‌ಬಿಸ್ಕೆಟ್ ಫಿಲ್ಮ್ಸ್ ಸಹಯೋಗದಲ್ಲಿ ಸುಮಾರು 150 ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆಕಾಣಲಿದೆ. 'ಸದ್ಯ ಡಬ್ಬಿಂಗ್ ಕೆಲಸಗಳು ನಡೆಯುತ್ತಿವೆ. ಕನ್ನಡದಲ್ಲಿ ನಟಿಸಿರುವ ನಾಲ್ಕೈದು ಕಲಾವಿದರಷ್ಟೇ ತಮ್ಮ ಪಾತ್ರಗಳಿಗೆ ತಾವೇ ತೆಲುಗಿನಲ್ಲೂ ಡಬ್ ಮಾಡಿದ್ದಾರೆ. ಒಂದೆರಡು ದಿನಗಳಲ್ಲಿ ತೆಲುಗಿನಲ್ಲಿ ಸಿದ್ಧವಾದ ಚಿತ್ರದ ಟೈಟಲ್ ಟ್ರ್ಯಾಕ್ ಬಿಡುಗಡೆಯಾಗಲಿದೆ' ಎಂದಿದ್ದಾರೆ ನಿರ್ಮಾಪಕ ವರುಣ್ ಗೌಡ..

ಕನ್ನಡದಲ್ಲಿ ಈ ಸಿನಿಮಾವನ್ನು ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ತಮ್ಮ ಪರಂವಃ ಪಿಕ್ಚರ್ಸ್ ಬ್ಯಾನರ್‌ನಡಿ ಪ್ರಸ್ತುತಿ ಪಡಿಸಿದ್ದರು. ತಂಡಕ್ಕೆ ರಿಷಬ್ ಶೆಟ್ಟಿ, ಪವನ್ ಕುಮಾರ್, ಶೈನ್ ಶೆಟ್ಟಿ, ದಿಗಂತ್ ಹಾಗೂ ಇನ್ನಿತರರು ಸಾಥ್ ಕೊಟ್ಟಿದ್ದರು. ಹೀಗಾಗಿ ಪ್ಯಾನ್ ಇಂಡಿಯಾ ಮಟ್ಟದಲ್ಲೂ ಚಿತ್ರ ಸದ್ದು ಮಾಡಿದೆ. ಗುಲ್ಮೋಹರ್ ಫಿಲ್ಮ್ ಮತ್ತು ವರುಣ್ ಸ್ಟುಡಿಯೋಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕೆ ಅವಕಾಶ ಮಾಡಿಕೊಡುವ ಶಕ್ತಿ ಯೋಜನೆಗೆ ಹೈಕೋರ್ಟ್ ತಡೆ ನೀಡಿದೆ. ಈ ಕಾರಣದಿಂದ ಆಗಸ್ಟ್ 15ರಿಂದ ಶಕ್ತಿ ಯೋಜನೆ ಸ್ಥಗಿತವಾಗಲಿದೆ' ಎಂಬ ವಿವರ ಇರುವ ಸಂದೇಶಗಳು ವಾಟ್ಸ್‌ಆ್ಯಪ್ ಮತ್ತು ಫೇಸ್‌ಬುಕ್‌ನಲ್ಲಿ ಹರಿದಾಡುತ್ತಿವೆ. ಈ ಸಂದೇಶದ ಜತೆಗೆ ಸುದ್ದಿ ವಾಹಿನಿಯೊಂದರ ಸ್ಕ್ರೀನ್‌ಶಾಟ್ ಹಂಚಿಕೊಳ್ಳಲಾಗುತ್ತಿದೆ. ಸ್ಕ್ರೀನ್‌ಶಾಟ್‌ನಲ್ಲಿ 'ಆಗಸ್ಟ್ 15ರಿಂದ ಫ್ರೀ ಬಸ್ ಪ್ರಯಾಣ ರದ್ದು? ಹೈಕೋರ್ಟ್ ತಡೆ' ಎಂಬ ಬರಹವಿದೆ. ಆದರೆ ಇದು ಸುಳ್ಳು ಮಾಹಿತಿ.



ಶಕ್ತಿ ಯೋಜನೆಗೆ ಹೈಕೋರ್ಟ್ ತಡೆ ನೀಡಿಲ್ಲ ಮತ್ತು ಈ ಯೋಜನೆ ಸ್ಥಗಿತಗೊಳಿಸಲು ರಾಜ್ಯ ಸರ್ಕಾರವೂ ನಿರ್ಧರಿಸಿಲ್ಲ. ಈ ಬಗ್ಗೆ ಯಾವುದೇ ಆದೇಶ ಪ್ರಕಟವಾಗಿಲ್ಲ. 'ಶಕ್ತಿ ಯೋಜನೆ ಆ.15ಕ್ಕೆ ಮುಕ್ತಾಯಗೊಳ್ಳಲಿದೆ ಎಂದು ಹರಿದಾಡುತ್ತಿರುವ ಸುದ್ದಿ ಸುಳ್ಳು. ಇದನ್ನು ಜನರು ನಂಬಬಾರದು. ಈ ಯೋಜನೆ ಸ್ವಾತಂತ್ರ್ಯ ದಿನಾಚರಣೆಯ ಬಳಿಕವೂ ಮುಂದುವರಿಯಲಿದೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಆಗಸ್ಟ್ 15, 2023

ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಚತುರ್ದಶಿ ಗಂ. 12-43 ನಕ್ಷತ್ರ: ಪುಷ್ಯ. ಗಂ. 13-59 ಯೋಗ: ವ್ಯತೀಪಾತ ಗಂ. 17-32 ಕರಣ: ಶಕುನಿ ಗಂ. 12-43, ಕರ್ಕಾಟಕ ಮಾಸದ 29 ನೇ ದಿನ, ಮಳೆನಕ್ಷತ್ರ: ಆಶ್ಲೇಷ 4.
ರಾಹುಕಾಲ : ಸಾಯಂಕಾಲ 03-00 - 04-30, ಸೂರ್ಯೋದಯ : 06-21 ಸೂರ್ಯಾಸ್ತ : 06-49, ಮುಸ್ಲಿಂ ದಿನಾಂಕ : 26 ಮೊಹರಮ್
ದಿನ ವಿಶೇಷ : ಸ್ವಾತಂತ್ರ್ಯ ದಿನಾಚರಣೆ, ಪಾರ್ಸಿ ಹೊಸ ವರ್ಷ ಹಿಂದಿನ ದಿನ
ಅದೃಷ್ಟ ಸಂಖ್ಯೆ : 12, 8

ಮೇಷ: ಸಹೋದರ ಸಹೋದರಿಯರ ಬಾಂಧವ್ಯ ಗಟ್ಟಿಯಾಗುವಂಥ ಘಟನೆ ನಡೆಯುವುದು. ಇಂದಿನ ಸಂಧಾನ ಅಥವಾ ಕರಾರು ಒಪ್ಪಂದ ಅನುಕೂಲಕರ ಎನಿಸಲಿದೆ. ಮನೆ ದೇವರಿಗೆ ಹರಕೆ ಸಲ್ಲಿಸುವುದು ನೆನಪಿರಲಿ.

ವೃಷಭ: ಗೃಹ ನಿರ್ಮಾಣದಂತಹ ಕೆಲಸಗಳಿಗಾಗಿ ಹೆಚ್ಚು ಸಮಯ ವಿನಿಯೋಗಿಸುವಿರಿ. ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಹೆಚ್ಚಿನ ಪ್ರಶಂಸೆ ದೊರೆತು ಬಡ್ತಿ ಸಿಗುವುದು. ಸಿನಿಮಾ ತಾರೆಗಳಿಗೆ ಪ್ರಸಿದ್ಧಿ ಸಿಗುವುದು.

ಮಿಥುನ: ಅಕ್ಕಪಕ್ಕದ ಮನೆಯವರ ಅಥವಾ ಸ್ನೇಹಿತರ ಹೊಗಳಿಕೆಯ ಮಾತುಗಳಿಗೆ ಕಿವಿಗೊಟ್ಟು ಮರುಳಾಗಬೇಡಿ. ಫ್ಯಾಷನ್ ಡಿಸೈನರ್‌ಗಳು ಈ ದಿನ ಅವಕಾಶಗಳನ್ನು ಹಾಗೂ ಉತ್ತಮ ಧನಲಾಭ ಪಡೆಯುವರು.

ಕರ್ಕಾಟಕ: ಮಕ್ಕಳ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆಯ ಮಾತು ಕೇಳಿ ಆನಂದವಾಗುತ್ತದೆ. ತಂದೆಯವರ ಮಾತಿನಿಂದ ಅತೃಪ್ತಿಯ ವಾತಾವರಣ ಮೂಡಿ ಬರಲಿದೆ. ಶ್ರೀಕ್ಷೇತ್ರಕ್ಕೆ ಹೋಗುವ ಯೋಜನೆ ಕಾರ್ಯರೂಪಕ್ಕೆತನ್ನಿ.

ಸಿಂಹ: ಚಿತ್ರಕಲೆಯಲ್ಲಿನ ಆಸಕ್ತಿಯಿಂದಾಗಿ ಹೆಚ್ಚಿನ ಕಲಿಕೆಗಾಗಿ ವಿಶೇಷ ತರಗತಿಗೆ ಕಳುಹಿಸಲು ತಂದೆಯವರಿಂದ ಒಪ್ಪಿಗೆ ದೊರೆಯುವುದು. ರಕ್ತದೊತ್ತಡ ನಿಯಂತ್ರಣಕ್ಕೆ ಬಂದು ಮನಸ್ಸಿಗೆ ಸಮಾಧಾನ ಆಗುವುದು.

ಕನ್ಯಾ: ಧನಾಗಮನಕ್ಕೆ ಹಲವು ದಾರಿಗಳು ಕಂಡರೂ ಸರಿಯಾದ ದಾರಿಯನ್ನು ಆರಿಸಿಕೊಳ್ಳುವುದು ನಿಮ್ಮ ವಿವೇಚನೆಗೆ ಬಿಟ್ಟಂಥ ವಿಚಾರ. ದೈವಾನುಗ್ರಹದಿಂದ ಮಾಡುವ ಕೆಲಸದಲ್ಲಿ ಒಳ್ಳೆಯ ಲಾಭ ಪಡೆಯುವಿರಿ.

ತುಲಾ: ವಿದೇಶ ಶಿಕ್ಷಣ ಪಡೆದುಕೊಳ್ಳುವ ಪ್ರಯತ್ನವನ್ನು ನಡೆಸಿದಲ್ಲಿ ಅವಕಾಶ ಪ್ರಾಪ್ತಿಯಾಗುವುದು. ಒತ್ತಡ ತರುವ ಕೆಲಸಗಳಿಂದ ದೂರ ಉಳಿಯುವ ಯೋಚನೆ ಸರಿಯಾಗಿರುವುದು. ಮನೆಯಲ್ಲಿ ಜವಾಬ್ದಾರಿ ಹೆಚ್ಚಲಿದೆ.

ವೃಶ್ಚಿಕ: ದೇವತಾನುಗ್ರದಿಂದ ಸಕಲ ಅಭೀಷ್ಟ ಸಿದ್ಧಿಯಾಗಿ ಸಂತೃಪ್ತಿಯಾಗುವುದು. ಕಷ್ಟದ ದಿನಗಳಲ್ಲಿ ಸಹಕರಿಸಿದವರೊಂದಿಗೆ ನಮ್ರತೆಯಿಂದ, ವಿನಯದಿಂದ ಇರುವುದನ್ನು ಮರೆಯಬೇಡಿ. ವಿಶ್ರಾಂತಿ ಬೇಕೆನಿಸಲಿದೆ.

ಧನು: ಬಂಧುಗಳ ಮನೆಯ ಶುಭಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಓಡಾಟವಿರುವುದು. ಮಾಡುವ ಕೆಲಸದ ಸರಿ ತಪ್ಪುಗಳ ಬಗ್ಗೆ ತಿಳಿಯುವ ಪ್ರಯತ್ನ ಮಾಡಿ. ಔಷಧ ವ್ಯಾಪಾರದಿಂದ ಲಾಭ ಹೊಂದಬಹುದು.

ಮಕರ: ಇಂದು ಕೆಲವು ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ. ವರ್ಚಸ್ಸಿನ ಪ್ರಭಾವದಿಂದ ವಿನೂತನ ಅವಕಾಶಗಳು ದೊರೆಯುವುದು. ಒಂಟಿತನದ ಚಿಂತೆಯು ಆಗಾಗ ಕಾಡಲಿದೆ.

ಕುಂಭ: ಅನುಯಾಯಿಗಳಿಗೆ ನೀವಾಡುವ ಆಶ್ವಾಸನೀಯ ವರ್ತನೆಯಿಂದ ಬಹಳ ಸಂತಸ ಉಂಟಾಗುವುದು. ದಂತವೈದ್ಯ ವೃತ್ತಿಯವರಿಗೆ ಹಾಗೂ ದಂತ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಅನುಕೂಲವಾದ ದಿನ.

ಮೀನ: ಗಡಿಬಿಡಿಯ ಸ್ವಭಾವದಿಂದಾಗಿ ಕಂಪನಿಯಲ್ಲಿ ಉಂಟಾದ ತಪ್ಪುಗಳಿಗೆ ನೇರ ಹೊಣೆಗಾರಿಕೆ ನಿಮ್ಮದ್ದಾಗಿರುತ್ತದೆ. ಯಾವುದೇ ಕೆಲಸವನ್ನು ಮಾಡುವುದಾದರೂ ಎರಡು ಬಾರಿ ಯೋಚಿಸಿ ಮಾಡುವುದು ಉತ್ತಮ.

ಸಾಕ್ರೆಟೀಸ್ ಮತ್ತು ಗೆಲುವಿನ ಸೂತ್ರ

ನುಡಿ ಬೆಳಗು





ಪಿ. ಚಂದ್ರಿಕಾ

ಜಗತ್ತಿಗೆ ತತ್ವಜ್ಞಾನದ ಬೆಳಕನ್ನು ಚೆಲ್ಲಿದ ಸಾಕ್ರೆಟೀಸ್‌ನನ್ನು ನೋಡಲಿಕ್ಕೆ ಒಬ್ಬ ಬಂದ. ಅವನ ಕೋರಿಕೆ ವಿಚಿತ್ರವಾಗಿತ್ತು. 'ಎಲ್ಲವನ್ನೂ ಬಲ್ಲ ನೀನು ನನಗೆ ಗೆಲ್ಲುವುದನ್ನು ಹೇಳಿಕೊಡು. ಯಶಸ್ಸು ನನ್ನ ಬುಟ್ಟಿಯಲ್ಲಿ ಮಲಗಿರಬೇಕು. ನಾನು ಬೇಕೆಂದಾಗ ಅದು ನನ್ನ ಬಗಲಲ್ಲಿ ನಿಲ್ಲಬೇಕು' ಎಂದು ಕೇಳಿದ. ಸಾಕ್ರೆಟೀಸ್ ನಕ್ಕು, 'ಹೌದಾ ಇಷ್ಟೇನಾ? ಇದನ್ನು ನಾನು ನಿನಗೆ ಹೇಳಿಕೊಡಬಲ್ಲೆ. ನಾಳೆ ನದಿ ತೀರದಲ್ಲಿ ಸಿಗು' ಎಂದ.

ಆ ವ್ಯಕ್ತಿ ಹೊರಟ ನಂತರ ಸಾಕ್ರೆಟೀಸ್‌ನ ಶಿಷ್ಯ, 'ಹೇಳು ಗುರುವೇ ಗೆಲುವಿನ ರಹಸ್ಯವನ್ನು ಹೇಗೆ ಬೋಧಿಸುತ್ತೀಯಾ? ಇಷ್ಟು ವರ್ಷಗಳು ನಾನು ನಿನ್ನ ಜೊತೆಯಲ್ಲೇ ಇದ್ದೇನೆ. ನನಗೆ ಹೇಳಿಕೊಡದೇ ಇರುವುದನ್ನು ಅವನಿಗೆ ಹೇಳಿಕೊಡುವುದರಲ್ಲಿ ನ್ಯಾಯವಿದೆಯೇ' ಎಂದು ಕೇಳಿದ.

ಸಾಕ್ರೆಟೀಸ್ ನಗುತ್ತಾ, 'ಹೇಳಿಕೊಡುವ ಸಮಯ ಈಗ ಬಂದಿದೆ. ನೋಡುತ್ತಿರು ನಾನು ಅವನಿಗೆ ಹೇಳುವೆ. ಸಾಧ್ಯವಾದರೆ ನೀನೂ ತಿಳಿದುಕೋ' ಎಂದ.

ರಾತ್ರಿಯಿಡೀ ಗೆಲುವಿನ ಕನಸನ್ನು ಕಾಣುತ್ತಾ ಇದ್ದ ವ್ಯಕ್ತಿಯು, ಬೆಳಕು ಹಾಯುವುದಕ್ಕೂ ಮುಂಚೆಯೇ ಸಾಕ್ರೆಟೀಸ್‌ಗಾಗಿ ಕಾಯುತ್ತಾ ನದಿ ತಟದಲ್ಲಿ ಕುಳಿತ. ಸಾಕ್ರೆಟೀಸ್ ಬಂದಾಗ ಉದ್ವೇಗದಿಂದ, 'ನಾನು ಬಂದು ಬಹಳ ಹೊತ್ತಾಯಿತು ನೀನೇಕೆ ತಡಮಾಡಿದೆ' ಎಂದೆಲ್ಲಾ ಕೂಗಾಡಿದ. ಸಾಕ್ರೆಟೀಸ್ ಅವನನ್ನು ನೋಡಿ ನಗುತ್ತಾ, ತನ್ನ ಪಾಡಿಗೆ ತಾನು ಸ್ನಾನಕ್ಕೆ ನದಿಗೆ ಇಳಿದ. ಸಾಕ್ರೆಟೀಸ್ ತನಗೆ ಬೋಧನೆ ಮಾಡದೆ ತನ್ನ ಕೆಲಸದಲ್ಲಿ ತೊಡಗಿದ್ದರಿಂದ ಕುಪಿತಗೊಂಡ ಆ ವ್ಯಕ್ತಿ, 'ಆಡಿದ ಮಾತಿನ ಮೇಲೆ ನಿನಗೆ ಗಮನವೇ ಇಲ್ಲ' ಎಂದ. ಆಗ ನೀರಲ್ಲಿ ನಿಂತು ಸಾಕ್ರೆಟೀಸ್ ಬಾ ಎಂದು ಆತನನ್ನು ಕರೆದ. ಹತ್ತಿರ ಬಂದ ಅವನ ಕುತ್ತಿಗೆ ಹಿಡಿದು ನೀರಲ್ಲಿ ಮುಳುಗಿಸಿದ. ಅವನು ನೀರಲ್ಲಿ ಉಸಿರಿಗಾಗಿ ಹೋರಾಟ ಮಾಡಿ ಮೇಲೆದ್ದು, 'ನೀನೂ ಬೇಡ. ನಿನ್ನಾ ಗೆಲುವಿನ ಸೂತ್ರವೂ ಬೇಡ' ಎಂದು ಬೈದು ಅಲ್ಲಿಂದ ಹೊರಟ.

ಆಗ ಸಾಕ್ರೆಟೀಸ್ ನಗುತ್ತಾ ತನ್ನ ಶಿಷ್ಯನಿಗೆ, 'ಅವನಿಗೆ ನಾನು ಪಾಠ ಹೇಳಿಕೊಟ್ಟಿದ್ದು ಅರ್ಥ ಆಗಲಿಲ್ಲ' ಎನ್ನುತ್ತಾನೆ. ಶಿಷ್ಯನಿಗೆ ಅಚ್ಚರಿ. 'ಅವನಿಗೆ ನೀವು ಪಾಠ ಹೇಳಿದಿರಾ' ಎಂದು ಅಚ್ಚರಿಯಲ್ಲಿ ಕೇಳುತ್ತಾನೆ. 'ಇಷ್ಟು ವರ್ಷ ನನ್ನ ಜೊತೆಯಲ್ಲಿದ್ದೀನಿ ಎಂದೆಯಲ್ಲ ನಿನಗೂ ಅರ್ಥವಾಗಲಿಲ್ಲವೇ' ಎಂದ ಸಾಕ್ರೆಟೀಸ್, 'ಅವನು ನೀರಿನಲ್ಲಿ ಮುಳುಗಿದಾಗ ಜೀವ ಉಳಿಸಿಕೊಳ್ಳಲಿಕ್ಕೆ ಹೋರಾಟ ಮಾಡಿದನಲ್ಲಾ, ಹಾಗೆ ಗೆಲ್ಲಬೇಕು ಎನ್ನುವುದೂ ಜೀವನ್ಮರಣದ ಪ್ರಶ್ನೆ ಆದಾಗ ಮಾತ್ರ ಅದು ನಮಗೆ ದಕ್ಕುತ್ತದೆ' ಎಂದ.

ಸಾಕ್ರೆಟೀಸ್ ಯಾಕೆ ದೊಡ್ಡ ತತ್ವಜ್ಞಾನಿ ಎನ್ನುವುದು ಶಿಷ್ಯನಿಗೆ ಅರ್ಥವಾಗಿತ್ತು.

ಲೇಖಕಿ: ಕವಯಿತ್ರಿ

ಪದಬಂಧ 5411

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಈತ ಸುತ್ತಾಡುವ ಸ್ವಭಾವದವನು (4)
3. ಹೀಗೆ ವಾಸನೆ ನೋಡು (4)
5. ಶ್ರೇಷ್ಠವಾದದು ಇಲ್ಲಿದೆ (2)
7. ಈತ ತಿರುಪೆ ಬೇಡುವವನು (3)
8. ಹಂತಕನೇರಿದ ಮೆಟ್ಟಿಲು (2)
9. ಸಾತ್ವಿಕನು ತೋರುತ್ತಿರುವ ತಿರುಳು (2)
10. ಸುರನ ಬಳಿಯಿರುವ ರಾಕ್ಷಸ (3)
12. ಕರ್ತಾರನ ಕೈ (2)
14. ಮೃತ್ಯುದೇವತೆಯ ಮಗ (4)
15. ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

ಮೇಲಿಂದ ಕೆಳಕ್ಕೆ
1. ಎಂಟು ಸಾಲಿನ ಪದ್ಯ (4)
2. ಕನ್ನಡಿಗನಿಗೆ ಸಿಕ್ಕಿರುವ ರಿಬೇಟ್! (4)
3. ಪರಲೋಕಕ್ಕೆ ಸಂಬಂಧಿಸಿದ್ದು (4)
4. ಚನ್ನಾಗಿ ಕಾಪಾಡಿದುದು (4)
6. ತನ್ನದೇ ಆದ ವಿಶಿಷ್ಟ ಗುಣ (3)
8. ಆತಂಕ ಹುಟ್ಟಿಸಿರುವ ಕೊಲೆಗಾರ (3)
9. ವಿದಾಯ ಹೇಳಲು ಸೇರಿದ ಗುಂಪು! (4)
10. ಉಚಿತವಲ್ಲದ್ದು ಇದು (4)
11. ರಾತ್ರಿಯ ಒಡೆಯನಿವನು (4)
13. ಬೆಲೆಯುಳ್ಳ ಮಣಿಗಳನ್ನೊಳಗೊಡಿರುವ ಸಮುದ್ರ (4)

1			2	■	3			4
	■	■		■		■	■	
	■	■		■		■	■	
5	6	■	7			■	8	
■		■	■	■	■	■		■
9		■	10		11	■	12	13
	■	■		■		■	■	
	■	■		■		■	■	
14				■	15			

5410ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿರಹ 3.ತಕಲೀಪು
5.ರಸನ 7.ಚದುರಂಗ
9.ಸದಾಚಾರ 12.ಎರಕ
14.ಪ್ರತೀಹಾರ 15.ರುಮಾಲು

ಮೇಲಿಂದ ಕೆಳಕ್ಕೆ:
1.ವಿಧುರ 2.ಹವನ
3.ತರದೂದು 4.ಪುಲ್ಲಿಂಗ
6.ಸಮಂಜಸ 7.ಚಮ್ಮಾರ
8.ಗತ್ಯಂತರ 10.ಚಾಡಿಕೋರ
11.ತಿಗಪ್ರ
12.ಎಡರು 13.ಕಡಲು

ಸುಡೊಕು 5797

7		4		5				3
			1		9	6		5
6		5		3				
2					4	1		9
9	7	1		8			4	
4			9		2	3		7
	4		3		7		2	
						7		
1	3			2			6	

ಆಡುವುದು ಹೇಗೆ?


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5796 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಪ್ರಜಾವಾಣಿ ಮಂಗಳವಾರ, 15 ಆಗಸ್ಟ್ 2023

ಕ್ಷೇಮ ಕುಶಲ



ಸಂಸಾರದಲ್ಲಿ ಸಮರಸ

ಲಾವಣ್ಯಗೌರಿ ವೆಂಕಟೇಶ್

ಸ್ವಸ್ಥ ಹಾಗೂ ಸುಖೀ ಕುಟುಂಬಗಳು ಮಾತ್ರವೇ ಒಳ್ಳೆಯ ಸಮಾಜವನ್ನು ನಿರ್ಮಿಸಲು ಸಾಧ್ಯ. ಇದಕ್ಕೆ ಕುಟುಂಬದ ಎಲ್ಲ ಸದಸ್ಯರ ನಡುವಿನ ಬಂಧ ಬಹಳ ಮುಖ್ಯವಾಗುತ್ತದೆ. ಬಾಂಧವ್ಯಗಳು ಹಿತಕರವಾಗಿದ್ದಷ್ಟೂ ಜೀವನ ಸುಖಕರವಾಗಿರುತ್ತದೆ. ಬಂಧ ಹಿತಕರವಾಗಿರಲು ಇದ್ದದ್ದನ್ನು ಇದ್ದಂತೆ ಅಂಗೀಕರಿಸುವ ಮನಸ್ಥಿತಿ ಎಲ್ಲರಿಗೂ ಇರುವುದು ಬಹಳ ಮುಖ್ಯ.

ಒಂದು ಮಗುವಿಗೆ ಹುಟ್ಟಿದಾಗಿನಿಂದ ಸಾಯುವವರೆಗೂ ಒಂದಲ್ಲಾ ಒಂದು ಬಂಧ ಬೆಸೆಯುತ್ತಲೇ ಹೋಗುತ್ತದೆ. ಹುಟ್ಟಿದ ಗಳಿಗೆಯಿಂದಲೇ ಶುರುವಾಗುವುದು ತಾಯಿ–ಮಗುವಿನ ವಾತ್ಸಲ್ಯದ ಬಂಧ, ತಂದೆಯ ಅನುರಾಗ; ಬೆಳೆಯುತ್ತಾ ಹೋದಂತೆ ಸೋದರ–ಸೋದರಿಯರ ಸಂಬಂಧ. ಸ್ನೇಹಿತರ ಅನುಬಂಧ, ಪತಿ-ಪತ್ನಿಯ ಬಾಂಧವ್ಯ. ನಂತರ ಮಕ್ಕಳ ಬಂಧ. ಹೀಗೆ ಜೀವನದುದ್ದಕ್ಕೂ ಸಂಬಂಧಗಳ ಅನಾವರಣವಾಗುತ್ತಲೇ ಹೋಗುತ್ತದೆ. ಸಂಬಂಧಗಳು ಬೆಳೆಯುವುದರ ಜೊತೆಗೆ ರಾಗ-ದ್ವೇಷಗಳೂ ಬೆಳೆಯುತ್ತಹೋಗುತ್ತವೆ.

ಅಣ್ಣ–ತಮ್ಮಂದಿರಲ್ಲಿ ವಿರಸ, ದಾಂಪತ್ಯದಲ್ಲಿ ಕಲಹ, ಅತ್ತಿಗೆ–ನಾದಿನಿಯರ ಕಿತ್ತಾಟ, ಅತ್ತೆ-ಸೊಸೆಯ ನಡುವೆ ತಿಕ್ಕಾಟ – ಇವುಗಳ ಮಧ್ಯೆ ಸಿಕ್ಕು ಹೈರಾಣಾಗುವ ಮಾವ ಹಾಗೂ ಗಂಡ. ಹೀಗೆ ಸಂಬಂಧಗಳಲ್ಲಿ ಕಿತ್ತಾಟ ಸಾಮಾನ್ಯವಾದರೂ, ಭಿನ್ನಾಭಿಪ್ರಾಯ ಮೂಡಲು ಕಾರಣಗಳು ಹಲವಾರು. ಸಂಸಾರದ ನೆಮ್ಮದಿ, ಶಾಂತಿಯನ್ನು ಕಾಪಾಡಲು ಸಂಧಾನ, ಹೊಂದಾಣಿಕೆ ಹಾಗೂ ಸಮಾಧಾನಬೇಕಾಗುತ್ತದೆ. ಇಲ್ಲಿ ಯಾರೂ ತ್ಯಾಗ ಮಾಡಬೇಕಾದ ಅವಶ್ಯಕತೆಯಿಲ್ಲ. ನಮ್ಮ ನಡೆ ನುಡಿಗಳಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡಲ್ಲಿ ಅದ್ಭುತವಾದ ಫಲಿತಾಂಶವನ್ನು ಕಾಣಬಹುದು.

ಬಹುತೇಕ ಸಂಸಾರಗಳಲ್ಲಿ ಸಂಬಂಧಗಳು ಹದಗೆಡುವುದು ‘ಕಮ್ಯುನಿಕೇಶನ್ ಗ್ಯಾಪ್’ನಿಂದ. ಮಾನವನಿಗೆ ಮತ್ತೊಬ್ಬರೊಡನಿರುವ ಸಂಪರ್ಕ ಸಾಧನವೆಂದರೆ ಮಾತು. ಹೀಗೆ ಮಾತನಾಡುವಾಗ ನಮ್ಮ ನಿರೀಕ್ಷಿತ ಮಟ್ಟದಲ್ಲಿ ಭಾವನೆಗಳು, ಅನಿಸಿಕೆಗಳು ಎದುರಿನ ವ್ಯಕ್ತಿಗೆ ತಿಳಿಯದೇ ಹೋಗುವುದನ್ನೇ ‘ಕಮ್ಯುನಿಕೇಶನ್ ಗ್ಯಾಪ್’ ಎಂದು ಕರೆಯುತ್ತಾರೆ.

ಸಂಸಾರಗಳಲ್ಲಿ ಅತ್ತೆ ಹಾಗೂ ಸೊಸೆಯ ವಿಷಯದಲ್ಲಿ ನಡೆಯುವುದು ಇದೇ. ಸೊಸೆಯಾದವಳು ಬೇರೆ ಮನೆಯಿಂದ ಬಂದಿರುತ್ತಾಳೆ. ಅವಳ ಮನೆಯಲ್ಲಿನ ಆಚಾರ, ವಿಚಾರ, ಸಂಪ್ರದಾಯಗಳು ಬೇರೆಯದೇ ರೀತಿಯಲ್ಲಿ ಇರುತ್ತದೆ. ಅದನ್ನು ಬಿಟ್ಟು ಹೊಸದಾದ ವಾತಾವರಣಕ್ಕೆ ಹೊಂದಿಕೊಳ್ಳಲು ಕೊಂಚ ಸಮಯ ಬೇಕಾಗುತ್ತದೆ. ಅದನ್ನು ಕುಟುಂಬದ ಸದಸ್ಯರೆಲ್ಲರೂ ಅರ್ಥ ಮಾಡಿಕೊಂಡು ಸಮಯಾವಕಾಶ ಮಾಡಿಕೊಟ್ಟಲ್ಲಿ ಆಕೆಗೂ ಹೊಂದಿಕೊಳ್ಳಲು ನೆರವಾಗುತ್ತದೆ.

ಚಪ್ಪಾಳೆಯನ್ನು ಒಂದು ಕೈಯಿಂದ ಹೊಡೆಯಲು ಸಾಧ್ಯವಿಲ್ಲವಲ್ಲ. ಅಂತೆಯೇ ಸೊಸೆಯಾದವಳೂ ಹೊಸ ಮನೆಯ ಸದಸ್ಯರನ್ನು ಅವರ ಮನೆಯ ರೀತಿ ನೀತಿಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ತನ್ನ ಗಂಡನನ್ನು ಮಾತ್ರವಲ್ಲದೆ, ಕುಟುಂಬದ ಇತರ ಸದಸ್ಯರೂ ತನ್ನವರೆಂಬ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಎಲ್ಲವನ್ನೂ ಮಾತಿನಲ್ಲೇ ಹೇಳಬೇಕಾಗಿಲ್ಲ. ಕೃತಿಯಿಂದಲೂ ಭಾವನೆಗಳನ್ನು ವ್ಯಕ್ತಪಡಿಸಬಹುದು.

ಸಂಬಂಧಗಳಲ್ಲೇ ಅತಿ ಸೂಕ್ಷ್ಮ ಹಾಗೂ ಜಟಿಲವಾದದ್ದು ಗಂಡ-ಹೆಂಡತಿಯ ಸಂಬಂಧ. ಪ್ರೀತಿಸಿ ಮದುವೆಯಾದವರಾಗಲೀ ಅಥವಾ ಮನೆಯ ಹಿರಿಯರು ನಿರ್ಣಯಿಸಿದ ವಿವಾಹವಾಗಲೀ, ಮದುವೆಯ ನಂತರದ ಸಂಬಂಧ ಗಂಡ-ಹೆಂಡತಿ ಮಾತ್ರ! ದಂಪತಿಗಳು ವಿದ್ಯಾವಂತರೋ, ಅವಿದ್ಯಾವಂತರೋ, ಸುಶಿಕ್ಷಿತರೂ ಅಲ್ಲವೋ, ಇವು ಯಾವುವೂ ಗಣನೆಗೆ ಬರುವುದಿಲ್ಲ. ಎಂಥ ದಂಪತಿಗಳಾದರೂ ಜಗಳ, ಮನಸ್ತಾಪ ಸಾಮಾನ್ಯ. ಹಾಗೆಂದು ಜಗಳವಾಡುವ ದಂಪತಿಗಳ ನಡುವೆ ಪ್ರೀತಿ ಇರುವುದಿಲ್ಲ



ಎಂದರ್ಥವಲ್ಲ. ಬೇವಿನ ರುಚಿ ತಿಂದ ನಂತರವಷ್ಟೇ ಸಿಹಿ ಬೆಲ್ಲದ ರುಚಿ ತಿಳಿಯುವುದು! ಮನಸ್ತಾಪವಾದಾಗ ಅದನ್ನು ಹೇಗೆ ಪರಿಹರಿಸಿಕೊಳ್ಳಬೇಕೆಂಬ ಅರಿವು ಇರಬೇಕು.

ಜಗಳವಾಡಲೀ ಪ್ರೀತಿಯಿಂದಿರಲೀ, ಪರಸ್ಪರರ ಅಭಿಪ್ರಾಯಕ್ಕೆ ಗೌರವ ಕೊಡುವುದು ಬಹಳ ಮುಖ್ಯ. ದಾಂಪತ್ಯದಲ್ಲಿ ಯಾರೊಬ್ಬರೂ ಮೇಲಲ್ಲ, ಹಾಗೆಯೇ ಯಾರೊಬ್ಬರೂ ಕೆಳಗಲ್ಲ. ಗಂಡ-ಹೆಂಡತಿಯ ನಡುವೆ ಬಿರುಕು ಮೂಡುವುದು ಒಬ್ಬರ ಮನಸ್ಸನ್ನು ಮತ್ತೊಬ್ಬರು ಅರ್ಥ ಮಾಡಿಕೊಳ್ಳದೇ ಹೋದಾಗ. ದಂಪತಿಗಳ ಮಧ್ಯೆ ಸಾಮರಸ್ಯವಿರಬೇಕಾದರೆ, ಸ್ವಾಭಿಮಾನ ಅಡ್ಡ ಬರಬಾರದು. ಎಲ್ಲಾ ಸಂಬಂಧಗಳಿಗೂ ಅಡಿಪಾಯವೆಂದರೆ ನಂಬಿಕೆ. ಅಪನಂಬಿಕೆ ಸಂಬಂಧಗಳಿಗೆ ಮಾರಕ. ಪ್ರೀತಿ, ವಿಶ್ವಾಸ ಹಾಗೂ ಗೌರವವನ್ನು ಕೇವಲ ನಿರೀಕ್ಷಿಸಬಾರದು. ಮೊದಲು ನಾವದನ್ನು ತೋರಿದಲ್ಲಿ ಅದರ ಎರಡರಷ್ಟು ತಿರುಗಿ ನಮಗೆ ಸಿಗುತ್ತದೆ. ಇದರಿಂದ ಸಂಬಂಧದ ಸ್ವಾಸ್ಥ್ಯವೂ ಸುಧಾರಿಸುತ್ತದೆ.

ಪರಸ್ಪರರ ನಡೆ–ನುಡಿಗಳಿಗೆ ನಮ್ಮ ಪ್ರತಿಕ್ರಿಯೆ ಹೇಗಿರುತ್ತದೆ ಎನ್ನುವುದರ ಮೇಲೆ ಕೂಡ ನಮ್ಮ ಸಂಬಂಧ ನಿಂತಿರುತ್ತದೆ. ತಂದೆ-ತಾಯಿಗೆ ಮಕ್ಕಳೇ ಪ್ರಪಂಚ. ಕಷ್ಟವಾದರೂ ಮಕ್ಕಳ ಆಸೆಯನ್ನು ಪೂರೈಸಲು ಯಾವ ಪೋಷಕರೂ ಹಿಂದೇಟು ಹಾಕುವುದಿಲ್ಲ. ಮಕ್ಕಳಿಗಾಗಿ ಒಳ್ಳೆಯ ಶಾಲೆ, ಸಂಗೀತ, ನೃತ್ಯ, ಆಟ, ಆಟಿಕೆಗಳು ಎಲ್ಲವನ್ನೂ ಕೊಡಿಸುವ ಇಂದಿನ ಪೋಷಕರು, ಮಕ್ಕಳೊಂದಿಗೆ ಸಮಯ ಕಳೆಯುವುದನ್ನೇ ಮರೆಯುತ್ತಾರೆ. ಮಕ್ಕಳಿಗೂ ಭಾವನೆಗಳಿರುತ್ತವೆ.

ಪೋಷಕರ ಮೆಚ್ಚುಗೆಯ, ಹೊಗಳಿಕೆಯ ನುಡಿಯನ್ನು ಕೇಳಲು ಕಾತರದಿಂದ ಕಾಯುತ್ತಿರುತ್ತಾರೆ. ಮಕ್ಕಳಿಗೆ ಎಷ್ಟೇ ದುಬಾರಿ ವಸ್ತುಗಳನ್ನು ತಂದು ಕೊಟ್ಟರೂ, ವಿಷಯ ವಸ್ತುಗಳಿಂದ ಸಂಬಂಧಗಳು ಹಸನಾಗುವುದಿಲ್ಲ. ವಿಷಯ ವಸ್ತುಗಳಿಗಿಂತ ಭಾವನೆಗಳು ಮುಖ್ಯ. ಮಕ್ಕಳಿಗೂ ಸಂವಹನ ಅಗತ್ಯ. ಆದರೆ ಪೋಷಕರಿಗೆ ತಮ್ಮ ಕೆಲಸದ ಒತ್ತಡದಲ್ಲಿ ಇದು ಆರ್ಥವಾಗುವುದಿಲ್ಲ. ದುಡಿಮೆ ಅವಶ್ಯಕವಾದರೂ, ದುಡಿಮೆಯೇ ಜೀವನವಾಗಬಾರದು. ಮಕ್ಕಳ ಬಾಲ್ಯ ಮತ್ತೆ ಹಿಂದಿರುಗುವುದಿಲ್ಲ. ಬಾಲ್ಯದಲ್ಲಿ ಪಡೆದ ಸಂಸ್ಕಾರ, ಸಂಸ್ಕೃತಿಗಳು ಬದುಕಿನುದ್ದಕ್ಕೂ ಇರುವಂತಹುದು.

ಮಕ್ಕಳೊಂದಿಗೆ ಕಳೆದ ಸಮಯ ಎಂದಿಗೂ ವ್ಯರ್ಥವಲ್ಲ. ಬದಲಿಗೆ ಒಂದು ವ್ಯಕ್ತಿತ್ವವನ್ನು ರೂಪಿಸುವ ಕೆಲಸವಾಗಿದೆ. ಎಷ್ಟೇ ಕಾರ್ಯಗಳಿದ್ದರೂ ಬಿಡುವು ಮಾಡಿಕೊಂಡು ಮಕ್ಕಳೊಂದಿಗೆ ಕಾಲ ಕಳೆದಲ್ಲಿ, ಪೋಷಕರ ಹಾಗೂ ಮಕ್ಕಳ ನಡುವಿನ ಬಂಧ ಬಿಗಿಯಾಗಿರುತ್ತದೆ.

ಕುಟುಂಬದಲ್ಲಿ ಸರಸ-ವಿರಸ, ನೋವು-ನಲಿವು, ಮಾತಿನ ಚಕಮಕಿ ಸಹಜ. ಕೆಲವೊಮ್ಮೆ ನಮ್ಮವರೇ ಆಡಿದ ಮಾತುಗಳು ನೋವುಂಟುಮಾಡುತ್ತವೆ. ಅದೇ ವ್ಯಕ್ತಿಗಳು ಬಹಳಷ್ಟು ಬಾರಿ ಪ್ರೀತಿ, ವಿಶ್ವಾಸವನ್ನೂ ತೋರಿಸಿರುತ್ತಾರೆ. ಆದರೆ ಅಸಮಾಧಾನಕ್ಕೆ ಕಾರಣವಾದ ಒಂದು ಘಟನೆಯನ್ನು ನೆನೆದು ಸಂಬಂಧವನ್ನು ಹಾಳು ಮಾಡಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ? ಸಂಬಂಧಗಳ ಹಿತವನ್ನು ಕಾಪಾಡಿಕೊಳ್ಳಲು ಇಂಥ ಸಂದರ್ಭಗಳಲ್ಲಿ ನಮಗೆ ನೋವನ್ನುಂಟುಮಾಡಿದ ವ್ಯಕ್ತಿಯ ಒಳ್ಳೆಯತನವನ್ನು ನೆನೆಯಬೇಕು. ಅವರು ನಮಗೆ ತೋರಿರುವ ಪ್ರೀತಿ, ವಿಶ್ವಾಸವನ್ನು ನೆನಪಿಸಿಕೊಂಡಲ್ಲಿ, ಅವರ ಬಗೆಗಿರುವ ನಮ್ಮ ಅಸಮಾಧಾನ ಹೇಳ ಹೆಸರಿಲ್ಲದಂತೆ ಓಡಿಹೋಗುತ್ತದೆ. ಅವರನ್ನು ಕ್ಷಮಿಸುವ ಕ್ಷಮಾಗುಣ ತಾನೇ ತಾನಾಗಿ ಬರುತ್ತದೆ. ತಪ್ಪು ಯಾರದ್ದೇ ಇರಲಿ ಸಂಬಂಧಗಳ ಹಿತಕ್ಕಾಗಿ, ಶಾಂತಿಯ ಬಾವುಟ ಹಿಡಿದು ಮೊದಲ ಹೆಜ್ಜೆ ನಾವಿಟ್ಟಲ್ಲಿ. ಎದುರಿನ ವ್ಯಕ್ತಿ ಪಶ್ಚಾತ್ತಾಪದಿಂದ ನುಲುಗಿ ಹೋಗುತ್ತಾರೆ.

ಪಶ್ಚಾತ್ತಾಪಕ್ಕಿಂತ ಹೆಚ್ಚಿನ ಶಿಕ್ಷೆ ಇನ್ನೊಂದಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಕುಟುಂಬದಲ್ಲಿ ಸಾಮರಸ್ಯವನ್ನು ಹೆಚ್ಚಿಸಲು ಎದುರಿಗಿರುವ ವ್ಯಕ್ತಿಯ ಕ್ಷಮಾಯಾಚನೆಯ ಮೊದಲೇ ಅವರನ್ನು ಕ್ಷಮಿಸುವ ಗುಣವನ್ನು ನಾವು ಬೆಳೆಸಿಕೊಳ್ಳಬೇಕು. ಎಲ್ಲಕ್ಕೂ ನಾನೇ ಹೊಣೆ ಎಂಬ ಭಾವನೆಯಿದ್ದಲ್ಲಿ ರಾಜಿ, ಸಂಧಾನ ಸುಲಭ.


ಸಂಸಾರದಲ್ಲಿ ಸಾಮರಸ್ಯವಿರಬೇಕಾದಲ್ಲಿ ಕುಟುಂಬದ ಸದಸ್ಯರೆಲ್ಲರ ಕೊಡುಗೆಯೂ ಇರಬೇಕು. ಪ್ರತಿಯೊಬ್ಬರಿಗೂ ಹೊಂದಿಕೊಂಡು ಹೋಗುವ ಗುಣವಿದ್ದಲ್ಲಿ ಮಾತ್ರ ಸಂಸಾರದಲ್ಲಿ ಸಮರಸ ಸಾಧ್ಯ.

❖

ಹೃದಯದ ಆರೈಕೆ ಹೀಗಿರಲಿ...

ಡಾ. ಕಿರಣ್ ವಿ. ಎಸ್.

> ಇತ್ತೀಚೆಗೆ ಮೂವತ್ತರ ಹರೆಯದ, ತಕ್ಕಮಟ್ಟಿಗೆ ಆರೋಗ್ಯಕರ ಜೀವನವನ್ನೇ ನಡೆಸುತ್ತಿದ್ದರೆಂದು ಭಾವಿಸುವವರಿಗೆ ಹೃದಯಾಘಾತವಾಯಿತು ಎಂಬ ಸುದ್ದಿ ಬಂದರೆ ಭೀತಿಯಾಗುತ್ತದೆ.



ಯಾರಾದರೂ ಪರಿಚಿತರೋ ಅಥವಾ ಹೆಸರು ಮಾಡಿರುವವರೋ ಮರಣಿಸಿದಾಗ ಮೊದಲು ಸಂಕಟವಾಗುತ್ತದೆ. ಅವರ ಮರಣದ ಕಾರಣ ಹೃದಯಾಘಾತ ಎಂದೇನಾದರೂ ತಿಳಿದರೆ ಆತಂಕವಾಗುತ್ತದೆ. ಅದರಲ್ಲೂ ಇತ್ತೀಚೆಗೆ ಮೂವತ್ತರ ಹರೆಯದ, ತಕ್ಕಮಟ್ಟಿಗೆ ಆರೋಗ್ಯಕರ ಜೀವನವನ್ನೇ ನಡೆಸುತ್ತಿದ್ದರೆಂದು ಭಾವಿಸುವವರಿಗೆ ಹೃದಯಾಘಾತವಾಯಿತು ಎಂದು ಸುದ್ದಿ ಬಂದರೆ ಭೀತಿಯಾಗುತ್ತದೆ. ಸುದ್ದಿಯ ಪರಿಣಾಮ ಮನಸ್ಸಿನ ಮೇಲೆ ಇರುವಾಗ ಆಸ್ಪತ್ರೆಗಳಿಗೆ, ಪ್ರಯೋಗಾಲಯಗಳಿಗೆ, ತಜ್ಞವೈದ್ಯರ ಬಳಿಗೆ ಹೋಗುವವರು ಎಷ್ಟೋ ಮಂದಿ. ಆದರೆ, ವೈದ್ಯರು ಹೇಳುವ ಜಾಗರೂಕತೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವವರು ವಿರಳ. ಕೆಲದಿನಗಳ ನಂತರ ‘ಎಲ್ಲರಿಗೂ ಏನೇನೋ ಆಗುತ್ತಿದ್ದರೂ ನನಗೇನೂ ಆಗುವುದಿಲ್ಲ’ ಎನ್ನುವ ಮನೋಭಾವ ಬೆಳೆಯುತ್ತದೆ. ಕೆಲಕಾಲದ ನಂತರ ಮತ್ತೊಂದು ಇಂತಹುದೇ ಸುದ್ದಿ, ಮತ್ತಷ್ಟು ಆತಂಕದ ದಿನಗಳು - ಈ ರೀತಿಯ ವರ್ತುಲ ವರ್ತನೆ ಕಾಣುತ್ತಿದ್ದೇವೆ. ಸರಳವಾಗಿ ‘ಹೃದಯದ ಆರೈಕೆ ಹೇಗೆ ಮಾಡಬೇಕು’ ಎನ್ನುವುದರ ಜಿಜ್ಞಾಸೆ ಇಲ್ಲಿದೆ.

ಕಳೆದ ಎರಡು-ಮೂರು ದಶಕಗಳಲ್ಲಿ ಜನಸಾಮಾನ್ಯರ ಜೀವನಶೈಲಿ ಅನೂಹ್ಯ ಬದಲಾವಣೆಗಳನ್ನು ಕಂಡಿದೆ. ನಮ್ಮ ಹಿಂದಿನ ತಲೆಮಾರಿನ ಸಮಸ್ಯೆಗಳು, ಅಗತ್ಯಗಳು ನಮ್ಮ ತಲೆಮಾರಿಗೆ ಅನ್ವಯವಾಗುವುದಿಲ್ಲ. ಅಂತೆಯೇ, ಪ್ರಾಯಶಃ ನಮ್ಮ ಸಮಸ್ಯೆಗಳು ನಮ್ಮ ಮುಂದಿನ ಪೀಳಿಗೆಗೆ ಬದಲಾಗಿರುತ್ತವೆ. ಪ್ರಗತಿಯ ವೇಗಕ್ಕೆ ತಕ್ಕಂತೆ ಹೆಜ್ಜೆ ಹಾಕುವುದು ಯುವಜನತೆಯ, ಮಧ್ಯವಯಸ್ಕರ ಬದುಕಿನ ಭಾಗವೇ ಆಗಿಹೋಗಿದೆ. ಮಾನಸಿಕ ಒತ್ತಡವನ್ನು ಸಹಿಸಲು ಅನಾರೋಗ್ಯಕರ ಚಟಗಳಿಗೆ ಮೊರೆ ಹೋಗುವ ಜೀವನಶೈಲಿ, ಆದ್ಯತೆಗಳು ಬದಲಾದಂತೆ ಕಡಿಮೆಯಾಗುತ್ತಿರುವ ಕೌಟುಂಬಿಕ ಭದ್ರತೆ, ಆರೋಗ್ಯದ ಬಗ್ಗೆ ನಿರ್ಲಕ್ಷ್ಯ, ಬೀಸುಬೀಡಾದ ಆಹಾರ ಸೇವನೆ, ಸಾಮಾಜಿಕ ಬಾಂಧವ್ಯಗಳ ನಿರ್ವಹಣೆಯ ಹೆಸರಿನಲ್ಲಿ ಮದ್ಯಪಾನ, ಮಾದಕ ವಸ್ತುಗಳ ಚಟ. ಮೊದಲಾದುವು ಹೃದಯ ಮೇಲೆ ಬೀಳುವ ತೀವ್ರ ಒತ್ತಡಕ್ಕೆ ಕೊಡುಗೆಯಾಗಿವೆ. ಇವೆಲ್ಲವೂ ಒಂದು ಹಂತದಲ್ಲಿ ‘ಹಿಂದುರಗಲಾಗದ’ ನಿರ್ಣಾಯಕ ಮಟ್ಟವನ್ನು ತಲುಪುತ್ತದೆ. ಸಾವಿನ ಸುದ್ದಿಯೇನೋ ನಮ್ಮನ್ನು ತಲುಪುತ್ತದೆ; ಆದರೆ, ಅದಕ್ಕೆ ಕಾರಣವಾದ ನೈಜ ಅಂಶಗಳು ಸಾರ್ವಜನಿಕಗೊಳ್ಳುವುದು ತೀರಾ ಅಪರೂಪ. ಹೀಗಾಗಿ, ಇತರರ ಮರಣದ ಸುದ್ದಿ ನಮ್ಮನ್ನು ಕಂಗೆಡಿಸುತ್ತದಾದರೂ, ಅದನ್ನು ಹೇಗೆ ತಡೆಯಬಹುದಿತ್ತು ಎನ್ನುವ ಮಾರ್ಗಗಳು ಸ್ಪಷ್ಟವಾಗುವುದಿಲ್ಲ. ವೈಯಕ್ತಿಕವಾಗಿ ಪ್ರತಿಯೊಬ್ಬರೂ ತಂತಮ್ಮ ಆರೋಗ್ಯಪರಿಸ್ಥಿತಿಯ ಆತ್ಮಾವಲೋಕನ ಮಾಡಿಕೊಳ್ಳುತ್ತಾ, ಪರಿಹಾರಗಳನ್ನು ಕಂಡುಕೊಳ್ಳುವುದು ಮುಖ್ಯ.

ಜೀವನಶೈಲಿ

ಹೃದಯದ ಆರೋಗ್ಯಕ್ಕೆ ಎರವಾಗುತ್ತಿರುವ ಸಮಸ್ಯೆಗಳ ಪಟ್ಟಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ತಡೆಗಟ್ಟಬಹುದಾದ ಅಂಶಗಳೇ ಹೆಚ್ಚಾಗಿ ಇರುವುದು ಆಶಾದಾಯಕ ಸಂಗತಿ. ಅದನ್ನು ಪಾಲಿಸಬಲ್ಲ ಮನಃಸ್ಥಿತಿಯ ಕೊರತೆಯೇ ಸದ್ಯಕ್ಕೆ ಪ್ರಮುಖ ಸಮಸ್ಯೆ. ತಂಬಾಕು, ಮದ್ಯಪಾನ, ಮಾದಕ ವಸ್ತುಗಳಿಂದ ದೂರವಿರುವುದು; ಮಧುಮೇಹ, ಅಧಿಕ ರಕ್ತದೊತ್ತಡಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು; ದೈನಂದಿನ ವ್ಯಾಯಾಮ, ಪ್ರಾಣಾಯಾಮ, ಧ್ಯಾನಗಳ ಪಾಲನೆ; ಆಹಾರ ಸೇವನೆಯಲ್ಲಿ ಶಿಸ್ತು; ದಿನಕ್ಕೆ ಏಳು ಗಂಟೆಗಳಿಗಿಂತ ಕಡಿಮೆಯಿಲ್ಲದಂತೆ ನಿದ್ರೆ; ಹಣ ಮತ್ತು ಆರೋಗ್ಯದ ನಿರ್ವಹಣೆಯನ್ನು ತೂಗಬಲ್ಲ ಉದ್ಯೋಗದ ಆಯ್ಕೆ; ಕೌಟುಂಬಿಕ ಸಂಬಂಧಗಳ ಆರೋಗ್ಯಕರ ಪೋಷಣೆ; ಮನಸ್ಸಿನ ದುಗುಡಗಳನ್ನು ಚರ್ಚಿಸಿ, ದಾರಿ ಕಾಣಿಸಬಲ್ಲ ಸ್ನೇಹಿತರ, ಬಂಧುಗಳ ಆಪ್ತವಲಯದ ನಿರ್ಮಾಣ; ವೈಯಕ್ತಿಕ ಆರೋಗ್ಯದ ನಿರ್ವಹಣೆಗೆ ನಿಯಮಿತ ವೈದ್ಯರೊಬ್ಬರ ಸಲಹೆಗಳು; ಮಾನಸಿಕ ನೆಮ್ಮದಿಗೆ ಬೇಕಾದ ಜೀವನಶೈಲಿ, ಮೊದಲಾದುವು ವಯಸ್ಸಿನ ಅಂತರವಿಲ್ಲದೆ ಪ್ರತಿಯೊಬ್ಬರ ಆವಶ್ಯಕತೆಗಳಾಗಬೇಕು. ಮೂವತ್ತರ ಹರೆಯದಲ್ಲಿ ಸಂಭವಿಸುತ್ತಿರುವ ಹೃದಯಾಘಾತಗಳು ಎಚ್ಚರಿಕೆಯ ಗಂಟೆಗಳಾಗಿ, ದಿಕ್ಕು ತಪ್ಪುತ್ತಿರುವ ಬದುಕನ್ನು ಸರಿಯಾದ ಹಾದಿಯಲ್ಲಿ ತಿರುಗಿಸಬಲ್ಲ ಮಾರ್ಗದರ್ಶಿಯಾಗಬೇಕು.

ಧೂಮಪಾನ ಮತ್ತು ಮದ್ಯಪಾನಗಳು ಹೃದಯದ ಶತ್ರುಗಳು. ಉಪ್ಪು ಅಥವಾ ಸಕ್ಕರೆಯ ಅಂಶ ಅಧಿಕವಾಗಿರುವ ತಿನಿಸು ಮತ್ತು ಪಾನೀಯಗಳು, ಅಧಿಕ ಜಿಡ್ಡಿನ ಆಹಾರಗಳು ಹೃದಯದ ಅನಾರೋಗ್ಯಕ್ಕೆ ಕಾರಣ. ಹೃದ್ರೋಗವನ್ನು ದೂರವಿಡುವಲ್ಲಿ ಇಂತಹುವುಗಳ ಬಳಕೆಯನ್ನು ಕಡಿಮೆಗೊಳಿಸುವುದು ಸಹಾಯಕ. ನಿಯಮಿತವಾಗಿ ಸೇವಿಸುವ ಆರೋಗ್ಯ ಸಂಬಂಧಿ ಔಷಧಗಳನ್ನು ಅಕಾರಣವಾಗಿ ಎಂದಿಗೂ ತಪ್ಪಿಸಬಾರದು. ರಕ್ತದೊತ್ತಡ, ಮಧುಮೇಹ ಮುಂತಾದ ಸಮಸ್ಯೆಗಳನ್ನು ಸಾಧ್ಯವಾದಷ್ಟೂ ನಿಯಂತ್ರಣದಲ್ಲಿ ಇಡಬೇಕು. ಹೃದಯದ ಆರೋಗ್ಯ ಮತ್ತು ಆಹಾರ ಜೊತೆಜೊತೆಯಾಗಿ ಸಾಗುತ್ತವೆ. ಸಾತ್ವಿಕ ಆಹಾರವನ್ನು ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳಬೇಕು. ತಾಜಾ ಹಣ್ಣು, ತರಕಾರಿ, ಧಾನ್ಯಗಳು, ಪ್ರೋಟೀನ್ ಅಂಶ ಅಧಿಕವಾಗಿರುವ ಆಹಾರ, ಜಿಡ್ಡಿನ ಅಂಶ ಕಡಿಮೆ ಇರುವ ಹೈನುಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಕು.

ನಿಯಮಿತ ವ್ಯಾಯಾಮ ಔಷಧಗಳಷ್ಟೇ ಮಹತ್ವದ್ದು. ‘ಕೂರುವುದು ಆಧುನಿಕ ಧೂಮಪಾನ’ ಎನ್ನುವ ಮಾತಿದೆ. ಯಾವುದೇ ಚಟುವಟಿಕೆಯಿಲ್ಲದೆ ವಿನಾ ಕಾರಣ ಕೂರುವುದರಿಂದ ಆರೋಗ್ಯದ ಮೇಲೆ ಆಗುವ ವ್ಯತಿರಿಕ್ತ ಪರಿಣಾಮಗಳು ಧೂಮಪಾನದಿಂದ ಆಗುವಷ್ಟೇ ತೀವ್ರವಾದ ಮಟ್ಟದವು ಎಂದು ಅಧ್ಯಯನಗಳು ತೋರಿವೆ. ಆರೋಗ್ಯಕರ ಹೃದಯಕ್ಕೆ ವ್ಯಾಯಾಮ ಬಹಳ ಮುಖ್ಯ. ದಿನಕ್ಕೆ ಕನಿಷ್ಠ ಮೂವತ್ತು ನಿಮಿಷಗಳ ಕಾಲ ಉಸಿರಾಟದ ಗತಿಯನ್ನು ಏರಿಸುವ ಶಾರೀರಿಕ ವ್ಯಾಯಾಮ ಮಾಡಬೇಕು. ಇದರಲ್ಲಿ ವಾರಕ್ಕೆ ಎರಡು ದಿನ ಮಾಂಸಖಂಡಗಳ ಬಲವನ್ನು ಹೆಚ್ಚಿಸುವ ವ್ಯಾಯಾಮ ಇರಬೇಕು. ವಾರದಲ್ಲಿ ಇಂತಿಷ್ಟು ದಿನ ಎನ್ನುವುದಕ್ಕಿಂತ ಪ್ರತಿದಿನವೂ ತಪ್ಪದೆ ವ್ಯಾಯಾಮ ಮಾಡುವುದು ಸರಿಯಾದ ವಿಧಾನ. ವಿಪರೀತ ದೇಹತೂಕ ಹೃದಯದ ಮೇಲೆ ತೀವ್ರವಾದ ಒತ್ತಡವನ್ನು ಹೇರುತ್ತದೆ. ಶರೀರದ ತೂಕವನ್ನು ನಿಯಂತ್ರಣದಲ್ಲಿ ಇಡುವುದು ಆರೋಗ್ಯದ ದೃಷ್ಟಿಯಿಂದ ಬಹಳ ಒಳ್ಳೆಯದು. ಆಧುನಿಕ ಕಾಲದಲ್ಲಿ ಬೊಜ್ಜನ್ನು ಸಮರ್ಥಿಸುವ ಜನರಿದ್ದಾರೆ. ವೈಯಕ್ತಿಕ ನಿಲುವುಗಳು ಏನೇ ಇದ್ದರೂ, ಅದರ ವ್ಯತಿರಿಕ್ತ ಪರಿಣಾಮಗಳು ಹೃದಯದ ಮೇಲೆ ಆಗುವುದನ್ನು ತಪ್ಪಿಸಲಾಗದು. ಬೊಜ್ಜಿನಿಂದ ಬಳಲುವವರು ತಮ್ಮ ಆರೋಗ್ಯದತ್ತ ಹೆಚ್ಚು ಜತನ ವಹಿಸಬೇಕು. ಆಹಾರತಜ್ಞರ ಸಲಹೆಯ ಮೇರೆಗೆ ಅಗತ್ಯ ಪೋಷಕಾಂಶಗಳುಳ್ಳ ಸಮತೋಲಿತ ಆಹಾರವನ್ನು ಸೇವಿಸುವುದು, ಅಧಿಕ ಕ್ಯಾಲರಿ ಆಹಾರಪದಾರ್ಥಗಳಿಂದ ದೂರವಿರುವುದು ಎಲ್ಲರಿಗೂ ಅನ್ವಯಿಸುತ್ತದೆ.

ಒತ್ತಡ ಬೇಡ

ದೈಹಿಕ ಮತ್ತು ಮಾನಸಿಕ ಒತ್ತಡದ ನಿಗ್ರಹ ಹೃದಯದ ಮೇಲೆ ಉತ್ತಮ ಪರಿಣಾಮ ಬೀರಬಲ್ಲದು. ಕೋಪ, ತುಮುಲಗಳು ಹೃದಯದ ರಕ್ತನಾಳಗಳನ್ನು ಸಂಕೋಚಿಸಿ, ಆಘಾತ ಉಂಟುಮಾಡಬಲ್ಲವು. ಮಾನಸಿಕ ಅಶಾಂತಿ, ಕೆಲಸದ ಒತ್ತಡಗಳ ಕಾರಣದಿಂದ ಅಧಿಕ ರಕ್ತದೊತ್ತಡಕ್ಕೆ ತುತ್ತಾಗುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ಉದ್ವೇಗಗಳಿಗೆ ಸಿಲುಕಿ ಧೂಮಪಾನ, ಮದ್ಯಪಾನಗಳ ಚಟ ಬೆಳೆಸಿಕೊಂಡವರು ಇಬ್ಬಗೆಯಿಂದ ಹೃದಯದ ಕಾಯಿಲೆಗಳಿಗೆ ತುತ್ತಾಗುತ್ತಾರೆ. ತೀವ್ರ ಒತ್ತಡದಿಂದ ಬಳಲುವವರು ಮಾನಸಿಕ ಆರೋಗ್ಯ ಸಲಹೆಗಾರರ ಸಹಾಯ ಪಡೆಯಬೇಕು. ನಿಗದಿತ ಪ್ರಾಣಾಯಾಮ, ಧ್ಯಾನಗಳು ಮನಸ್ಸಿನ ಉದ್ವೇಗವನ್ನು ಕಡಿಮೆ ಮಾಡುವಲ್ಲಿ ಸಹಕಾರಿ. ಹೃದಯದ ಆರೋಗ್ಯದ ಮೇಲೆ ನಿದ್ರೆಯ ಪರಿಣಾಮ ಗಾಢವಾದದ್ದು. ಧಾವಂತದ ಜೀವನಶೈಲಿ ನಿದ್ರೆಯ ಬಗ್ಗೆ ತಾತ್ಸಾರ ವಹಿಸುತ್ತದೆ. ಇದರ ಪರಿಣಾಮವಾಗಿ ಸಣ್ಣ ವಯಸ್ಸಿನಲ್ಲೇ ಹೃದ್ರೋಗಗಳಿಗೆ ತುತ್ತಾಗುವವರ ಸಂಖ್ಯೆ ಬೆಳೆಯುತ್ತಿದೆ. ಉತ್ತಮ ಗುಣಮಟ್ಟದ, ಸರಿಯಾದ ಕಾಲಾವಧಿಯ ನಿದ್ರೆ ಹೃದಯ ಮತ್ತು ರಕ್ತನಾಳಗಳ ಸಮಸ್ಯೆಗಳನ್ನು ಗುಣಪಡಿಸುತ್ತದೆ; ಹೃದಯದ ಕೆಲಸಕ್ಕೆ ಅಗತ್ಯವಾದ ಚೋದಕಗಳನ್ನು ಸರಿದೂಗಿಸುತ್ತದೆ; ಶರೀರದ ರಕ್ಷಕ ವ್ಯವಸ್ಥೆಯನ್ನು ಚುರುಕಾಗಿ ಇಟ್ಟು, ಕಾಯಿಲೆಗಳನ್ನು ದೂರವಿಡುತ್ತದೆ.

ಉತ್ತಮ ಆರೋಗ್ಯ ಪದ್ಧತಿಗಳನ್ನು ರೂಢಿಸಿಕೊಳ್ಳುವುದು; ಕಾಯಿಲೆಯನ್ನು ಆರಂಭದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯುವುದು; ಕಾಯಿಲೆಯ ಪರಿಣಾಮಗಳನ್ನು ತಹಬಂದಿಗೆ ತರುವುದು; ಮತ್ತು ಕಾಯಿಲೆಯಿಂದ ಈಗಾಗಲೇ ಆಗಿರುವ ಶಾರೀರಿಕ ಸಮಸ್ಯೆಗಳನ್ನು ನಿಧಾನವಾಗಿ ಸಹಜಸ್ಥಿತಿಗೆ ತರುವುದು - ಈ ಹಂತಗಳು ಹೃದಯದ ಕಾಯಿಲೆಗಳ ನಿರ್ವಹಣೆಯಲ್ಲಿ ಪ್ರಮುಖ ಮೈಲಿಗಲ್ಲುಗಳು. ಹೃದಯದ ಆರೈಕೆಯಲ್ಲಿ ಶಿಸ್ತುಬದ್ಧ ಬದುಕಿನ ವಿಧಾನಗಳು ಮತ್ತು ಜೀವನಶೈಲಿಯ ಸುಧಾರಣೆಗಳು ಪ್ರತಿಯೊಬ್ಬರಿಗೂ ಅಗತ್ಯ.

❖

‘ಶಾಲೆಗೆ ಹೋಗೋ ತಿಮ್ಮ’ ‘ಹೊಟ್ಟೆನೋವು ಅಮ್ಮ!’

ಮಗು ಹೊಟ್ಟೆನೋವೆಂದು ಬಂದಾಗ ಮಕ್ಕಳ ತಜ್ಞರು ಪತ್ತೇದಾರಿಗಳಂತೆ ಆಲೋಚನೆಗೆ ತೊಡಗಬೇಕಾಗುತ್ತದೆ.



ಡಾ. ಕುಶ್ವಂತ್ ಕೋಳಿಬೈಲು

ಮಕ್ಕಳ ಬಾಲ್ಯವು ‘ಅಮ್ಮಾ! ಹೊಟ್ಟೆನೋವು!!’ ಎಂಬ ಅಳಲುಗಳಿಲ್ಲದೆ ಪೂರ್ಣವಾಗುವುದಿಲ್ಲ. ಯಾವ ಸೂಚನೆಯನ್ನೂ ಕೊಡದೆ ಹಠಾತ್ ಬರುವ ಹೊಟ್ಟೆನೋವು ಕೆಲವೊಮ್ಮೆ ಯಾವ ಸುಳಿವನ್ನೂ ಕೊಡದೆ ಮಾಯವಾಗುತ್ತದೆ. ಹೆತ್ತವರಿಗೆ ಆತಂಕ ಮತ್ತು ವೈದ್ಯರಿಗೆ ಸವಾಲುಗಳನ್ನು ನೀಡುವ ಈ ಹೊಟ್ಟೆನೋವಿನ ಹಿಂದಿರುವ ಕೆಲವು ಕಾರಣಗಳು ಕುತೂಹಲಕಾರಿಯಾಗಿರುತ್ತವೆ. ಹೊಟ್ಟೆಯೆಂದರೆ ಅದೊಂದು ದೇಹದ ಅಂಗಾಂಗಗಳು ತುಂಬಿರುವ ಗುಡಾಣ! ಅಮ್ಮ ಅಡುಗೆಮನೆಯಲ್ಲಿ ವಿವಿಧ ಡಬ್ಬಿಗಳನ್ನು ಜೋಡಿಸಿದ ಹಾಗೆ ಪ್ರಕೃತಿಯು ಹೊಟ್ಟೆಯೊಳಗೆ ಒಂದರ ಪಕ್ಕ ಮತ್ತೊಂದರಂತೆ ವಿವಿಧ ಅಂಗಾಂಗಳನ್ನು ರಚಿಸಿದೆ. ಯಕೃತ್ತು, ಮೂತ್ರಪಿಂಡಗಳು, ಸ್ಪೀನ್, ಪ್ಯಾಂಕ್ರಿಯಾಸಿನ ಜೊತೆಜೊತೆಗೆ ಉದರ ಮತ್ತು ಜಠರಗಳ ಮಾಲೆಗಳು ಹೊಟ್ಟೆಯೊಳಗೆ ತಮ್ಮ ಜಾಗವನ್ನು ಮಾಡಿಕೊಂಡಿವೆ. ಇಲ್ಲಿ ಉದ್ಭವಿಸುವ ನೋವಿಗೆ ಈ ಯಾವುದಾದರು ಅಂಗಾಗವು ಕಾರಣಕರ್ತವಾಗಿ ರಬಹುದು. ಯಕೃತ್ತಿನ ಕಾಯಿಲೆಗಳು, ಮೂತ್ರಪಿಂಡದಲ್ಲಿ ಸೃಷ್ಟಿಯಾಗುವ ಕಲ್ಲುಗಳು, ಅಪೆಂಡಿಕ್ಸ್ ಭಾಗದ ಸೋಂಕು, ಉದರದೊಳಗೆ ಹೆಚ್ಚಾಗುವ ಹೈಡ್ರೋಕ್ಲೋರಿಕ್ ಆಮ್ಲ – ಹೀಗೆ ನಾನಾ ಕಾರಣಗಳು ವಿವಿಧ ಗುಣಲಕ್ಷಣಗಳಿರುವ ಹೊಟ್ಟೆನೋವನ್ನು ಕರುಣಿಸುತ್ತವೆ.



ಹಾಗಾಗಿ ಮಗು ಹೊಟ್ಟೆನೋವೆಂದು ಬಂದಾಗ ಮಕ್ಕಳ ತಜ್ಞರು ಪತ್ತೇದಾರಿಗಳಂತೆ ಆಲೋಚನೆಗೆ ತೊಡಗಬೇಕಾಗುತ್ತದೆ.

ಯಾವ ಆಹಾರದಿಂದ ಅಥವಾ ಯಾವ ವ್ಯವಹಾರದಿಂದ ಈ ಹೊಟ್ಟೆನೋವು ಶುರುವಾಗಿದೆಯೆಂಬ ಜಾಡನ್ನು ಹಿಡಿದು ವೈದ್ಯರು ಹೆಜ್ಜೆಹಾಕುತ್ತಾರೆ. ಹೊಟ್ಟೆಯ ಮೇಲೆ ಕೈಯಾಡಿಸುತ್ತಾ, ಹೊಟ್ಟೆಯ ಯಾವ ಮೂಲೆಯಲ್ಲಿಯಾದರೂ ಬಚ್ಚಿಟ್ಟುಕೊಂಡಿರಬಹುದಾದ ಸಣ್ಣ ಸುಳಿವಿಗಾಗಿ ತಡಕಾಡುತ್ತಾರೆ. ಮಗುವಿಗೆ ವಾಂತಿ, ಭೇದಿ ಅಥವಾ ಜ್ವರವಿದ್ದಲ್ಲಿ ಹೊಟ್ಟೆನೋವಿಗಿರುವ ಕಾರಣಗಳನ್ನು ಸರಳವಾಗಿ ಪತ್ತೆ ಹಚ್ಚಿಬಿಡಬಹುದು. ಉದರದಲ್ಲಿ ಆ್ಯಸಿಡಿಟಿ ಸಮಸ್ಯೆಯಿಂದ ಉಂಟಾಗುವ ಹೊಟ್ಟೆನೋವಿನ ತೀವ್ರತೆಯು ಆಹಾರ ಸೇವಿಸಿದ ನಂತರ ಕಡಿಮೆಯಾದರೆ ಡಿಯೋಡಿನಮ್ ಭಾಗದಲ್ಲಿ ಆ್ಯಸಿಡಿಟಿಯಿಂದ ಕಂಡುಬರುವ ಹೊಟ್ಟೆನೋವು ಆಹಾರ ಸೇವಿಸಿದ ನಂತರ ಹೆಚ್ಚು ತೀವ್ರವಾಗುತ್ತದೆ. ಕಿಡ್ನಿಯ ಸಮಸ್ಯೆಗಳಿಂದ ಕಂಡುಬರುವ ಹೊಟ್ಟೆನೋವಿನ ಸುಳಿವನ್ನು ಮೂತ್ರದಲ್ಲಿ ರಕ್ತ ಮತ್ತು ಬ್ಯಾಕ್ಟೀರಿಯಾಗಳನ್ನು ಪತ್ತೆ ಹಚ್ಚುವುದರ ಮೂಲಕ ಅಥವಾ ಕಿಡ್ನಿಯಲ್ಲಿ ಕಲ್ಲುಗಳನ್ನು ಶೋಧಿಸುವ ಮೂಲಕ ತೀರ್ಮಾನಿಸಬಹುದು.

ಅಪೆಂಡಿಕ್ಸ್ ಮತ್ತು ಪಿತ್ತಕೋಶದ ಸೋಂಕಿನಿಂದ ಕಂಡುಬರುವ ಹೊಟ್ಟೆನೋವಿರುವ ಮಗುವಿನಲ್ಲಿ ಜ್ವರ ಮತ್ತು ವಾಂತಿ ರೋಗದ ಸುಳಿವನ್ನು ನೀಡಬಲ್ಲದು. ಜಠರದಲ್ಲಿ ಯಾವುದೇ ರೀತಿಯ ಅಡಚಣೆಯುಂಟಾದಾಗ ಬರುವ ಹೊಟ್ಟೆನೋವು ಹೊಟ್ಟೆಯನ್ನು ಊದಿಸುವುದರ ಜೊತೆಗೆ ಮಲಬದ್ಧತೆಗೂ ಕಾರಣವಾಗುತ್ತದೆ. ಈ ಮೇಲೆ ತಿಳಿಸಿದ ಕಾರಣಗಳಿಂದ ಬರುವ ಹೊಟ್ಟೆನೋವನ್ನು ಪತ್ತೆ ಹಚ್ಚುವುದಕ್ಕೆ ಮತ್ತು ಚಿಕಿತ್ಸೆ ನೀಡುವುದಕ್ಕೆ ನಿರ್ದಿಷ್ಟವಾದ ನಿಯಮಾವಳಿಗಳಿರುವುದರಿಂದ ಅವುಗಳ ಚಿಕಿತ್ಸೆ ಸಾಧ್ಯ.

ಹೊಟ್ಟೆನೋವಿಗೆ ಯಾವುದೇ ಕಾರಣಗಳು ಸಿಗದಿದ್ದಾಗ ಮಗುವಿನ ಪೋಷಕರಿಗೆ ಮತ್ತು ಚಿಕಿತ್ಸೆ ನೀಡುವ ವೈದ್ಯರಿಗೆ ಮುಂದಿನ ದಾರಿ ತೋಚುವುದಿಲ್ಲ. ಪೋಷಕರ ಆತಂಕ ಹೆಚ್ಚಾಗಿ ಅವರು ವೈದ್ಯರನ್ನು ಬದಲಾಯಿಸುತ್ತಾ ಹೋಗುತ್ತಾರೆ. ಪ್ರತಿ ಆಸ್ಪತ್ರೆಯಲ್ಲಿ ಹಿಂದಿನ ಬಾರಿ ನಡೆಸಲಾದ ಪರೀಕ್ಷೆಗಳನ್ನು ಮತ್ತೆ ಶುರುವಿನಿಂದ ಮಾಡುತ್ತಾರೆ. ಇದು ಖರ್ಚಿಗೆ ದಾರಿಯಾಗುವುದರ ಜೊತೆಗೆ ಹೆತ್ತವರ ಮನಸ್ಸಿನಲ್ಲಿ ಮಗು ಯಾವುದೋ ದೊಡ್ಡ ಕಾಯಿಲೆಯಿಂದ ಬಳಲುತ್ತಿರಬಹುದೆಂಬ ಆತಂಕಕ್ಕೂ ಕಾರಣವಾಗುತ್ತದೆ. ಮಕ್ಕಳಿಗೆ ಹೊಟ್ಟೆನೋವು ಎರಡು ತಿಂಗಳಿಗಿಂತ ಹೆಚ್ಚು ಸಮಯ ಬಾಧಿಸಿದಲ್ಲಿ ಮತ್ತು ಯಾವುದೇ ನಿಖರವಾದ ಕಾರಣಗಳು ಸಿಗದಾಗ ಈ ಹೊಟ್ಟೆನೋವನ್ನು ದೀರ್ಘಕಾಲದ ಹೊಟ್ಟೆನೋವೆಂದು ವೈದ್ಯರು ಪರಿಗಣಿಸುತ್ತಾರೆ. ಈ ಮಾದರಿಯ ದೀರ್ಘಕಾಲದ ಹೊಟ್ಟೆನೋವಿನ ಸಮಸ್ಯೆಯಿರುವ ಮಕ್ಕಳಲ್ಲಿ ರಕ್ತ, ಮಲ ಮತ್ತು ಮೂತ್ರದ ಪರೀಕ್ಷೆಗಳಲ್ಲಿಯೂ ಯಾವುದೇ ರೋಗದ ಲಕ್ಷಣಗಳು ಇರುವುದಿಲ್ಲ. ಹೊಟ್ಟೆಯ ಸ್ಕ್ಯಾನಿಂಗ್ ಕೂಡ ಯಾವುದೇ ರೋಗದ ಸುಳಿವನ್ನು ನೀಡುವುದಿಲ್ಲ.

ಮಕ್ಕಳ ಈ ಹೊಟ್ಟೆನೋವಿಗೆ ಯಾವುದೇ ಕಾರಣಗಳು ಪತ್ತೆಯಾಗದಿದ್ದಾಗ ವೈದ್ಯರು ಇವನ್ನು ‘ಫಂಕ್ಷನಲ್ ಹೊಟ್ಟೆನೋವು’ ಎಂದು ಕರೆಯುತ್ತಾರೆ. ಇಂತಹ ಹೊಟ್ಟೆನೋವಿನಿಂದ ವಿಶ್ವದ ಸುಮಾರು ಶೇ 14ರಷ್ಟು ಮಕ್ಕಳು ಬಳಲುತ್ತಿರುತ್ತಾರೆ. ಆರರಿಂದ ಹನ್ನೆರಡು ವರ್ಷದ ಮಕ್ಕಳಲ್ಲಿ ಕಂಡು ಬರುವ ಈ ಕಾಯಿಲೆ ಹೆಣ್ಣುಮಕ್ಕಳನ್ನು ಹೆಚ್ಚಾಗಿ ಬಾಧಿಸುತ್ತದೆ. ಮಾನಸಿಕ ಒತ್ತಡ ಮತ್ತು ಆತಂಕಗಳು ಮಕ್ಕಳಲ್ಲಿ ಈ ರೀತಿಯ ಲಕ್ಷಣಗಳಿಗೆ ಕಾರಣವಾಗುತ್ತವೆ. ಕೆಲವು ಮಕ್ಕಳ ಉದರ ಮತ್ತು ಜಠರವು ನೋವಿಗೆ ಹೆಚ್ಚು ಸೂಕ್ಷ್ಮ ರೀತಿಯಲ್ಲಿ ಸ್ಪಂದಿಸುವುದು ಈ ರೋಗವನ್ನು ಉಂಟುಮಾಡಬಹುದು. ಮನುಷ್ಯನ ಜಠರದೊಳಗೆ ವಿವಿಧ ವಿಟಮಿನ್ ಉತ್ಪಾದಿಸುವ ಮತ್ತು ಜಠರದ ಪರಿಸರದ ಆರೋಗ್ಯವನ್ನು ಕಾಪಾಡುವ ಕೋಟ್ಯಂತರ ಸೂಕ್ಷ್ಮಾಣುಜೀವಿಗಳಿವೆ. ಈ ಸೂಕ್ಷ್ಮಾಣುಜೀವಿಗಳಲ್ಲಿ ಕಂಡುಬರುವ ಬದಲಾವಣೆಗಳೂ ಹೊಟ್ಟೆನೋವಿಗೆ ಕಾರಣವಾಗಬಹುದು. ಹೊಟ್ಟೆನೋವಿಗೆ ನಿರ್ದಿಷ್ಟ ಕಾರಣಗಳನ್ನು ಕಂಡುಹಿಡಿಯಲು ಸಾಧ್ಯವಾಗದಾಗ ಈ ವಿಚಾರಗಳನ್ನು ಪೋಷಕರ ಮತ್ತು ಮಕ್ಕಳ ಜೊತೆಗೆ ಮುಕ್ತವಾಗಿ ಚರ್ಚಿಸುವುದು ಅತ್ಯಗತ್ಯ. ಫಂಕ್ಷನಲ್ ಹೊಟ್ಟೆನೋವು ಮಕ್ಕಳ ಆರೋಗ್ಯಕ್ಕೆ ಯಾವುದೇ ತೀವ್ರವಾದ ಹಾನಿಯನ್ನು ದೀರ್ಘಕಾಲದಲ್ಲಿ ಮಾಡುವುದಿಲ್ಲವೆಂಬ ವಿಚಾರವನ್ನು ಅವರಿಗೆ ಮನದಟ್ಟು ಮಾಡಬೇಕು. ಹೊಟ್ಟೆನೋವಿಗೆ ಕಾರಣಗಳನ್ನು ಅರಿಯಲಾಗದಿದ್ದರೂ ವೈದ್ಯರು ಕೊಡುವ ಸೂಕ್ತ ವಿವರಣೆಗಳು ಹೆತ್ತವರ ತಲೆನೋವನ್ನು ಕಡಿಮೆ ಮಾಡುವುದರ ಜೊತೆ ಅವರ ಮನೆ ಮತ್ತು ಮನಸ್ಸಿನ ವಾತಾವರಣವನ್ನು ತಿಳಿಮಾಡಬಲ್ಲದು.

❖

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

‘ಸಹಭಾಗಿತ್ವದಿಂದ ಪ್ರಜಾಪ್ರಭುತ್ವದ ಉಳಿವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಣಯ ಕೈಗೊಳ್ಳುವ ಸ್ಥಾನಗಳಲ್ಲಿ ಕೆಲವೇ ಸಮುದಾಯಗಳು ಇರುವ ಬದಲು ಎಲ್ಲ ಸಮುದಾಯಗಳೂ ಇರಬೇಕು. ಎಲ್ಲರ ಪಾಲ್ಗೊಳ್ಳುವಿಕೆಯಿಂದ ಮಾತ್ರ ಪ್ರಜಾಪ್ರಭುತ್ವ ಉಳಿಯಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಚಂದ್ರ ಲೇಔಟ್‌ನಲ್ಲಿರುವ ಕನಕ ಗುರುಪೀಠದ ಶಾಖಾ ಮಠದಲ್ಲಿ ಸೋಮವಾರ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಲ್ಲ ಸಮಾಜಗಳಲ್ಲಿ ಪ್ರತಿಭಾವಂತರು ಇರುತ್ತಾರೆ. ಆದರೆ, ಎಲ್ಲ ಕಡೆಗಳಲ್ಲಿ ಒಂದೇ ರೀತಿಯ ಪ್ರೋತ್ಸಾಹ ಇರುವುದಿಲ್ಲ. ಪ್ರತಿಭೆಗಳಿದ್ದರೆ ಸಾಲದು. ಪ್ರತಿಭೆಗಳನ್ನು ಬೆಳೆಸಲು ಪೂರಕವಾದ ವಾತಾವರಣ ನಿರ್ಮಾಣಗೊಳ್ಳಬೇಕು ಎಂದು ಸಲಹೆ ನೀಡಿದರು.

ಕಲಿಕೆಯ ಕ್ಷೇತ್ರ ಯಾವುದೇ ಇರಲಿ, ಎಲ್ಲರಲ್ಲಿಯೂ ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ ಇರಬೇಕು. ಆಗ ಮಾನವೀಯ ವ್ಯಕ್ತಿಯಾಗಲು ಸಾಧ್ಯ. ಸಮಾಜಮುಖಿಯಾಗಲು ಸಾಧ್ಯ ಎಂದರು.

ಪ್ರತಿಭಾ ಪುರಸ್ಕಾರ ಪಡೆದವರು ಮುಂದೆ ಬೇರೆಬೇರೆ ಕ್ಷೇತ್ರಕ್ಕೆ ಹೋಗುತ್ತಾರೆ. ಕೆಲವರು ರಾಜಕೀಯ ಕ್ಷೇತ್ರಕ್ಕೂ ಬರಬಹುದು. ರಾಜಕೀಯಕ್ಕೆ ಬರುವವರು ಅಧಿಕಾರ ಪಡೆಯುವುದನ್ನು ಧ್ಯೇಯವನ್ನಾಗಿಸದೇ ಸೇವೆ ಮಾಡುವುದನ್ನು ಗುರಿಯಾಗಿಸಿಕೊಳ್ಳಬೇಕು ಎಂದರು.

ಇಲ್ಲಿನ ಕನಕ ಗುರುಪೀಠದ ಸ್ಥಳ 30 ವರ್ಷಗಳ ಗುತ್ತಿಗೆಯಲ್ಲಿದೆ. ಅದನ್ನು ಮಠಕ್ಕೇ ನೀಡಲು ಪ್ರಯತ್ನಿಸಲಾಗುವುದು. ವಿದ್ಯಾರ್ಥಿನಿಲಯ ನಿರ್ಮಿಸಬೇಕೆಂಬ ಬೇಡಿಕೆಯನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿವಿಧ ಜಿಲ್ಲೆಗಳ 600ಕ್ಕೂ ಅಧಿಕ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಚಂದ್ರಾಲೇಔಟ್‌ನ ಮಠದ ಜಮೀನು ಉಳಿಯಲು ಕಾರಣರಾದ ಉಮೇಶ ಸ್ವಾಮೀಜಿ, ಸಾಧಕರಾದ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ. ರವಿ, ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಅವರನ್ನು ಗೌರವಿಸಲಾಯಿತು.

ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರು ಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಕೆ.ಆರ್.ನಗರ ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ, ತಿಂಥಿಣಿ ಬ್ರಿಜ್ ಶಾಖಾ ಮಠದ ಸಿದ್ದರಾಮನಂದಪುರಿ ಸ್ವಾಮಿಜಿ, ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕ ಪ್ರಿಯಕೃಷ್ಣ ಮಾತನಾಡಿದರು.



ಪಿಯುಸಿಯಲ್ಲಿ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಮಾಜಿ ಸಚಿವ ಎಚ್‌.ಎಂ. ರೇವಣ್ಣ, ಶಾಸಕ ಪ್ರಿಯಕೃಷ್ಣ, ಶಿವಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ನಿರಂಜನಾನಂದಪುರಿ ಸ್ವಾಮೀಜಿ, ಸಿದ್ಧರಾಮಾನಂದಪುರಿ ಸ್ವಾಮೀಜಿ ಇದ್ದರು —ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಸಾಹಿತ್ಯ ಸಮ್ಮೇಳನ: ಸಲಹೆಗೆ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮಂಡ್ಯದಲ್ಲಿ ಹಮ್ಮಿಕೊಳ್ಳಲಾಗುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಸಲಹೆ, ಸೂಚನೆ ನೀಡಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಈ ಸಮ್ಮೇಳನದ ಸ್ವರೂಪ ಹೇಗಿರಬೇಕು? ಎಷ್ಟು ಗೋಷ್ಠಿಗಳು, ಯಾವ ಯಾವ ವಿಷಯದ ಬಗ್ಗೆ ಇರಬೇಕು? ಯಾವ ಮಾದರಿಯ ಪುಸ್ತಕಗಳು ಪ್ರಕಟವಾಗಬೇಕು? ಸನ್ಮಾನಕ್ಕೆ ಅರ್ಹರು ಯಾರು? ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ವರೂಪ ಹೇಗಿರಬೇಕು? ಮೊದಲಾದ ವಿಷಯಗಳ ಕುರಿತು ಸಾರ್ವಜನಿಕರು ಅಭಿಪ್ರಾಯ ನೀಡಬಹುದು. ಸಲಹೆ ನೀಡುವವರು ಪೂರ್ಣ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸವನ್ನು ತಿಳಿಸಬೇಕು. ಸೆ.30ರ ಒಳಗೆ ‘ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು 560018’ ಇಲ್ಲಿಗೆ ಕಳುಹಿಸಲು ಕೋರಿದ್ದಾರೆ.

ಮನ ಸೆಳೆದ ಆಜಾದಿ ಕಾ ಜಶ್ನ್



ಬೆಂಗಳೂರು: ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಅನುಬಂಧ ಫೌಂಡೇಶನ್ ವತಿಯಿಂದ ಸ್ಕೌಟ್ಸ್ ಭವನದಲ್ಲಿ ಏರ್ಪಡಿಸಿದ್ದ ಆಜಾದಿ ಕಾ ಜಶ್ನ್ ಕಾರ್ಯಕ್ರಮ ಮನ ಸೆಳೆಯಿತು.

ವಿಶ್ವಕಪ್ ವಿಜೇತ ಅಂಧರ ಭಾರತೀಯ ಕ್ರಿಕೆಟ್ ತಂಡದ ನಾಯಕ ಶೇಖರ್ ನಾಯಕ್ ಉದ್ಘಾಟಿಸಿದರು. ಎಸ್‌ಪಿಜಿ ಮಾಜಿ ಕಮಾಂಡೋ ಸಂಜಯ್, ಬ್ರಿಗೇಡಿಯರ್ ರವಿ ಮುನಿಸ್ವಾಮಿ, ರಾಕೆಟ್ ವಿಜ್ಞಾನಿ ಮಂಜುನಾಥ್, ಅನುಬಂಧ ಫೌಂಡೇಷನ್ ಅಧ್ಯಕ್ಷ ದೇವರಾಜ್ ಆಂಜಿನಪ್ಪ ಇದ್ದರು.

ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದ ಈರಣ್ಣ ಉದೋಶಿ, ಕಾಶ್ಮೀರದ ಗಡಿಯಲ್ಲಿ ಕಾರ್ಯ ನಿರ್ವಹಿಸಿದ್ದ ಜಯರಾಮ್, ಆಪರೇಷನ್ ಪರಾಕ್ರಮ್‌ನಲ್ಲಿ ಭಾಗವಹಿಸಿದ್ದ ಗೋವಿಂದರಾಜು ಸೇರಿದಂತೆ ಭಾರತೀಯ ಸೇನೆಯ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದ ಯೋಧರನ್ನು, ಗಡಿ ಭದ್ರತಾ ಪಡೆಯ ಸೈನಿಕರನ್ನು ಮತ್ತು ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಹೋರಾಡುವ ನಾಗರಿಕ ರಕ್ಷಣಾ ಪಡೆಯ ಯೋಧರನ್ನು ಸನ್ಮಾನಿಸಿ ಗೌರವಿಸಲಾಯಿತು. ಯುಕೆ ನವೀನ್ ಡ್ಯಾನ್ಸ್ ಸ್ಟುಡಿಯೊ ಮಕ್ಕಳು ದೇಶಭಕ್ತಿ ಗೀತೆಗೆ ನೃತ್ಯ ಮಾಡಿದರು.

ಚಿತ್ರಾವಳಿ



ನಗರದ ಪುರಭವನ ಬಳಿಯ ಕೆನರಾ ಬ್ಯಾಂಕ್ ಕಟ್ಟಡವು ತ್ರಿವರ್ಣ ಧ್ವಜದ ಬಣ್ಣಗಳ ವಿದ್ಯುತ್ ದೀಪಾಲಂಕಾರದಿಂದ ಸೋಮವಾರ ರಾತ್ರಿ ಕಂಗೊಳಿಸಿತು



ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೋಗ್ರಾಫಿ (ಮ್ಯಾಪ್) ಆಯೋಜಿಸುತ್ತಿರುವ ಟಿ.ಎಸ್‌.ಸತ್ಯನ್ ಅವರ ಛಾಯಾಚಿತ್ರ ಪ್ರದರ್ಶನದ ಮುನ್ನ ದಿನ ವಿಶೇಷ ಪ್ರದರ್ಶನದ ವೇಳೆ ಟಿ.ಎಸ್‌.ಸತ್ಯನ್ ಅವರ ಪುತ್ರ ನಾಗೇಂದ್ರ ಸತ್ಯನ್ (ಎಡ ಬದಿ) ಹಾಗೂ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಚಿರಂಜೀವಿ ಸಿಂಗ್ (ಬಲ ಬದಿ) ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರಗಳು

ಒಂದೇ ವಿಷಯದಲ್ಲಿ ಎಂಟು ಸಾವಿರ ವಿದ್ಯಾರ್ಥಿಗಳು ಫೇಲ್

800 ಪದವಿ ವಿದ್ಯಾರ್ಥಿಗಳಿಗೆ ಶೂನ್ಯ ಅಂಕ!

• ಡಿ.ಎನ್.ವೆಂಕಟೇಶ್

ಹೊಸಕೋಟೆ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಬಿ.ಕಾಂ ಪದವಿ ಮೂರನೇ ಸೆಮಿಸ್ಟರ್ ವ್ಯಾವಹಾರಿಕ ಸಂಖ್ಯಾಶಾಸ್ತ್ರ (ಬಿಸಿನೆಸ್ ಸ್ಟಾಟಸ್ಟಿಕ್ಸ್) ವಿಷಯದಲ್ಲಿ 800 ವಿದ್ಯಾರ್ಥಿಗಳು ಶೂನ್ಯ ಅಂಕ ಗಳಿಸಿದ್ದಾರೆ.

ವಾರದ ಹಿಂದೆ ಫಲಿತಾಂಶ ಪ್ರಕಟವಾಗಿದ್ದು ಎಂಟು ಸಾವಿರ ವಿದ್ಯಾರ್ಥಿಗಳು ಇದೊಂದೇ ವಿಷಯದಲ್ಲಿ ಅನುತ್ತೀರ್ಣರಾಗಿದ್ದಾರೆ. ಒಂದೇ ವಿಷಯದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಅನುತ್ತೀರ್ಣವಾಗಿರುವುದು ಉತ್ತರ ವಿವಿಯಲ್ಲಿ ಇದೇ ಮೊದಲು ಎನ್ನಲಾಗಿದೆ. ಪರೀಕ್ಷೆ ಬರೆದ 12 ಸಾವಿರ ವಿದ್ಯಾರ್ಥಿಗಳ ಪೈಕಿ ನಾಲ್ಕು ಸಾವಿರ ಅಭ್ಯರ್ಥಿಗಳಷ್ಟೇ (ಶೇ 33) ಉತ್ತೀರ್ಣರಾಗಿದ್ದಾರೆ.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರದ ಜೊತೆಗೆ ಬೆಂಗಳೂರು ನಗರ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಒಟ್ಟು 262 ಪದವಿ ಕಾಲೇಜುಗಳು ಈ ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುತ್ತವೆ. ಇದರಲ್ಲಿ 30 ಸರ್ಕಾರಿ ಪದವಿ ಕಾಲೇಜು ಹೊರತುಪಡಿಸಿದರೆ ಉಳಿದೆಲ್ಲವೂ ಖಾಸಗಿ ಕಾಲೇಜು.

ವಿಶ್ವವಿದ್ಯಾಲಯದ ಯಡವಟ್ಟು ಇದಕ್ಕೆ ಕಾರಣ ಎನ್ನುವುದು ವಿದ್ಯಾರ್ಥಿಗಳ ನೇರ ಆರೋಪ. ಕೋಲಾರದಲ್ಲಿರುವ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಈಚೆಗೆ ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆಯನ್ನೂ ನಡೆಸಿದ್ದಾರೆ.

ಪ್ರಜಾವಾಣಿ ವಿಶೇಷ

‘ಈ ಫಲಿತಾಂಶ ನಮ್ಮನ್ನು ಮಾನಸಿಕವಾಗಿ ಕುಗ್ಗಿಸಿದೆ. ರ‍್ಯಾಂಕ್ ವಿದ್ಯಾರ್ಥಿಗಳೂ ಈ ವಿಷಯದಲ್ಲಿ ತೀರಾ ಕಡಿಮೆ ಅಂಕ ಗಳಿಸಿದ್ದಾರೆ’ ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

ಈ ಅನ್ಯಾಯದ ಬಗ್ಗೆ ಕಾಲೇಜಿನಲ್ಲಿ ಪ್ರಶ್ನಿಸಿದರೆ, ವಿಶ್ವವಿದ್ಯಾಲಯ ಮತ್ತು ಮೌಲ್ಯಮಾಪಕರತ್ತ ಬೆರಳು ತೋರಿಸುತ್ತಾರೆ. ಮೌಲ್ಯಮಾಪನದಲ್ಲಿ ಆಗಿರುವ ಎಡವಟ್ಟು ಸರಿಪಡಿಸಿ ವಿದ್ಯಾರ್ಥಿಗಳಿಗೆ ನ್ಯಾಯ ಕೊಡದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ವಿದ್ಯಾರ್ಥಿಗಳು ಹೇಳುತ್ತಾರೆ. ಸಮಸ್ಯೆ ಬಗೆಹರಿಸಲು ವಿ.ವಿ ಆಡಳಿತಕ್ಕೆ ಆಗಸ್ಟ್ 18 ಗಡುವು ನೀಡಿದ್ದಾರೆ.

ಬಿಸಿನೆಸ್ ಸ್ಟಾಟಸ್ಟಿಕ್ಸ್ ಹೆಚ್ಚು ಅಂಕ ಗಳಿಸುವ ವಿಷಯ. ಈ ಹಿಂದೆ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಗಳಿಸಿದ ನಿದರ್ಶನಗಳಿವೆ. ಕುಲಸಚಿವರ ಜೊತೆ ಚರ್ಚಿಸಿ, ಲೋಪವನ್ನು ಪರಿಶೀಲಿಸಲಾಗುವುದು ಎಂದು ವಿ.ವಿಯ ವಾಣಿಜ್ಯ ವಿಭಾಗದ ಡೀನ್ ಪ್ರೊ. ಮುನಿನಾರಾಯಣಪ್ಪ ಹೇಳುತ್ತಾರೆ.



ಬಿಎನ್‌ಯು ಕೇಂದ್ರ ಕಚೇರಿ

ವಿದ್ಯಾರ್ಥಿಗಳ ವಾದ ಏನು?

- ಎನ್‌ಇಪಿ ಜಾರಿಗೂ ಹಿಂದೆ ಇದ್ದ ಸಿಬಿಸಿಎಸ್ ಪದ್ಧತಿ ಪ್ರಕಾರ ಎರಡು ಮತ್ತು ಮೂರನೇ ಸೆಮಿಸ್ಟರ್‌ನಲ್ಲಿದ್ದ ಪಠ್ಯಕ್ರಮವನ್ನು ಎನ್.ಇ.ಪಿ ಜಾರಿ ನಂತರವೂ ಒಂದೇ ಪತ್ರಿಕೆಯಲ್ಲಿ ಸೇರಿಸಿದ್ದಾರೆ.
- ಹೆಚ್ಚು ಕ್ಲಿಷ್ಟಕರ ಪ್ರಶ್ನೆಪತ್ರಿಕೆ ತಯಾರಿಕೆ
- ಅನನುಭವಿಗಳಿಂದ ಮೌಲ್ಯಮಾಪನ
- ರ‍್ಯಾಂಕ್ ವಿದ್ಯಾರ್ಥಿಗಳಿಗೂ ಅತಿ ಕಡಿಮೆ ಅಂಕ
- ಉತ್ತರ ಪತ್ರಿಕೆಗಳ ನಕಲು ಪ್ರತಿ ನೀಡಬೇಕು
- ಶುಲ್ಕ ಇಲ್ಲದೆ ಮರು ಮೌಲ್ಯಮಾಪನ ಮಾಡಬೇಕು


ಸತ್ಯಮೇವ ಜಯತೇ
ರಾಜಸ್ಥಾನ ಸರ್ಕಾರ
ಸ್ವಾತಂತ್ರ್ಯದ
ಅನ್ನಪೂರ್ಣ
ಮಹೋತ್ಸವ
76ನೇ
ವಾರ್ಷಿಕೋತ್ಸವದ ಸಂದರ್ಭದಲ್ಲಿ
ಯಾರೂ ಹಸಿವಿನಿಂದ ಮಲಗಬಾರದು
ಎಂಬ ಕನಸಿಗೆ ಚಾಲನೆ
ಮುಖ್ಯಮಂತ್ರಿ ನಿಶುಲ್ಕ
ಅನ್ನಪೂರ್ಣ ಫುಡ್ ಪ್ಯಾಕೆಟ್ ಯೋಜನೆ
ಉದ್ಘಾಟಕರು
ಶ್ರೀ ಅಶೋಕ್ ಗೆಹ್ಲೋಟ್
ಮಾನ್ಯ ಮುಖ್ಯಮಂತ್ರಿ, ರಾಜಸ್ಥಾನ
नमक
मसाले
1 ಕೋಟಿಗಿಂತ ಅಧಿಕ
ಕುಟುಂಬಗಳು ಫಲಾನುಭವಿಗಳಾಗಲಿವೆ
25000ಕ್ಕೂ ಹೆಚ್ಚು ವಿತರಣಾ ಕೇಂದ್ರಗಳು
(ನ್ಯಾಯಬೆಲೆ ಅಂಗಡಿಗಳು)
ಸ್ಥಳ: ಬಿರ್ಲಾ ಸಭಾಂಗಣ, ಜೈಪುರ । ಸಮಯ: ಮಧ್ಯಾಹ್ನ 3.30 ಗಂಟೆ
ಈ ಐತಿಹಾಸಿಕ ಕಾರ್ಯಕ್ರಮದ LIVE ವೀಕ್ಷಣೆಗಾಗಿ
ಲಾಗಾನ್
ಸ್ಕ್ಯಾನ್
@AshokGehlot.Rajasthan
ಸಹಕಾರಿ ಇಲಾಖೆ, ರಾಜಸ್ಥಾನ

ಮುಂಬೈ ಧಾರಣೆ

ಶೇಂಗಾ

14-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1870)
ಒಂದು ವಾರದ ಡೆಲಿವರಿ	1865(1865)
ಸೋಯಾ ಕಚ್ಚಾ	885(885)
ಪಾಮ್ ವಾರದ ಡೆಲಿವರಿ	838(843)
ಸೂರ್ಯಕಾಂತಿ ಎಣ್ಣೆ ಕಚ್ಚಾ	875(875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,600 (58,765)
ಬೆಳ್ಳಿ ಕೆ.ಜಿ
70,000 (70,050)

ಆವರಣದಲ್ಲಿ ಶನಿವಾರದ ಧಾರಣೆ

ಷೇರುಪೇಟೆ ವಹಿವಾಟು

79

ಹಿಂದಿನ ಅಂತ್ಯ	65,323
ಇಂದಿನ ಅಂತ್ಯ	65,402

(10:00, 12:00, 14:00, 16:00; 64800, 65000, 65200, 65400)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,428
ಇಂದಿನ ಅಂತ್ಯ	19,434
▲	6
ದಿನದ ಗರಿಷ್ಠ	19,465

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹510
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹520

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹313-562
ದ್ವಿತಳಿ (ಬಿ.ವಿ) ₹300-688

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹139
ಗುಡ್ ಲಾಟ್	₹122.50

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1860 (1860)
ಸೋಯಾ (ರಿಫೈನ್ಡ್)	₹937 (940)
ಸೂರ್ಯಕಾಂತಿ (ರಿಫೈನ್ಡ್)	₹960 (960)
ಪಾಮೋಲಿನ್	₹840 (845)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹7861-7861
ಪುತ್ತೂರು	₹4500-7300
ತಿಪಟೂರು	₹8000-9531
ತುರುವೇಕೆರೆ	₹9400-9500

ರಫ್ತು, ಆಮದು ಇಳಿಕೆ



ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಜುಲೈನಲ್ಲಿ ಶೇಕಡ 15.88ರಷ್ಟು ಇಳಿಕೆ ಕಂಡು ₹2.67 ಲಕ್ಷ ಕೋಟಿಗೆ ತಲುಪಿದೆ. ಜಾಗತಿಕ ಬೇಡಿಕೆ ಇಳಿಕೆ ಕಂಡಿರುವುದು ಹಾಗೂ ಪೆಟ್ರೋಲಿಯಂ, ಹರಳು ಮತ್ತು ಚಿನ್ನಾಭರಣಗಳ ರಫ್ತು ಇಳಿಕೆ ಕಂಡಿರುವುದೇ ರಫ್ತು ಕಡಿಮೆ ಆಗಲು ಕಾರಣ ಎಂದು ವಾಣಿಜ್ಯ ಸಚಿವಾಲಯ ತಿಳಿಸಿದೆ.

ಆಮದು ವಹಿವಾಟು ಸಹ ಜುಲೈನಲ್ಲಿ ಶೇ 17ರಷ್ಟು ಕಡಿಮೆ ಆಗಿದ್ದು, ₹4.39 ಲಕ್ಷ ಕೋಟಿ ಆಗಿದೆ. ರಫ್ತು ಮತ್ತು ಆಮದು ವಹಿವಾಟು ಇಳಿಕೆ ಆಗಿರುವುದರಿಂದ ವ್ಯಾಪಾರ ಕೊರತೆ ಅಂತರವು ₹2.11 ಲಕ್ಷ ಕೋಟಿಯಿಂದ ₹1.71 ಲಕ್ಷ ಕೋಟಿಗೆ ಇಳಿಕೆ ಕಂಡಿದೆ. ಚಿನ್ನದ ಆಮದು ಶೇ 2.7ರಷ್ಟು ಹೆಚ್ಚಾಗಿದ್ದರೆ, ತೈಲ ಆಮದು ಶೇ 23.4ರಷ್ಟು ಇಳಿಕೆ ಕಂಡಿದೆ.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ರಫ್ತು ವಹಿವಾಟು ಶೇ 14.5ರಷ್ಟು, ಆಮದು ವಹಿವಾಟು ಶೇ 13.79ರಷ್ಟು ಇಳಿಕೆ ಆಗಿದೆ.

ಅಮೆರಿಕ, ಯುರೋಪ್ ಸೇರಿದಂತೆ ಹಲವು ದೇಶಗಳಲ್ಲಿ ಆಮದು ವಹಿವಾಟು ಇಳಿಕೆ ಕಂಡಿದೆ. ಈ ವಲಯಗಳಲ್ಲಿ ಆಮದು ನಿರಂತರವಾಗಿ ಇಳಿಕೆ ಕಾಣುತ್ತಿದೆ. ಹೀಗಿದ್ದರೂ 2023–24ನೇ ಹಣಕಾಸು ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ರಫ್ತು ವಹಿವಾಟು ಹಿಂದಿನ ಹಣಕಾಸು ವರ್ಷಕ್ಕಿಂತಲೂ ಹೆಚ್ಚಿಗೆ ಇರುವ ಭರವಸೆ ಇದೆ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಬಿ. ಹೇಳಿದ್ದಾರೆ. 2022–23ರಲ್ಲಿ ಸರಕು ಮತ್ತು ಸೇವೆಗಳ ಒಟ್ಟು ರಫ್ತು ಮೌಲ್ಯವು ₹64.40 ಲಕ್ಷ ಕೋಟಿಯಷ್ಟು ಆಗಿತ್ತು.

₹50ಕ್ಕೆ ಟೊಮೆಟೊ ಮಾರಾಟ

ನವದೆಹಲಿ (ಪಿಟಿಐ): ಟೊಮೆಟೊ ಬೆಲೆಯು ಸಗಟು ಮಾರುಕಟ್ಟೆಯಲ್ಲಿ ತಗ್ಗಿರುವ ಕಾರಣ, ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್) ಹಾಗೂ ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಒಕ್ಕೂಟ (ನಾಫೆಡ್) ಟೊಮೆಟೊವನ್ನು ಮಂಗಳವಾರದಿಂದ ಕೆ.ಜಿ.ಗೆ ₹50ರಂತೆ ಮಾರಾಟ ಮಾಡಬೇಕು ಎಂದು ಕೇಂದ್ರ ಹೇಳಿದೆ. ಎನ್‌ಸಿಸಿಎಫ್ ಹಾಗೂ ನಾಫೆಡ್ ಜುಲೈನಿಂದ ದೆಹಲಿ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಬಿಹಾರದಲ್ಲಿ ರಿಯಾಯಿತಿ ದರಕ್ಕೆ ಮಾರುತ್ತಿವೆ. ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಟೊಮೆಟೊ ಖರೀದಿಸುತ್ತಿವೆ.

ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದ ಹಣಕಾಸು ಸಾಧನೆ

ಐಟಿಸಿ ಲಾಭ ಶೇ 16ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಐಟಿಸಿ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇಕಡ 16.08ರಷ್ಟು ಹೆಚ್ಚಾಗಿ ₹5,180 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭವು ₹4,462 ಕೋಟಿ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಾರ್ಯಾಚರಣೆ ವರಮಾನ ಶೇ6 ರಷ್ಟು ಇಳಿಕೆ ಕಂಡು ₹18,639 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಾರ್ಯಾಚರಣೆ ವರಮಾನ ₹19,831 ಕೋಟಿ ಇತ್ತು.

ಒಟ್ಟು ವರಮಾನ ಶೇ 3.92ರಷ್ಟು ಇಳಿಕೆ ಕಂಡು ₹19,361.78 ಕೋಟಿಯಷ್ಟು ಆಗಿದೆ.

ಮುಖ್ಯಾಂಶಗಳು

- ಸಿಗರೇಟ್ ವರಮಾನ ಶೇ 11.94ರಷ್ಟು ಹೆಚ್ಚಳ
- ಕೃಷಿ ವಹಿವಾಟಿನ ವರಮಾನ ಶೇ 23.56ರಷ್ಟು ಇಳಿಕೆ

ಕಂಪನಿಯ ವೆಚ್ಚದ ಪ್ರಮಾಣ ಶೇ 12.53ರಷ್ಟು ಇಳಿಕೆ ಕಂಡು ₹12,421.77 ಕೋಟಿಗೆ ತಲುಪಿದೆ.

ಎಫ್‌ಎಂಸಿಜಿ ವಹಿವಾಟಿನಿಂದ ಜೂನ್ ತ್ರೈಮಾಸಿಕದಲ್ಲಿ ಬಂದಿರುವ ವರಮಾನದಲ್ಲಿ ಶೇ 13.46ರಷ್ಟು ಹೆಚ್ಚಳ ಆಗಿದ್ದು ₹13,528 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹11,922 ಕೋಟಿ ಇತ್ತು.

ಪ್ರತಿ 10 ಷೇರಿಗೆ ಹೋಟೆಲ್‌ನ 1 ಷೇರು

ಕೋಲ್ಕತ್ತ: ಐಟಿಸಿ ಲಿಮಿಟೆಡ್‌ನ ಪ್ರತಿ 10 ಷೇರಿಗೆ ಐಟಿಸಿ ಹೋಟೆಲ್ಸ್‌ನ 1 ಷೇರು ಸಿಗಲಿದೆ ಎಂದು ಕಂಪನಿಯು ತಿಳಿಸಿದೆ.

ಐಟಿಸಿ ಲಿಮಿಟೆಡ್‌ನಿಂದ ಹೋಟೆಲ್ ವಹಿವಾಟನ್ನು ಪ್ರತ್ಯೇಕಿಸಲು ಆಡಳಿತ ಮಂಡಳಿ ಒಪ್ಪಿಗೆ ನೀಡಿದ್ದು, ಹೊಸದಾಗಿ ರೂಪುಗೊಳ್ಳುವ ಕಂಪನಿಗೆ 'ಐಟಿಸಿ ಹೋಟೆಲ್ಸ್ ಲಿಮಿಟೆಡ್' ಎಂದು ಹೆಸರಿಡಲಾಗಿದೆ.

ವಿಲೀನ ಯೋಜನೆ ಜಾರಿಗೆ ಬಂದ ಬಳಿಕ ಐಟಿಸಿ ಲಿಮಿಟೆಡ್‌ನ ಷೇರುದಾರರು ಐಟಿಸಿ ಹೋಟೆಲ್ಸ್‌ನಲ್ಲಿ ಒಟ್ಟು ಶೇ 60ರಷ್ಟು ಷೇರುಪಾಲು ಹೊಂದಲಿದ್ದಾರೆ. ಇನ್ನುಳಿದ ಶೇ 40ರಷ್ಟು ಐಟಿಸಿ ಬಳಿ ಉಳಿಯಲಿದೆ.

ITC Limited

ಹೋಟೆಲ್ ವರಮಾನ ಶೇ 7.6ರಷ್ಟು ಹೆಚ್ಚಾಗಿ ₹625 ಕೋಟಿಯಷ್ಟು ಆಗಿದೆ. ಹಿಂದಿನ ಅವಧಿಯಲ್ಲಿ ₹580 ಕೋಟಿ ಇತ್ತು ಎಂದು ಮಾಹಿತಿ ನೀಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಶಿವಮೊಗ್ಗ**			27009-39299
ಬಂಟ್ವಾಳ		ಬೆಟ್ಟೆ	50200-53899	ರಾಶಿ	47898-50569
ಕೋಕ	12500-25000	ಗೊರಬಲು	16506-41699	**ಯಲ್ಲಾಪುರ**	
ಹೊಸತು	27500-44500	ರಾಶಿ	42079-52199	ಬಿಳಿಗೋಟು	26469-36020
ಹಳತು	46000-48000	ಸರಕು	57119-81009	ಚಾಲಿ	40799-42869
ಕುಮಟಾ		**ಸಿದ್ದಾಪುರ**		ಕೋಕ	21618-34399
ಚಿಪ್ಪು	32869-35099	ಬಿಳಿಗೋಟು	31699-36549	ಕೆಂಪುಗೋಟು	34218-36969
ಕೋಕ	20869-33599	ಚಾಲಿ	36199-41539	ರಾಶಿ	47230-54599
ಫ್ಯಾಕ್ಟರಿ	14569-23400	ಕೋಕ	29119-35899	ತಟ್ಟಿಬೆಟ್ಟೆ	38100-46999
ಹಳೆಚಾಲಿ	40099-42519	ಕೆಂಪುಗೋಟು			
ಹೊಸಚಾಲಿ	38699-41599		30611-34389		
ಸಾಗರ		ರಾಶಿ	45169-49599		
ಬಿಳಿಗೋಟು	26599-33899	ತಟ್ಟಿಬೆಟ್ಟೆ	39489-49099		
ಚಾಲಿ	31569-39309	**ಶಿರಸಿ**			
ಕೋಕ	28219-35899	ಬೆಟ್ಟೆ	40899-45298		
ಕೆಂಪುಗೋಟು	32399-37899	ಬಿಳಿಗೋಟು	24699-36218		
ರಾಶಿ	36599-49499	ಚಾಲಿ	38000-43099		
ಸಿಪ್ಪೆಗೋಟು	13899-23869	ಕೆಂಪುಗೋಟು			

ಕಾಫಿ ಮೂಡಿಗೆರೆ

ಮುದ್ರೆಮನೆ (50 ಕೆ.ಜಿಗೆ)	
ಎಪಿ	14000
ಎಸಿ	7140
ಆರ್‌ಪಿ	10200
ಆರ್‌ಸಿ	6230

ಮಗನ ಆತ್ಮಹತ್ಯೆಯ ಮರುದಿನ ತಂದೆ ಸಾವು

ತಮಿಳುನಾಡಿನಲ್ಲಿ ಘಟನೆ ● 'ನೀಟ್'ನಲ್ಲಿ ಫೇಲ್ ● ರಾಜ್ಯಪಾಲರ ವಿರುದ್ಧ ಸಿ.ಎಂ ಸ್ಟಾಲಿನ್ ಟೀಕೆ

ಪ್ರಜಾವಾಣಿ ವಾರ್ತೆ

ಚೆನ್ನೈ: ವೈದ್ಯನಾಗಬೇಕೆಂಬ ಹಂಬಲವುಳ್ಳ 19 ವರ್ಷದ ವಿದ್ಯಾರ್ಥಿಯೊಬ್ಬರು ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಎರಡನೇ ಬಾರಿಯೂ ವಿಫಲವಾಗಿದ್ದಕ್ಕೆ ಆತ್ಮಹತ್ಯೆಗೆ ಶರಣಾಗಿದ್ದು, ಮಗ ಮೃತಪಟ್ಟ ಒಂದು ದಿನದ ಬಳಿಕ ತಂದೆಯೂ ಮೃತಪಟ್ಟ ಘಟನೆ ಆಘಾತಕ್ಕೆ ಎಡೆ ಮಾಡಿಕೊಟ್ಟಿದೆ.

ನೀಟ್ ಪರೀಕ್ಷೆ ಬರೆದಿದ್ದ ಜಗದೀಶ್ವರನ್ (19) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಶನಿವಾರ ಸಾವಿಗೀಡಾದ್ದ ಅವರ ಅಂತ್ಯಕ್ರಿಯೆ ಭಾನುವಾರ ನಡೆದಿತ್ತು. ಇದಾದ ಒಂದು ದಿನದ ಬಳಿಕ ಜಗದೀಶ್ವರನ್ ಅವರ ತಂದೆ, ಛಾಯಾಗ್ರಾಹಕ ಸೆಲ್ವಶೇಖರ್ ಮೃತದೇಹ ಸೋಮವಾರ ಬೆಳಿಗ್ಗೆ ಚೆನ್ನೈನ ತಂಬರಂ ಬಳಿಯ ಅವರ ನಿವಾಸದಲ್ಲಿ ಪತ್ತೆಯಾಗಿದೆ.

ಸೋಮವಾರ ಬೆಳಿಗ್ಗೆ ಕೆಲಸದಾಕೆ ಮನೆಬಾಗಿಲು ಬಡಿದಾಗ ತೆರೆಯದಿದ್ದನ್ನು ಗಮನಿಸಿ ನೆರೆಹೊರೆಯವರ ಸಹಾಯ ಕೇಳಿದ್ದಾಳೆ. ಬಳಿಕ ಬಾಗಿಲು ಒಡೆದು ನೋಡಿದಾಗ ಸೆಲ್ವಶೇಖರ್ ಮೃತದೇಹ ದೊರೆತಿದೆ. ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಹಿರಿಯ ಪೊಲೀಸ್ ಅಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ತಂದೆ– ತಾಯಿ ವಿಚ್ಛೇದನ ಪಡೆದ ಬಳಿಕ ಜಗದೀಶ್ವರನ್ ತಂದೆಯ ಜತೆಗೆ ವಾಸವಿದ್ದರು.

'ಜಗದೀಶ್ವರನ್ ಬುದ್ಧಿವಂತ ವಿದ್ಯಾರ್ಥಿಯಾಗಿದ್ದ. ಅವನು ವೈದ್ಯನಾಗಬೇಕೆಂಬ ಆಸೆ ಹೊಂದಿದ್ದ. ಎರಡನೇ ಬಾರಿ ಬರೆದ ನೀಟ್ ಪರೀಕ್ಷೆಯಲ್ಲಿ ಅವನು 400 ಅಂಕಗಳಿಸಿದ್ದ. ಆದರೂ ಅವನಿಗೆ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಸೀಟು ದೊರೆತಿರಲಿಲ್ಲ. ಆತ 12ನೇ ತರಗತಿಯಲ್ಲೂ ಹೆಚ್ಚಿನ ಅಂಕಗಳಿಸಿದ್ದ. ಆದರೆ, ಅವನಿಗೆ ನೀಟ್ ಪರೀಕ್ಷೆಯಲ್ಲಿ ನಿರೀಕ್ಷಿತ ಅಂಕ ಗಳಿಸಲು ಸಾಧ್ಯವಾಗಲಿಲ್ಲ. ನಾವು ಯಾರನ್ನು ದೂರುವುದು? 'ನೀಟ್'ಗಾಗಿ ಇನ್ನೂ ಎಷ್ಟು ವಿದ್ಯಾರ್ಥಿಗಳು ಸಾಯಬೇಕು' ಎಂದು ಜಗದೀಶ್ವರನ್ ಸ್ನೇಹಿತ ಫೈಜುದ್ದೀನ್ ಪ್ರಶ್ನಿಸಿದ್ದಾರೆ.

ತಮಿಳುನಾಡಿನಲ್ಲಿ 'ನೀಟ್' ಪರೀಕ್ಷೆಯ ವಿಷಯವು ನಿರಂತರವಾಗಿ ವಿವಾದಕ್ಕೀಡಾಗಿದೆ. ಈ ಪರೀಕ್ಷೆಯು ಸರ್ಕಾರಿ ಶಾಲೆಗಳಿಂದ ಬಂದ ಹಾಗೂ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳ ಪಾಲಿಗೆ 'ವಿರೋಧಿ'ಯಾಗಿದ್ದು ತಾರತಮ್ಯದಿಂದ ಕೂಡಿದೆ ಎಂದೇ ಗ್ರಹಿಸಲಾಗಿದೆ. 2017ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಒಟ್ಟಾರೆ ಎರಡು ಡಜನ್‌ನಷ್ಟು ವಿದ್ಯಾರ್ಥಿಗಳು ಸಾವಿಗೀಡಾಗಿದ್ದಾರೆ.

ಆತ್ಮಹತ್ಯೆ ಬೆನ್ನಲ್ಲೇ ರಾಷ್ಟ್ರಪತಿ ಮುರ್ಮುಗೆ ಪತ್ರ

'ನೀಟ್' ಕಾರಣಕ್ಕಾಗಿ ರಾಜ್ಯದಲ್ಲಿ ಇದುವರೆಗೆ 16 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಉಲ್ಲೇಖಿಸಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದು, 'ನೀಟ್' ವಿರೋಧಿ ಮಸೂದೆಗೆ ಶೀಘ್ರ ಒಪ್ಪಿಗೆ ನೀಡಬೇಕೆಂದು ಸೋಮವಾರ ಕೋರಿದ್ದಾರೆ.

ತಮಿಳುನಾಡು ಸ್ನಾತಕಪೂರ್ವ ವೈದ್ಯಕೀಯ ಪದವಿ ಕೋರ್ಸ್‌ಗಳ ಮಸೂದೆ–2021ಕ್ಕೆ ಅನುಮೋದನೆ ನೀಡುವಲ್ಲಿ ವಿಳಂಬವಾಗಿರುವುದರಿಂದ ಅನೇಕ ದುರದೃಷ್ಟಕರ ಪರಿಣಾಮಗಳನ್ನು ಎದುರಿಸಬೇಕಾಗಿದೆ ಎಂದಿರುವ ಸ್ಟಾಲಿನ್, ರಾಷ್ಟ್ರಪತಿ ಅವರು ಮಸೂದೆಗೆ ತಕ್ಷಣವೇ ಒಪ್ಪಿಗೆ ನೀಡುವಂತೆ ಪತ್ರದಲ್ಲಿ ಒತ್ತಾಯಿಸಿದ್ದಾರೆ.

'ನೀಟ್' ಪರೀಕ್ಷೆಯ ಒತ್ತಡದಿಂದಾಗಿ ಆಗಸ್ಟ್ 12ರಂದು ವಿದ್ಯಾರ್ಥಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದರು. ಮರುದಿನವೇ ಆಗಸ್ಟ್ 13ರಂದು ಮಗನ ಸಾವು ಸಹಿಸಲಾಗದೇ ಆತನ ತಂದೆಯೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನು ಪತ್ರದಲ್ಲಿ ಸ್ಟಾಲಿನ್ ಒತ್ತಿ ಹೇಳಿದ್ದಾರೆ. ಮಸೂದೆಗೆ ಅಂಕಿತ ದೊರೆತಿದ್ದರೆ, ರಾಜ್ಯದಲ್ಲಿ ನೀಟ್ ಸಂಬಂಧಿತ ಆತ್ಮಹತ್ಯೆಯನ್ನು ತಡೆಯಬಹುದಾಗಿತ್ತು ಎಂದೂ ಅವರು ಹೇಳಿದ್ದಾರೆ.

ರಾಜ್ಯಪಾಲರ ಚಹಾಕೂಟಕ್ಕೆ ಬಹಿಷ್ಕಾರ: ಸ್ಟಾಲಿನ್

ಚೆನ್ನೈ (ಪಿಟಿಐ): ರಾಜ್ಯಪಾಲ ಆರ್.ಎನ್. ರವಿ ಅವರ 'ನೀಟ್' ಪರ ನಿಲುವನ್ನು ತೀವ್ರವಾಗಿ ಖಂಡಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು, ಆಗಸ್ಟ್ 15ರ ಸ್ವಾತಂತ್ರ್ಯ ದಿನದಂದು ರಾಜ್ಯಪಾಲರು ಏರ್ಪಡಿಸಿರುವ ಚಹಾ ಕೂಟವನ್ನು ನಮ್ಮ ಸರ್ಕಾರವು ಬಹಿಷ್ಕರಿಸುತ್ತದೆ ಎಂದು ಸೋಮವಾರ ಹೇಳಿದ್ದಾರೆ.

ಎರಡು ದಿನಗಳ ಹಿಂದೆ, ರವಿ ಅವರು, 'ನನಗೆ ಅಧಿಕಾರವಿದ್ದಿದ್ದರೆ ರಾಜ್ಯದಲ್ಲಿ 'ನೀಟ್' ಪರೀಕ್ಷೆಗೆ ವಿನಾಯ್ತಿ ಕೋರಿರುವ ತಮಿಳುನಾಡು ವಿಧಾನಸಭೆಯ ಮಸೂದೆಗೆ ಎಂದಿಗೂ ಒಪ್ಪಿಗೆ ನೀಡುವುದಿಲ್ಲ ಎಂದು ಹೇಳಿದ್ದರು.

ಚಹಾಕೂಟ ರದ್ದು: ಸ್ಟಾಲಿನ್ ಅವರ ಬಹಿಷ್ಕಾರದ ಹೇಳಿಕೆಯ ಕೆಲವು ಗಂಟೆಗಳ ಬಳಿಕ ರಾಜ್ಯಪಾಲ ರವಿ ಅವರು, ರಾಜಭವನದಲ್ಲಿ ಸ್ವಾತಂತ್ರ್ಯದಿನದ ನಿಮಿತ್ತ ಆಯೋಜಿಸಿದ್ದ 'ಚಹಾಕೂಟ'ವನ್ನು ರದ್ದುಪಡಿಸಿದ್ದಾರೆ.

ಅಂದು ಭಾರಿ ಮಳೆಯಾಗುವುದಾಗಿ ರಾಜ್ಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದ್ದರಿಂದ 'ಚಹಾಕೂಟ'ವನ್ನು ರದ್ದುಪಡಿಸಲಾಗಿದೆ ಎಂದು ರಾಜಭವನದ ಮೂಲಗಳು ತಿಳಿಸಿವೆ.

ತರಕಾರಿ ತುಟ್ಟಿ, ಜಿಗಿದ ಹಣದುಬ್ಬರ

ಒಂದನೇ ಪುಟದಿಂದ

ಜೂನ್ ತಿಂಗಳಲ್ಲಿ ಹಣದುಬ್ಬರ ಶೇ 4.87ರಷ್ಟು ಇತ್ತು. 2022ರ ಏಪ್ರಿಲ್‌ನಲ್ಲಿ ಶೇ 7.79ರಷ್ಟು ಹಣದುಬ್ಬರ ದಾಖಲಾಗಿತ್ತು. ಅದಾದ ನಂತರದ ಗರಿಷ್ಠ ಪ್ರಮಾಣ ಈ ವರ್ಷದ ಜುಲೈನಲ್ಲಿ ದಾಖಲಾಗಿದೆ.

ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ಶೇ 11.51ರಷ್ಟು ಆಗಿದೆ. ಇದು ಜೂನ್‌ನಲ್ಲಿ ಶೇ 4.55ರಷ್ಟು ಮಾತ್ರ ಇತ್ತು ಎಂದು ಎನ್‌ಎಸ್‌ಒ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

> **ರೆಪೊ ದರದಲ್ಲಿ ಇನ್ನೂ ಶೇ 0.25ರಷ್ಟು ಹೆಚ್ಚಳವು ದೂರದ ಸಾಧ್ಯತೆಯಾಗಿ ಕಾಣುತ್ತಿದೆ. ಮುಂದಿನ 12 ತಿಂಗಳವರೆಗೆ ರೆಪೊ ದರ ಇಳಿಕೆಯ ಸಾಧ್ಯತೆ ಇಲ್ಲ**
> **ಸುಜನ್ ಹಜ್ರಾ,** ಮುಖ್ಯ ಅರ್ಥಶಾಸ್ತ್ರಜ್ಞ, ಆನಂದ್ ರಾಠಿ

ಎಚ್ಚರಿಸಿದ್ದ ಆರ್‌ಬಿಐ: ಈಚೆಗೆ ನಡೆದ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯ ನಂತರ, ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣದುಬ್ಬರ ಪ್ರಮಾಣದಲ್ಲಿ ಗಣನೀಯ ಏರಿಕೆ ಆಗುವ ಸಾಧ್ಯತೆ ಇದೆ ಎಂದು ಎಚ್ಚರಿಸಿದ್ದರು. ಅಲ್ಲದೆ, ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕಕ್ಕೆ ಹಣದುಬ್ಬರದ ಅಂದಾಜನ್ನು ಆರ್‌ಬಿಐ ಶೇ 6.2ಕ್ಕೆ ಹೆಚ್ಚು ಮಾಡಿತ್ತು.

ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಹೆಚ್ಚುತ್ತ ಸಾಗಿದರೆ ಇನ್ನಷ್ಟು ಬಿಗಿ ಹಣಕಾಸು ನಿಲುವನ್ನು ತೆಗೆದುಕೊಳ್ಳುವ ಸೂಚನೆಯನ್ನು ಆರ್‌ಬಿಐ ನೀಡಿದೆ. ಜುಲೈ ತಿಂಗಳ ಹಣದುಬ್ಬರ ಪ್ರಮಾಣವನ್ನು ಗಮನಿಸಿದರೆ, ಎರಡನೆ ತ್ರೈಮಾಸಿಕದಲ್ಲಿ ಹಣದುಬ್ಬರ ದರವು ಆರ್‌ಬಿಐ ಅಂದಾಜಿಸಿರುವ ಮಟ್ಟಕ್ಕಿಂತಲೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರ ಪ್ರಮಾಣವು ಸತತ ನಾಲ್ಕನೆಯ ತಿಂಗಳಿನಲ್ಲಿಯೂ ಶೂನ್ಯಕ್ಕಿಂತ ಕಡಿಮೆ ಮಟ್ಟದಲ್ಲಿ ಉಳಿದಿದೆ. ಜುಲೈನಲ್ಲಿ ಶೇಕಡ (–)1.36ರಷ್ಟು ಸಗಟು ಹಣದುಬ್ಬರ ದಾಖಲಾಗಿದೆ.

ಜೂನ್‌ನಲ್ಲಿ ಶೇ (–)4.12ರಷ್ಟು ಸಗಟು ಹಣದುಬ್ಬರ ದಾಖಲಾಗಿತ್ತು. ಇದಕ್ಕೆ ಹೋಲಿಸಿದರೆ ಜುಲೈನಲ್ಲಿ ಸಗಟು ಹಣದುಬ್ಬರ ಹೆಚ್ಚಾಗಿದೆ. ಆಹಾರ ವಸ್ತುಗಳು, ಅದರಲ್ಲೂ ಮುಖ್ಯವಾಗಿ ತರಕಾರಿಗಳ ಸಗಟು ಬೆಲೆಯು ಶೇ 62.12ರಷ್ಟು ಹೆಚ್ಚಾಗಿದ್ದು ಸಗಟು ಹಣದುಬ್ಬರದ ಪ್ರಮಾಣ ಹೆಚ್ಚಾಗಲು ಕಾರಣ. ಹಿಂದಿನ ವರ್ಷದ ಜುಲೈನಲ್ಲಿ ಸಗಟು ಹಣದುಬ್ಬರ ದರವು ಶೇ 14.07ರಷ್ಟು ಇತ್ತು.

ಎಂವಿಎಯಲ್ಲಿ ಗೊಂದಲವಿಲ್ಲ: ಶರದ್ ಪವಾರ್ ಸ್ಪಷ್ಟನೆ

ಬಾರಾಮತಿ (ಪಿಟಿಐ): ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರನ್ನು ಪುಣೆಯಲ್ಲಿ ಭೇಟಿ ಮಾಡಿರುವುದಕ್ಕೆ ರಾಜ್ಯದಲ್ಲಿನ 'ಮಹಾ ವಿಕಾಸ ಆಘಾಡಿ'ಯಲ್ಲಿ (ಎಂವಿಎ) ಯಾವುದೇ ಗೊಂದಲಗಳು ಇಲ್ಲ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಸೋಮವಾರ ಸ್ಪಷ್ಟಪಡಿಸಿದ್ದಾರೆ.

'ಎಂವಿಎ ಒಗ್ಗಟ್ಟಿನಿಂದ ಇದೆ ಮತ್ತು ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ ಮುಂದಿನ ಸಭೆಯನ್ನು ಆಗಸ್ಟ್ 31 ಮತ್ತು ಸೆಪ್ಟೆಂಬರ್ 1ರಂದು ಮುಂಬೈನಲ್ಲಿ ಯಶಸ್ವಿಯಾಗಿ ಮುನ್ನಡೆಸುವ ಹೊಣೆಯನ್ನು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ, ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಮತ್ತು ನಾನು ಹೊತ್ತಿದ್ದೇವೆ. ಎಂವಿಎಯಿಂದ ಹೊರಹೋಗಿ ಬಿಜೆಪಿ ಜೊತೆ ಕೈಜೋಡಿಸಿರುವ ಬಣದ ಜೊತೆ ಎನ್‌ಸಿಪಿ ಸಹಯೋಗ ಹೊಂದಿಲ್ಲ' ಎಂದು ಇದೇ ವೇಳೆ ಸ್ಪಷ್ಟಪಡಿಸಿದರು.

ಮೇಲಿಂದ ಮೇಲೆ ಶರದ್ ಪವಾರ್ ತಮ್ಮ ಸಂಬಂಧಿ ಅಜಿತ್ ಪವಾರ್ ಅವರನ್ನು ಭೇಟಿಯಾಗುತ್ತಿರುವ ಕುರಿತು ಶಿವಸೇನಾ (ಯುಬಿಟಿ) ತನ್ನ ಮುಖವಾಣಿ ಪತ್ರಿಕೆ ಸಾಮ್ನಾದಲ್ಲಿ ಅಸಮಾಧಾನ ವ್ಯಕ್ತಪಡಿಸಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಲು ಅವರು ನಿರಾಕರಿಸಿದರು.

ಮಹಾರಾಷ್ಟ್ರದ ಎನ್‌ಸಿಪಿ ಮುಖ್ಯಸ್ಥ ಜಯಂತ್ ಪಾಟೀಲ್ ಅವರು ಬಿಜೆಪಿ ಜೊತೆ ಕೈಜೋಡಿಸುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಜಯಂತ್ ಅವರ ಸಹೋದರನಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ನೀಡಿದೆ. ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಈ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ನಮ್ಮ ಇತರ ಸಹೋದ್ಯೋಗಿಗಳ ವಿಚಾರದಲ್ಲೂ ಈ ರೀತಿಯ ತಂತ್ರ ಪ್ರಯೋಗಿಸಲಾಗಿತ್ತು. ಹಾಗಾಗಿ ಅವರು ಬಿಜೆಪಿ ಜೊತೆ ಕೈಜೋಡಿಸಿದರು. ಆದರೆ, ಜಯಂತ್ ಹಾಗೆ ಮಾಡುವುದಿಲ್ಲ. ಸೈದ್ಧಾಂತಿಕ ಬದ್ಧತೆ ವಿಚಾರದಲ್ಲಿ ಅವರಿಗಿರುವ ಸ್ಪಷ್ಟತೆ ಕುರಿತು ನನಗೆ ವಿಶ್ವಾಸವಿದೆ' ಎಂದರು.

ಈಚೆಗೆ ಕೊನೆಗೊಂಡ ಸಂಸತ್ ಅಧಿವೇಶನದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರು ಎರಡು ಗಂಟೆಗೂ ಹೆಚ್ಚು ಕಾಲ ಮಾತನಾಡಿದರು. ಆದರೆ, ಮಣಿಪುರದ ವಿಚಾರವಾಗಿ ಕೆಲವೇ ನಿಮಿಷ ಮಾತನಾಡಿದರು. ಮಣಿಪುರ ಜನರಿಗೆ ಭರವಸೆ ನೀಡುವ ನಿಟ್ಟಿನಲ್ಲಿ ಅವರು ಏನನ್ನೂ ಮಾತನಾಡಲಿಲ್ಲ. ಹೀಗಾಗಿ ಯಾವುದೇ ಗುರುತರವಾದ ಫಲಿತಾಂಶವೂ ಸಿಗಲಿಲ್ಲ' ಎಂದು ಹೇಳಿದರು.

ಸಂಬಂಧಿಗಳ ರಹಸ್ಯ ಭೇಟಿ ಅಗತ್ಯವೇನಿದೆ: 'ಇಬ್ಬರು ನಾಯಕರು ಸಂಬಂಧಿಗಳಾಗಿರುವಾಗ ರಹಸ್ಯವಾಗಿ ಭೇಟಿ ಮಾಡುವ ಅಗತ್ಯವೇನಿರುತ್ತದೆ' ಎಂದು ಮಹಾರಾಷ್ಟ್ರದಲ್ಲಿನ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರು ಸೋಮವಾರ ಪ್ರಶ್ನಿಸಿದ್ದಾರೆ.

'ಈ ಬೆಳವಣಿಗೆಗಳ ಕುರಿತು ನಾವು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಮಾಹಿತಿ ನೀಡಿದ್ದೇವೆ. ಪಕ್ಷದ ಹೈಕಮಾಂಡ್ ಕೂಡ ಈ ಎಲ್ಲಾ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಮುಂಬೈನಲ್ಲಿ ನಡೆಯಲಿರುವ 'ಇಂಡಿಯಾ'ದ ಮುಂದಿನ ಸಭೆಯಲ್ಲಿ ಈ ಕುರಿತು ಕುರಿತು ಚರ್ಚಿಸಲಿದ್ದೇವೆ' ಎಂದರು.

'ಅಜಿತ್ ಸಿ.ಎಂ ಸಾಧ್ಯತೆ'

ಗಡಚಿರೋಲಿ (ಪಿಟಿಐ): ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ನಾಯಕ ಹಾಗೂ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಏಕನಾಥ್ ಶಿಂದೆ ಬದಲಿಗೆ ಮುಖ್ಯಮಂತ್ರಿ ಆಗಬಹುದು ಎಂದು ಮಹಾರಾಷ್ಟ್ರದ ವಿರೋಧ ಪಕ್ಷದ ನಾಯಕ ವಿಜಯ್ ವಾಡೆಟ್ಟಿವಾರ್ ಸೋಮವಾರ ಹೇಳಿದ್ದಾರೆ.

ಗಡಿಚಿರೋಲಿ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಾಡೆಟ್ಟಿವಾರ್, ಶಿಂದೆ ಅವರನ್ನು ಆಸ್ಪತ್ರೆಗೆ ದಾಖಲಿಸಲು ಮತ್ತು ನಂತರ ಆರೋಗ್ಯ ಕಾರಣಕ್ಕಾಗಿ ಅವರನ್ನು ಬದಲಾಯಿಸಲು ಸಿದ್ಧತೆಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಅಜಿತ್ ಪವಾರ್ ಇತ್ತೀಚೆಗೆ ಪುಣೆಯಲ್ಲಿ ಭೇಟಿಯಾಗಿದ್ದರು. ಶಿಂದೆ ಬದಲಾವಣೆ ಸಾಧ್ಯತೆಯ ಊಹಾಪೋಹಗಳ ನಡುವೆ ಹಾಗೂ ಅಜಿತ್ ಅವರ ನಿಷ್ಠಾವಂತ ಶಾಸಕರ ನಡುವಿನ ಮಾತುಕತೆ ಗಮನದಲ್ಲಿಟ್ಟುಕೊಂಡು ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬಹುದು ಎಂದು ತಿಳಿಸಿದ್ದಾರೆ.



ತಮಿಳುನಾಡಿನ ಮಲ್ಲಪುರಂನಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಗಾಳಿಪಟ ಉತ್ಸವದ ಮೂರನೇ ದಿನವಾದ ಸೋಮವಾರ ಜನರು ವಿವಿಧ ಪ್ರಾಣಿಗಳ ಆಕಾರದ ಗಾಳಿಪಟಗಳನ್ನು ಹಾರಿಸಿದರು –ಎಎಫ್‌ಪಿ ಚಿತ್ರ

ದೊರೆಸ್ವಾಮಿ ಎಲ್‌ಐಸಿ ಎಂ.ಡಿ.

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ವ್ಯವಸ್ಥಾಪಕ ನಿರ್ದೇಶಕ ಆಗಿ ಆರ್. ದೊರೆಸ್ವಾಮಿ ಅವರನ್ನು ಕೇಂದ್ರ ಸರ್ಕಾರ ನೇಮಿಸಿದೆ ಎಂದು ಕಂಪನಿಯು ಸೋಮವಾರ ತಿಳಿಸಿದೆ.

ದೊರೆಸ್ವಾಮಿ ಅವರು ಸದ್ಯ ಮುಂಬೈನ ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದಾರೆ.

ಸೆಪ್ಟೆಂಬರ್ 1ರಂದು ಅವರು ಅಧಿಕಾರ ಸ್ವೀಕರಿಸಲಿದ್ದು, 2026ರ ಆಗಸ್ಟ್ 31ರವರೆಗೆ ಅಧಿಕಾರದಲ್ಲಿ ಇರಲಿದ್ದಾರೆ ಎಂದು ಹೇಳಿದೆ.

ಅಶಿಸ್ತು: ಆ.18ರಂದು ಅಧೀರ್ ರಂಜನ್ ಚೌಧರಿ ವಿಚಾರಣೆ

ನವದೆಹಲಿ (ಪಿಟಿಐ): ಬಿಜೆಪಿಯ ಸಂಸದ ಸುನಿಲ್ ಕುಮಾರ್ ಸಿಂಗ್ ನೇತೃತ್ವದ ಲೋಕಸಭೆಯ ಹಕ್ಕುಬಾಧ್ಯತಾ ಸಮಿತಿಯು ಶುಕ್ರವಾರ ಸಭೆ ಸೇರಲಿದ್ದು, ಸದನದಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು 'ಅಶಿಸ್ತು' ತೋರಿದ ದೂರಿನ ವಿಚಾರಣೆ ನಡೆಸಲಿದೆ.

ಚೌಧರಿ ಅವರನ್ನು ಸ್ಪೀಕರ್ ಅವರು ಆ.10ರಂದು ಅಮಾನತುಪಡಿಸಿದ್ದರು. ಉದ್ದೇಶಪೂರ್ವಕ ಮತ್ತು ಪುನರಾವರ್ತಿತ ಅಶಿಸ್ತಿನ ವರ್ತನೆಯಿಂದ ಚೌಧರಿ ಅವರು ಪೀಠಕ್ಕೆ ಅಗೌರವ ತೋರಿದ್ದಾರೆ ಎಂದು ಸದನ ಅಂದು ನಿಲುವಳಿ ಅಂಗೀಕರಿಸಿತ್ತು.

ಚೌಧರಿ ಮತ್ತು ಬಿಜೆಪಿ ಸದಸ್ಯ ವೀರೇಂದ್ರ ಸಿಂಗ್ ಅವರ ವರ್ತನೆಗೆ ಸ್ಪೀಕರ್ ಓಂ ಬಿರ್ಲಾ ಆಕ್ಷೇಪಿಸಿದ್ದರು. ಸಿಂಗ್ ಅವರು ನಂತರ ಸ್ಪೀಕರ್ ಅವರ ಕ್ಷಮೆ ಕೋರಿದ್ದರು. ಅಮಾನತು ಕೋರಿ ನಿರ್ಣಯ ಮಂಡಿಸಿದ್ದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ಚೌಧರಿ ಅವರು ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಇತರೆ ಸಚಿವರ ಭಾಷಣಕ್ಕೆ ಪದೇ ಪದೇ ಅಡ್ಡಿಪಡಿಸುತ್ತಿದ್ದರು' ಎಂದು ಹೇಳಿದ್ದರು.

ಹಿಮಾಚಲ ಪ್ರದೇಶ: 621 ರಸ್ತೆಗಳ ಸಂಪರ್ಕ ಕಡಿತ • ಅವಶೇಷಗಳಡಿ ಇನ್ನೂ ಹಲವರು ಸಮಾಧಿ ಆಗಿರುವ ಶಂಕೆ

ಭಾರಿ ಮಳೆ, ಭೂ ಕುಸಿತ; 51 ಜನರ ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆ ಮತ್ತು ಭೂಕುಸಿತದಿಂದ 51 ಜನರು ಮೃತಪಟ್ಟಿದ್ದಾರೆ. ಶಿಮ್ಲಾದಲ್ಲಿ ಭೂ ಕುಸಿತ ಸಂಭವಿಸಿದ ಎರಡು ಕಡೆಗಳಿಂದ 14 ಜನರ ಮೃತದೇಹಗಳನ್ನು ಹೊರತೆಗೆಯಲಾಗಿದೆ.

ಶಿಮ್ಲಾದ ದೇವಾಲಯದ ಅವಶೇಷಗಳಡಿ ಸಿಲುಕಿ ಐದು ಜನರು ಸಮಾಧಿಯಾಗಿದ್ದಾರೆ. ಅವಶೇಷಗಳಡಿ ಇನ್ನಷ್ಟು ಜನರು ಸಿಲುಕಿರುವ ಶಂಕೆ ಇದ್ದು, ರಕ್ಷಣಾ ಕಾರ್ಯ ಸೋಮವಾರ ಭರದಿಂದ ಸಾಗಿತ್ತು.

ಮಂಡಿ ಜಿಲ್ಲೆಯಲ್ಲಿ ಮಳೆ ಸಂಬಂಧಿ ಅವಘಡಗಳಿಂದಾಗಿ 19 ಜನರು ಮೃತಪಟ್ಟಿದ್ದಾರೆ ಎಂದು ಜಿಲ್ಲಾಧಿಕಾರಿ ಅರಿಂದಮ್ ಚೌಧರಿ ತಿಳಿಸಿದ್ದಾರೆ. ಸೋಲನ್ ಜಿಲ್ಲೆಯ ಜಾದೋನ್ ಗ್ರಾಮದಲ್ಲಿ ಭಾನುವಾರ ರಾತ್ರಿ ಸಂಭವಿಸಿದ ಮೇಘಸ್ಫೋಟದಿಂದಾಗಿ ಒಂದೇ ಕುಟುಂಬದ ಏಳು ಜನರು ಸೇರಿ 11 ಜನರು ಅಸುನೀಗಿದ್ದಾರೆ.

ರಾಜ್ಯದಲ್ಲಿ ಭಾನುವಾರದಿಂದ ಸುರಿದ ಮಹಾಮಳೆಯು ಭಾರಿ ಹಾನಿ ಉಂಟುಮಾಡಿದೆ. ಅಲ್ಲಲ್ಲಿ ಭೂಕುಸಿತ ಉಂಟಾಗಿ, ಪ್ರಮುಖ ರಸ್ತೆಗಳು ಹಾನಿಗೊಂಡಿದ್ದು, ಸಂಚಾರ ಬಂದ್ ಆಗಿದೆ. ಹಲವು ಮನೆಗಳು ನೆಲಸಮಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿಮ್ಲಾದ ಸಮ್ಮರ್ ಹಿಲ್ ಪ್ರದೇಶದ ಶಿವ ದೇವಾಲಯ ನೆಲಸಮಗೊಂಡಿದ್ದು, ಅವಶೇಷಗಳಡಿ ಇನ್ನಷ್ಟು ಜನರು ಸಿಲುಕಿರುವ ಶಂಕೆ ಇದೆ. ಶ್ರಾವಣದ ವಿಶೇಷ ಪೂಜೆ ಸಲ್ಲಿಸಲು ಭಕ್ತರು ಭಾರಿ ಸಂಖ್ಯೆಯಲ್ಲಿ ಸೇರಿದ್ದಾಗಲೇ ಈ ದುರಂತ ಸಂಭವಿಸಿದೆ. ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಅವರು ದುರಂತ ನಡೆದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಮಳೆಯಿಂದ ರಾಜ್ಯ ರಾಜಧಾನಿಯಲ್ಲಿ ಮತ್ತೊಂದು ಭೂಕುಸಿತವು ಫಗ್ಲಿ ಪ್ರದೇಶದಲ್ಲಿ ಸಂಭವಿಸಿದೆ. ಇದರಲ್ಲಿ ಹಲವು ಮನೆಗಳು ಮಣ್ಣು ಮತ್ತು ಕೆಸರಿನ ಅಡಿ ಹೂತುಹೋಗಿವೆ. ಐದು ಮಂದಿಯ ಮೃತದೇಹಗಳನ್ನು ಅವಶೇಷಗಳಿಂದ ಹೊರತೆಗೆಯಲಾಗಿದ್ದು, 17 ಜನರನ್ನು ರಕ್ಷಿಸಲಾಗಿದೆ ಎಂದು ಶಿಮ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂಜೀವ್ ಕುಮಾರ್ ಗಾಂಧಿ ತಿಳಿಸಿದ್ದಾರೆ.

ಹಲವು ಮಂದಿ ಸಮಾಧಿಯಾಗಿರುವ ಶಂಕೆ: ಸಮ್ಮರ್ ಹಿಲ್ ಮತ್ತು ಫಗ್ಲಿ ಪ್ರದೇಶಗಳಲ್ಲಿ ಸಂಭವಿಸಿರುವ ಭೂಕುಸಿತಗಳಲ್ಲಿ ಅನೇಕ ಜನರು ಸಮಾಧಿಯಾಗಿರುವ ಆತಂಕವಿದೆ. ರಕ್ಷಣಾ ಕಾರ್ಯಾಚರಣೆ ಭರದಿಂದ ನಡೆಯುತ್ತಿದೆ ಎಂದು ಶಿಮ್ಲಾ ಜಿಲ್ಲಾಧಿಕಾರಿ ಆದಿತ್ಯ ನೇಗಿ ತಿಳಿಸಿದ್ದಾರೆ.

ಹಮೀರ್‌ಪುರ ಜಿಲ್ಲೆಯಲ್ಲಿ ನಿರಂತರ ಮಳೆಯಿಂದಾಗಿ ಮೂವರು ಮೃತಪಟ್ಟಿದ್ದು, ಇಬ್ಬರು ಕಣ್ಮರೆಯಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಹೇಮರಾಜ್ ಬೈರ್ವಾ ತಿಳಿಸಿದ್ದಾರೆ.

ಭಾನುವಾರ ರಾತ್ರಿ ಒಬ್ಬ ವ್ಯಕ್ತಿ ಪ್ರವಾಹದ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಇಬ್ಬರನ್ನು ರಕ್ಷಿಸಲಾಗಿದೆ. ಮತ್ತೊಂದು ಘಟನೆಯಲ್ಲಿ ಮನೆ ಕುಸಿದು ಬಿದ್ದು ವೃದ್ಧೆಯೊಬ್ಬರು ಜೀವಂತ ಸಮಾಧಿಯಾಗಿದ್ದಾರೆ, ಅವರ ಪುತ್ರನನ್ನು ರಕ್ಷಿಸಲಾಗಿದೆ. ಜಿಲ್ಲೆಯ ರಂಗಾಸ್ ಪ್ರದೇಶದಲ್ಲಿ ಭೂಕುಸಿತದಿಂದ ಮಹಿಳೆ ಸಾವನ್ನಪ್ಪಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ನೂರಾರು ರಸ್ತೆಗಳು ಬಂದ್: ಸೋಲನ್ ಜಿಲ್ಲೆಯಲ್ಲಿ ಸಂಭವಿಸಿದ ಭೂಕುಸಿತದಿಂದಾಗಿ ಶಿಮ್ಲಾ–ಚಂಡೀಗಢ ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಕಡಿತಗೊಂಡಿದೆ. 'ಇದರಿಂದ ಶಿಮ್ಲಾ ಮತ್ತು ಸೋಲನ್ ಜಿಲ್ಲೆಗಳಿಗೆ ಅಗತ್ಯ ಸರಕುಗಳ ರವಾನೆಗೆ ತೊಡಕುಂಟಾಗಿದೆ.

ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರದ ಮಾಹಿತಿ ಪ್ರಕಾರ, ಮಂಡಿ ಜಿಲ್ಲೆಯೊಂದರಲ್ಲೇ 236, ಶಿಮ್ಲಾದಲ್ಲಿ 59 ಮತ್ತು ಬಿಲಾಸ್‌ಪುರ ಜಿಲ್ಲೆಯಲ್ಲಿ 40 ರಸ್ತೆಗಳು ಸೇರಿ ರಾಜ್ಯದಲ್ಲಿ 621 ರಸ್ತೆಗಳಲ್ಲಿ ಸಂಚಾರ ಸ್ಥಗಿತಗೊಂಡಿದೆ.

ಶಾಲಾ– ಕಾಲೇಜುಗಳಿಗೆ ರಜೆ: ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳಿಗೆ ಸೋಮವಾರ ರಜೆ ಘೋಷಿಸಲಾಗಿತ್ತು. 'ಕಳೆದ 24 ಗಂಟೆಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ನದಿಗಳು, ಕೆರೆಕಟ್ಟೆಗಳು ಉಕ್ಕಿ ಹರಿಯುತ್ತಿದ್ದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾ –ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ' ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಮಂಗಳವಾರ ಕೂಡ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಯೆಲ್ಲೊ ಅಲರ್ಟ್ ನೀಡಿದ್ದು, ಆಗಸ್ಟ್ 18ರವರೆಗೆ ರಾಜ್ಯದಲ್ಲಿ ಆರ್ದ್ರ ವಾತಾವರಣದ ಮುನ್ಸೂಚನೆ ನೀಡಿದೆ.



ಉತ್ತರಾಖಂಡದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಗಂಗಾ ನದಿ ಉಕ್ಕಿ ಹರಿದಿದ್ದು, ಋಷಿಕೇಶದ ಶಿವನ ಮೂರ್ತಿಯು ಸೋಮವಾರ ಭಾಗಶಃ ಮುಳುಗಿತ್ತು – ಪಿಟಿಐ ಚಿತ್ರ

ಅನೇಕ ಜನರು ಸಮಾಧಿಯಾಗಿದ್ದಾರೆ. ಅವಶೇಷಗಳಡಿ ಸಿಲುಕಿರುವವರ ರಕ್ಷಣಾ ಕಾರ್ಯವು ಸಮರೋಪಾದಿಯಲ್ಲಿ ನಡೆಯುತ್ತಿದೆ
ಸುಖ್ವಿಂದರ್ ಸಿಂಗ್ ಸುಖು, ಹಿಮಾಚಲಪ್ರದೇಶ ಮುಖ್ಯಮಂತ್ರಿ

ಉತ್ತರಾಖಂಡದಲ್ಲಿ ಮೂವರ ಸಾವು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದಲ್ಲಿ ಸೋಮವಾರ ಧಾರಾಕಾರ ಮಳೆ ಸುರಿದು, ಅಲ್ಲಲ್ಲಿ ಭೂಕುಸಿತ ಸಂಭವಿಸಿದೆ. ಹಲವು ಕಟ್ಟಡಗಳು ನಾಶವಾಗಿವೆ.

ಬದರಿನಾಥ್, ಕೇದಾರನಾಥ ಮತ್ತು ಗಂಗೋತ್ರಿ ದೇಗುಲಗಳ ಮಾರ್ಗದ ರಾಷ್ಟ್ರೀಯ ಹೆದ್ದಾರಿಗಳು ಕುಸಿದು, ಮೂವರು ಸಾವನ್ನಪ್ಪಿದ್ದಾರೆ. ಐವರು ಕಾಣೆಯಾಗಿದ್ದಾರೆ.

ಹೆದ್ದಾರಿಗಳು ಹಾಳಾಗಿರುವುದರಿಂದ ಸಂಚಾರ ಸ್ಥಗಿತಗೊಳಿಸಲಾಗಿದೆ. ಮತ್ತಷ್ಟು ಭೂಕುಸಿತದ ಆತಂಕ ಇರುವುದರಿಂದ ಎರಡು ದಿನಗಳ ಕಾಲ ಚಾರ್‌ಧಾಮ್ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸತತ ಮಳೆಯಿಂದಾಗಿ ಡೆಹ್ರಾಡೂನ್‌ನ ಹೊರವಲಯದಲ್ಲಿರುವ ಖಾಸಗಿ ರಕ್ಷಣಾ ತರಬೇತಿ ಅಕಾಡೆಮಿ ಕಟ್ಟಡ ಕೂಡ ಕುಸಿದಿದೆ.

ರಾಜ್ಯದಲ್ಲಿನ ಮಳೆ ಮತ್ತು ಹಾನಿ ಪರಿಸ್ಥಿತಿ ಪರಿಶೀಲಿಸಲು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ರುದ್ರಪ್ರಯಾಗ ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ರಾಜ್ವಾರ್ ಅವರು, ಕೇದಾರನಾಥದ ಬಳಿಯ ಲಿಂಚೋಳಿಯಲ್ಲಿನ ಶಿಬಿರದಲ್ಲಿ ಭೂಕುಸಿತ ಸಂಭವಿಸಿದೆ. ನೇಪಾಳದ 26 ವರ್ಷದ ಕಲು ಬಹದ್ದೂರ್ ಎಂಬುವವರು ಸಾವನ್ನಪ್ಪಿದ್ದಾರೆ. ಋಷಿಕೇಶದ ಶಿವಪುರಿ ಮತ್ತು ಮೀರಾನಗರ ಪ್ರದೇಶಗಳ ಬಳಿ ಹೊಳೆಗಳಲ್ಲಿ ಎರಡು ಶವಗಳು ಪತ್ತೆಯಾಗಿವೆ ಎಂದು ಋಷಿಕೇಶ ಎಸ್‌ಎಚ್‌ಒ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೌರಿ ಜಿಲ್ಲೆಯ ಲಕ್ಷ್ಮಣಜೂಲಾ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿ ನಾಲ್ವರು ಜನರು ಕಾಣೆಯಾಗಿದ್ದಾರೆ. ಈ ಪ್ರದೇಶದ ರೆಸಾರ್ಟ್‌ನಲ್ಲಿ ಅವಶೇಷಗಳಡಿ ನಾಲ್ವರು ಜನರು ಸಿಲುಕಿಕೊಂಡಿದ್ದಾರೆ ಎಂದು ಪೌರಿಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಶ್ವೇತಾ ಚೌಬೆ ತಿಳಿಸಿದರು.

ರಕ್ಷಣಾ ಮತ್ತು ಪರಿಹಾರ ತಂಡಗಳು ಸ್ಥಳ ತಲುಪಿದ್ದು, ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

ಎನ್‌ಸಿಪಿ ನಾಯಕ ನವಾಬ್ ಮಲಿಕ್ ಆಸ್ಪತ್ರೆಯಿಂದ ಮನೆಗೆ

ಮುಂಬೈ: ಹಣ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿ, ಎನ್‌ಸಿಪಿ ನಾಯಕ ನವಾಬ್ ಮಲಿಕ್ ಅವರಿಗೆ ವೈದ್ಯಕೀಯ ಕಾರಣಕ್ಕಾಗಿ ಸುಪ್ರೀಂ ಕೋರ್ಟ್ ತಾತ್ಕಾಲಿಕ ಜಾಮೀನು ಮಂಜೂರು ಮಾಡಿದ, ಮೂರು ದಿನಗಳ ಬಳಿಕ ಅವರು ಆಸ್ಪತ್ರೆಯಿಂದ ಮನೆಗೆ ತೆರಳಿದರು.



ಮಲಿಕ್ ಅವರು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರ ನಿಷ್ಠರು. ಮುಂಬೈನ ಶಾಸಕರೂ ಆಗಿರುವ ನವಾಬ್ ಮಲಿಕ್ ಆಸ್ಪತ್ರೆಯಿಂದ ಹೊರಗೆ ಬರುತ್ತಿದ್ದಂತೆ ಅವರಿಗೆ ಭವ್ಯ ಸ್ವಾಗತ ದೊರೆಯಿತು.

ಪಾಕಿಸ್ತಾನ ಮೂಲದ ಭೂಗತ ಪಾತಕಿ ದಾವೂದ್ ಇಬ್ರಾಹಿಂ ಚಟುವಟಿಕೆಗಳಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಪಿಎಂಎಲ್ಎ ಕಾಯ್ದೆಯಡಿ 2022ರ ಫೆಬ್ರುವರಿ 23ರಂದು ಮಲಿಕ್ ಅವರನ್ನು ಬಂಧಿಸಿತ್ತು.

ತಿರುಮಲ: ಸೆರೆ ಸಿಕ್ಕ ಚಿರತೆ

ತಿರುಪತಿ (ಪಿಟಿಐ): ತಿರುಪತಿಯಲ್ಲಿ ಇತ್ತೀಚೆಗೆ ಆರು ವರ್ಷ ವಯಸ್ಸಿನ ಬಾಲಕಿಯ ಸಾವಿಗೆ ಕಾರಣವಾಗಿದ್ದು ಎನ್ನಲಾಗಿರುವ ಚಿರತೆಯನ್ನು ಅರಣ್ಯ ಇಲಾಖೆಯ ಸಿಬ್ಬಂದಿ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದ ಬಳಿ ಸೆರೆ ಹಿಡಿದಿದ್ದಾರೆ.

'ಸೆರೆಗೆ ಇಡಲಾಗಿದ್ದ ಬೋನಿನಲ್ಲಿ ಚಿರತೆ ಸಿಕ್ಕಿಬಿದ್ದಿದೆ. ಅದನ್ನು ಶ್ರೀವೆಂಕಟೇಶ್ವರ ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದೆ. ಬಾಲಕಿ ಸಾವಿಗೆ ಕಾರಣವಾದದ್ದು ಇದೇ ಚಿರತೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಡಿಎನ್‌ಎ ಮಾದರಿ ಪರಿಶೀಲಿಸಲಾಗುತ್ತಿದೆ' ಎಂದು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಶಾಂತಿಪ್ರಿಯಾ ಪಾಂಡೆ ಸೋಮವಾರ ತಿಳಿಸಿದರು.

ಚಿರತೆಯ ದಾಳಿ ನಡೆದ ಸ್ಥಳದಿಂದ ರಕ್ತ, ಲಾಲಾರಸ ಮಾದರಿ ಜೊತೆಗೆ, ಸೆರೆಸಿಕ್ಕ ವನ್ಯಜೀವಿಯ ಮುತ್ತು, ಕೂದಲಿನ ಮಾದರಿ ಸಂಗ್ರಹ ಮಾಡಲಾಗಿದೆ. ಸೆರೆಸಿಕ್ಕಿರುವ ಚಿರತೆಯೇ ಬಾಲಕಿ ಕೊಂದಿತ್ತು ಎಂಬುದು ದೃಢಪಟ್ಟರೆ ಅದನ್ನು ಮೃಗಾಲಯದಲ್ಲೇ ಇಡಲಾಗುವುದು ಎಂದು ಹೇಳಿದರು.

ಪಂಜಾಬ್: ಭಯೋತ್ಪಾದಕ ಸಂಚು ವಿಫಲ

ಚಂಡೀಗಢ (ಪಿಟಿಐ): ಸ್ವಾತಂತ್ರ್ಯ ದಿನದ ಮುನ್ನಾದಿನವಾದ ಸೋಮವಾರ ಪಂಜಾಬ್ ಪೊಲೀಸರು ಭಯೋತ್ಪಾದಕರ ಸಂಚನ್ನು ವಿಫಲಗೊಳಿಸಿದ್ದು ಈ ಸಂಬಂಧ ಐವರನ್ನು ಬಂಧಿಸಿದ್ದಾರೆ.

ಆರೋಪಿಗಳು ಪಾಕಿಸ್ತಾನ ಮೂಲದ ಉಗ್ರ ಹರ್ವಿಂದರ್ ರಿಂದಾ ಮತ್ತು ಅಮೆರಿಕ ಮೂಲದ ಗ್ಯಾಂಗ್‌ಸ್ಟರ್ ಗೋಲ್ಡಿ ಬ್ರಾಬ್ ಅವರ ಜೊತೆ ಸಂಪರ್ಕ ಹೊಂದಿದ್ದಾರೆ. ರಾಜ್ಯದಲ್ಲಿ ನಿರ್ದಿಷ್ಟ ಗುಂಪನ್ನು ಗುರಿಯಾಗಿಸಿಕೊಂಡು ಹತ್ಯೆಗೈಯಲು ಅವರು ಸಂಚು ರೂಪಿಸಿದ್ದರು ಎಂದು ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಗೌರವ್ ಯಾದವ್ ಅವರು ತಿಳಿಸಿದ್ದಾರೆ.

ಈ ಕುರಿತು ಎಕ್ಸ್ (ಟ್ವಿಟರ್) ವೇದಿಕೆಯಲ್ಲಿ ಮಾಹಿತಿ ನೀಡಿರುವ ಅವರು, ಕೇಂದ್ರೀಯ ಸಂಸ್ಥೆ ಜೊತೆ ಜಂಟಿ ಕಾರ್ಯಾಚರಣೆ ನಡೆಸಿದ ಪಂಜಾಬ್ ಪೊಲೀಸರು ಭಯೋತ್ಪಾದಕ ಸಂಚನ್ನು ಭೇದಿಸಿದ್ದಾರೆ. ರಾಜ್ಯದಲ್ಲಿ ಶಾಂತಿ, ಸೌಹಾರ್ದವನ್ನು ಹಾಳುಗೆಡವಲು ರೂಪಿಸಿದ್ದ ಸಂಚು ವಿಫಲಗೊಳಿಸಿದ್ದಾರೆ. ಬಂಧಿತರಿಂದ 2 ವಿದೇಶಿ ಪಿಸ್ತೂಲನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ಭದ್ರತಾ ಪಡೆಯಿಂದ ಐಇಡಿ ಪತ್ತೆ

ಶ್ರೀನಗರ (ಪಿಟಿಐ): ಸ್ವಾತಂತ್ರ್ಯ ದಿನಾಚರಣೆಯ ಮುನ್ನಾ ದಿನವಾದ ಸೋಮವಾರ ಭದ್ರತಾ ಪಡೆಗಳು ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಸುಧಾರಿತ ಸ್ಫೋಟಕ ಉಪಕರಣವನ್ನು (ಐಇಡಿ) ಸೋಮವಾರ ಪತ್ತೆ ಮಾಡಿ, ನಿಷ್ಕ್ರಿಯಗೊಳಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ಕಾನಿಸ್ಪೋರಾ ಪ್ರದೇಶದ ಕಾಲೇಜೊಂದರ ಬಳಿ ಐಇಡಿ ಇದ್ದ ಚೀಲವೊಂದನ್ನು ಪಹರೆ ಕಾರ್ಯದಲ್ಲಿದ್ದ ಸೇನೆ ಮತ್ತು ಪೊಲೀಸರ ತಂಡವು ಮಧ್ಯಾಹ್ನ ಪತ್ತೆ ಮಾಡಿತು. ಕೂಡಲೇ ಬಾಂಬ್ ನಿಷ್ಕ್ರಿಯ ಪಡೆ ಸ್ಥಳಕ್ಕೆ ಆಗಮಿಸಿ, ಯಾವುದೇ ಹಾನಿ ಆಗದ ರೀತಿಯಲ್ಲಿ ಸ್ಫೋಟಕಗಳನ್ನು ನಿಷ್ಕ್ರಿಯಗೊಳಿಸಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸುದ್ದಿವಾಹಿನಿಗಳ ನಿಯಂತ್ರಣಕ್ಕೆ ಕಠಿಣ ನಿಯಮ ಅಗತ್ಯ: 'ಸುಪ್ರೀಂ'

'ಲಾಭಕ್ಕೆ ಅನುಗುಣವಾಗಿ ದಂಡ ನಿಗದಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸುದ್ದಿ ಪ್ರಸಾರದಲ್ಲಿ ನಿರ್ಬಂಧಗಳನ್ನು ಮೀರುವ ಪ್ರಕರಣಗಳಲ್ಲಿ ಟಿ.ವಿ. ಚಾನಲ್‌ಗಳಿಗೆ ವಿಧಿಸುವ ದಂಡದ ಮೊತ್ತದ ಪ್ರಮಾಣವು, ವಾಹಿನಿಯು ನಿರ್ದಿಷ್ಟ ಕಾರ್ಯಕ್ರಮದಿಂದ ಗಳಿಸುವ ಲಾಭಕ್ಕೆ ಅನುಗುಣವಾಗಿ ಇರಬೇಕು' ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

'ನಿಯಂತ್ರಣ ಸಂಬಂಧ ಕಠಿಣವಾದ ನಿಯಮಗಳನ್ನು ರೂಪಿಸದಿದ್ದರೆ, ಸಂಹಿತೆಯನ್ನು ಪಾಲಿಸುವ ವಿಷಯದಲ್ಲಿ ಟಿ.ವಿ ಚಾನಲ್‌ಗಳಿಗೆ ಯಾವುದೇ ಬದ್ಧತೆ ಇರುವುದಿಲ್ಲ' ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯರ ಪೀಠವು ಕಟುವಾಗಿ ಹೇಳಿತು.

ಟಿ.ವಿ.ಚಾನಲ್‌ಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಿರ್ಬಂಧಗಳನ್ನು ಇನ್ನಷ್ಟು ಬಲಪಡಿಸಲಾಗುವುದು ಎಂಬ ಸ್ಪಷ್ಟ ಇಂಗಿತವನ್ನು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯ ಪೀಠವು ಇದೇ ಸಂದರ್ಭದಲ್ಲಿ ನೀಡಿತು.

'ಸುದ್ದಿ ಮಾಧ್ಯಮಗಳಿಗೆ ಪ್ರಸಾರಕ್ಕೆ ಮೊದಲು ಅಥವಾ ನಂತರ ಸೆನ್ಸಾರ್‌ಶಿಪ್ ವಿಧಿಸಲು ತಾನು ಬಯಸುವುದಿಲ್ಲ. ಆದರೆ, ಟಿ.ವಿ. ಚಾನಲ್‌ಗಳಿಗೆ ಪರಿಣಾಮಕಾರಿಯಾದ ಸ್ವಯಂ ನಿಯಂತ್ರಣ ಅಗತ್ಯ. ನಿರ್ಬಂಧವನ್ನು ಉಲ್ಲಂಘಿಸುವ ಪ್ರಕರಣಗಳಲ್ಲಿ ವಿಧಿಸಲಾಗುವ ದಂಡದ ಮೊತ್ತದ ಪ್ರಮಾಣ ನಿರ್ದಿಷ್ಟ ಕಾರ್ಯಕ್ರಮದಿಂದ ವಾಹಿನಿ ಗಳಿಸುವ ಲಾಭದ ಮೊತ್ತಕ್ಕೆ ಅನುಗುಣವಾಗಿ ಇರಬೇಕು' ಎಂದು ಸಲಹೆ ಮಾಡಿತು.



ಬಾಂಬೆ ಹೈಕೋರ್ಟ್‌ನ ತೀರ್ಪು ಪ್ರಶ್ನಿಸಿ ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಸೋಸಿಯೇಷನ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್‌ನ ಪೀಠವು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತು.

ಸುಶಾಂತ್ ಸಿಂಗ್ ರಾಜ್‌ಪೂತ್ ಪ್ರಕರಣದಲ್ಲಿ ಮಾಧ್ಯಮಗಳು ನಿಯಂತ್ರಣ ಮೀರಿ ವರ್ತಿಸಿದವು ಎಂದು ಹೇಳಿದ ಪೀಠವು, ಇದಕ್ಕಾಗಿ ಟಿ.ವಿ. ವಾಹಿನಿಯೊಂದಕ್ಕೆ ವಿಧಿಸಿದ್ದ ₹ 1 ಲಕ್ಷ ದಂಡದ ಮೊತ್ತವು ಲಾಭಕ್ಕೆ ಅನುಗುಣವಾಗಿಲ್ಲ ಎಂದು ಅಭಿಪ್ರಾಯಪಟ್ಟಿತು.

ಸುಶಾಂತ್ ಸಿಂಗ್ ರಾಜ್‌ಪೂತ್ ಪ್ರಕರಣವನ್ನು ಉಲ್ಲೇಖಿಸಿ, ಈ ವಿಷಯದಲ್ಲಿ ಎಲ್ಲರೂ ಹದ್ದುಮೀರಿ ವರ್ತಿಸಿದರು. ಕೆಲ ಟಿ.ವಿ. ವಾಹಿನಿಗಳು ವರ್ಚುವಲ್ ಆಗಿ ಇಂಥ ಪ್ರಕರಣಗಳ ಕ್ರಿಮಿನಲ್ ವಿಚಾರಣೆಗೆ ಮುಂದಾಗಿದ್ದವು ಎಂದಿತು.

ಕಠಿಣವಾದ ನಿಯಮಗಳು ಅಗತ್ಯ ಎಂದು ಒತ್ತಿ ಹೇಳಿದ ನ್ಯಾಯಪೀಠವು, ಕಾರ್ಯಕ್ರಮಗಳ ಅಪ್ ಲಿಂಕ್ ಮತ್ತು ಡೌನ್‌ಲಿಂಕ್‌ಗೆ ಸಂಬಂಧಿಸಿದ ಮಾರ್ಗದರ್ಶಿ ಸೂತ್ರಗಳನ್ನು ಪೀಠವು ಗಮನಿಸಿದೆ ಎಂದು ತಿಳಿಸಿತು.

ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಸೋಸಿಯೇಷನ್ ಪರ ವಕೀಲ ಅರವಿಂದ್ ದಾತಾರ್ ಅವರಿಗೆ, ಟಿ.ವಿ. ಚಾನಲ್‌ಗಳ ಸ್ವಯಂ ನಿರ್ಬಂಧ ಕುರಿತು ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿಗಳಾದ ಎ.ಕೆ.ಸಿಕ್ರಿ, ಆರ್.ವಿ.ರವೀಂದ್ರನ್ ಅವರ ಸಲಹೆ ಪಡೆಯಬಹುದು ಎಂದು ತಿಳಿಸಿತು.

ಚಾನಲ್‌ನ ವಿರುದ್ಧ ಪ್ರತಿಕೂಲ ಆದೇಶ ಹೊರಬಿದ್ದರೆ ಅದರ ಲೈಸೆನ್ಸ್ ನವೀಕರಣ ಆಗುವುದಿಲ್ಲ ಎಂದು ದಾತಾರ್ ಈ ಸಂದರ್ಭದಲ್ಲಿ ಹೇಳಿದರು.

ಕೇಂದ್ರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಪ್ರಸ್ತುತ ಮೂರು ಸ್ತರದ ವ್ಯವಸ್ಥೆಯಿದೆ. ಭಿನ್ನ ಚಾನಲ್‌ಗಳಿಗೆ ಅನುಗುಣವಾಗಿ ಇತರೆ ಸಂಘಟನೆಗಳಿವೆ. ಈ ವಿಷಯದಲ್ಲಿ ಸರ್ಕಾರ ಅವುಗಳ ಅಭಿಪ್ರಾಯಗಳನ್ನು ಪರಿಗಣಿಸಲಿದೆ' ಎಂದು ಹೇಳಿದರು.

ಷಾಹಿ ಈದ್ಗಾ ವೈಜ್ಞಾನಿಕ ಸಮೀಕ್ಷೆಗೆ ಮನವಿ

ನವದೆಹಲಿ: ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಕೈಗೊಂಡಿರುವಂತೆ ಮಥುರಾದ ಷಾಹಿ ಈದ್ಗಾದಲ್ಲಿ ವೈಜ್ಞಾನಿಕ ಸಮೀಕ್ಷೆ ಕೈಗೊಳ್ಳಲು ನಿರ್ದೇಶನ ನೀಡಬೇಕೆಂದು ಕೋರಿ ಕೃಷ್ಣ ಜನ್ಮಭೂಮಿ ಮುಕ್ತಿ ನಿರ್ಮಾಣ ಟ್ರಸ್ಟ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

'ಮಥುರಾದ ಷಾಹಿ ಈದ್ಗಾದ ಜಾಗದಲ್ಲಿದ್ದ ಹಿಂದೂ ದೇವಾಲಯಗಳನ್ನು ಕೆಡವಿ ಮಸೀದಿ ನಿರ್ಮಿಸಲಾಗಿದೆ. ಈ ಜಾಗವು ಹಿಂದೂ ಸಮುದಾಯಕ್ಕೆ ಸೇರಿದ್ದಾಗಿದೆ' ಎಂದು ಪ್ರತಿಪಾದಿಸಿರುವ ಅರ್ಜಿದಾರರು, ಈ ಸಂಬಂಧ ಈ ಹಿಂದೆಯೇ ಷಾಹಿ ಮಸೀದಿ ಈದ್ಗಾ ನಿರ್ವಹಣಾ ಸಮಿತಿ ಹಾಗೂ ಉತ್ತರಪ್ರದೇಶ ಸುನ್ನಿ ಕೇಂದ್ರದ ವಿರುದ್ಧ ಮಥುರಾದ ಸಿವಿಲ್ ನ್ಯಾಯಾಧೀಶರಿಗೆ (ಹಿರಿಯ ವಿಭಾಗ) ಅರ್ಜಿ ಸಲ್ಲಿಸಲಾಗಿತ್ತು ಎಂದೂ ತಿಳಿಸಿದ್ದಾರೆ.

ಟ್ರಸ್ಟ್ ಪರ ವಕೀಲರಾದ ಹಿಮಾಂಶು ಶೇಖರ್ ತ್ರಿಪಾಠಿ ಅವರು ಅರ್ಜಿ ಸಲ್ಲಿಸಿದ್ದು, 'ವಿವಾದಿತ ಭೂಮಿಗೆ ಸಂಬಂಧಿಸಿದ ಹಕ್ಕುಗಳ ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸಂಪೂರ್ಣ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು. ಇದರಿಂದ ವಿಶ್ವಾಸಾರ್ಹ ಆಧಾರ ಲಭ್ಯವಾಗುತ್ತದೆ' ಎಂದು ಪ್ರತಿಪಾದಿಸಿದ್ದಾರೆ.

ಗೋಧ್ರಾ ಪ್ರಕರಣ: ಮೂವರಿಗೆ ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗುಜರಾತ್‌ನ ಗೋಧ್ರಾದಲ್ಲಿ 2002ರಲ್ಲಿ ನಡೆದಿದ್ದ ರೈಲಿಗೆ ಬೆಂಕಿ ಹಚ್ಚಿದ್ದ ಕೃತ್ಯದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಮೂವರು ಅಪರಾಧಿಗಳ ಜಾಮೀನು ಅರ್ಜಿಯನ್ನು ಈ ಹಂತದಲ್ಲಿ ವಿಚಾರಣೆಗೆ ಪರಿಗಣಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿತು.

'ಈ ಕೃತ್ಯ ತುಂಬಾ ಗಂಭೀರವಾದ ಪ್ರಕರಣ. ಒಬ್ಬ ವ್ಯಕ್ತಿಯ ಸಾವಿಗೆ ಸಂಬಂಧಿಸಿದ ಪ್ರತ್ಯೇಕವಾದ ಪ್ರಕರಣವಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ ಮೂವರು ಸದಸ್ಯರ ಪೀಠವು ಸೋಮವಾರ ಅಭಿಪ್ರಾಯಪಟ್ಟಿತು.

ಆದರೆ, ಈ ಅರ್ಜಿಯ ವಿಚಾರಣೆಗೆ ಸಮ್ಮತಿಸಿತು. 'ಸದ್ಯದ ಸ್ಥಿತಿಯಲ್ಲಿ ಜಾಮೀನು ಮಂಜೂರು ಮಾಡಲಾಗದು' ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ, ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಸ್ಪಷ್ಟಪಡಿಸಿತು.

ಅರ್ಜಿದಾರರ ಪರ ವಕೀಲ ಸಂಜಯ್ ಹೆಗ್ಡೆ ಮತ್ತು ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ಪ್ರಾಥಮಿಕ ವಾದವನ್ನು ಆಲಿಸಿದ ಬಳಿಕ ಸುಪ್ರೀಂ ಕೋರ್ಟ್‌ನ ಪೀಠವು ಈ ಸಂಬಂಧ ಆದೇಶ ಹೊರಡಿಸಿತು.

ಅದಾನಿ ಪ್ರಕರಣ: ತನಿಖೆ ಅವಧಿ ವಿಸ್ತರಣೆಗೆ ಮನವಿ

ನವದೆಹಲಿ (ಪಿಟಿಐ): ಅದಾನಿ ಸಮೂಹವು ಷೇರುಗಳ ಮೌಲ್ಯವನ್ನು ಏರಿಳಿತ ಮಾಡಿದೆ ಎಂಬ ಆರೋಪ ಕುರಿತು ತನಿಖೆ ಪೂರ್ಣಗೊಳಿಸಲು 15 ದಿನ ಅವಧಿ ವಿಸ್ತರಿಸಬೇಕು ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ 24 ವಿಷಯಗಳ ಪರಿಶೀಲನೆ ಹಾಗೂ ತನಿಖೆ ನಡೆಸಲಾಗಿದೆ ಎಂದು ಸೆಬಿ ಸೋಮವಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಿದೆ. ಪರಿಶೀಲನೆ ಹಾಗೂ ತನಿಖೆ ನಡೆಸಲಾಗಿರುವ 24 ವಿಷಯಗಳ ಪೈಕಿ 17 ವಿಷಯಗಳ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸೆಬಿ ನಿಯಮಗಳ ಅನುಸಾರ ಸಕ್ಷಮ ಪ್ರಾಧಿಕಾರವು ಇದಕ್ಕೆ ಅನುಮೋದನೆ ನೀಡಿದೆ ಎಂದಿದೆ.

ಮುಂದಿನ ವಿಚಾರಣೆ ನಡೆಯುವ ಆ. 29ರೊಳಗೆ ಪ್ರಕ್ರಿಯೆ ಬಹುತೇಕ ಮುಗಿಯಲಿದೆ' ಎಂದು ತಿಳಿಸಿತು.

ಮಹಾರಾಜ ಟ್ರೋಫಿ ಕ್ರಿಕೆಟ್: ಸಿಸೊಡಿಯಾ, ಮನ್ವಂತ್ ಅಮೋಘ ಆಟ

ಹುಬ್ಬಳ್ಳಿ ಟೈಗರ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೋಘ ಬೌಲಿಂಗ್ ಮಾಡಿದ ಮನ್ವಂತ್ ಕುಮಾರ್ ಮತ್ತು ಅರ್ಧಶತಕ ದಾಖಲಿಸಿದ ಲವನೀತ್ ಸಿಸೊಡಿಯಾ ಅವರ ಆಟದ ಬಲದಿಂದ ಹುಬ್ಬಳ್ಳಿ ಟೈಗರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಹುಬ್ಬಳ್ಳಿ ತಂಡವು ವೈಶಾಖ ವಿಜಯಕುಮಾರ್ ನಾಯಕತ್ವದ ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧ 7 ವಿಕೆಟ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಹುಬ್ಬಳ್ಳಿ ತಂಡದ ನಾಯಕ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಮನ್ವಂತ್ ಕುಮಾರ್ (21ಕ್ಕೆ3), ವೇಗಿ ವಿದ್ವತ್ ಕಾವೇರಪ್ಪ (24ಕ್ಕೆ2) ಮತ್ತು ಲವೀಶ್ ಕೌಶಲ್ (26ಕ್ಕೆ2) ಅವರ ಬೌಲಿಂಗ್ ದಾಳಿಯ ಮುಂದೆ ಗುಲ್ಬರ್ಗ ತಂಡವು 138 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಗುರಿ ಬೆನ್ನಟ್ಟಿದ ಹುಬ್ಬಳ್ಳಿ ತಂಡಕ್ಕೆ ಮೊದಲ ಓವರ್‌ನಲ್ಲಿಯೇ ಆಘಾತ ಎದುರಾಯಿತು. ಗುಲ್ಬರ್ಗ ಬೌಲರ್ ಅಭಿಲಾಷ್ ಶೆಟ್ಟಿ ಹಾಕಿದ ಇನಿಂಗ್ಸ್‌ನ ಐದನೇ ಎಸೆತದಲ್ಲಿ ಮೊಹಮ್ಮದ್ ತಾಹ ಕ್ಲೀನ್‌ಬೌಲ್ಡ್ ಆದರು.

ಆದರೆ ಇನ್ನೊಂದು ಬದಿಯಲ್ಲಿದ್ದ ಸಿಸೊಡಿಯಾ ಅವರೊಂದಿಗೆ ಸೇರಿಕೊಂಡ ಕೃಷ್ಣನ್ ಶ್ರೀಜಿತ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 106 ರನ್ ಸೇರಿಸಿದರು. ಸಿಸೊಡಿಯಾ 40 ಎಸೆತಗಳಲ್ಲಿ 61 ರನ್ ಗಳಿಸಿದರು. ಅದರಲ್ಲಿ ಐದು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳಿದ್ದವು. ಶ್ರೀಜಿತ್ 32 ಎಸೆತಗಳಲ್ಲಿ 47 ರನ್ ಗಳಿಸಿದರು. ಅದರಲ್ಲಿ ಐದು ಬೌಂಡರಿ ಹಾಗೂ ಒಂದು ಸಿಕ್ಸರ್ ಸೇರಿದ್ದವು.

12ನೇ ಓವರ್‌ನಲ್ಲಿ ಶ್ರೀಜಿತ್ ಮತ್ತು ನಂತರದ ಓವರ್‌ನಲ್ಲಿ ಸಿಸೊಡಿಯಾ ಔಟಾದರು. ನಾಗ ಭರತ್ (ಅಜೇಯ 10) ಮತ್ತು ಮನೀಷ್ ಪಾಂಡೆ (ಔಟಾಗದೆ 15; 10ಎ) ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಗುಲ್ಬರ್ಗ ಮಿಸ್ಟಿಕ್ಸ್: 19.3 ಓವರ್‌ಗಳಲ್ಲಿ 138 (ಮೆಕ್‌ನಿಲ್ ನರೋನಾ 23, ಅಮಿತ್ ವರ್ಮಾ 19, ಸೌರಭ್ ಮುತ್ತೂರ 17, ಕೆ.ವಿ. ಅನೀಶ್ 16, ಆರ್. ಸ್ಮರಣ್ 15, ವಿದ್ವತ್ ಕಾವೇರಪ್ಪ 24ಕ್ಕೆ2, ಲವೀಶ್ ಕೌಶಲ್ 26ಕ್ಕೆ2, ಮನ್ವಂತ್ ಕುಮಾರ್ 21ಕ್ಕೆ3) **ಹುಬ್ಬಳ್ಳಿ ಟೈಗರ್ಸ್:** 15.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 141 (ಲವನೀತ್ ಸಿಸೊಡಿಯಾ 61, ಕೃಷ್ಣನ್ ಶ್ರೀಜಿತ್ 47, ಮನೀಷ್ ಪಾಂಡೆ ಔಟಾಗದೆ 15, ಅಭಿಲಾಷ್ ಶೆಟ್ಟಿ 23ಕ್ಕೆ2, ಶರಣ್ ಗೌಡ 8ಕ್ಕೆ1)
ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 7 ವಿಕೆಟ್ ಜಯ
ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 176 (ರೋಹನ್ ಕದಂ 27, ನಿಹಾಲ್ ಉಳ್ಳಾಲ 28, ಶ್ರೇಯಸ್ ಗೋಪಾಲ್ 46, ಅಭಿನವ್ ಮನೋಹರ್ 50, ಎಂ.ಜಿ. ನವೀನ್ 19ಕ್ಕೆ4) **ಮಂಗಳೂರು ಡ್ರ್ಯಾಗನ್ಸ್:** 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 167 (ಬಿ.ಆರ್. ಶರತ್ 15, ರೋಹನ್ ಪಾಟೀಲ 23, ಕೆ.ವಿ. ಸಿದ್ಧಾರ್ಥ್ ಔಟಾಗದೆ 46, ಅನಿರುದ್ಧ ಜೋಶಿ 50, ನಿಶ್ಚಿತ್ ಎನ್. ರಾವ್ 28ಕ್ಕೆ2, ಪ್ರಣವ್ ಭಾಟಿಯಾ 21ಕ್ಕೆ2)
ಫಲಿತಾಂಶ: ಶಿವಮೊಗ್ಗ ಲಯನ್ಸ್‌ಗೆ 9 ರನ್‌ಗಳ ಜಯ



ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡದ ಲವನಿತ್ ಸಿಸೊಡಿಯಾ ಅವರ ಬ್ಯಾಟಿಂಗ್ –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್

ಮನೋಹರ್ ಅರ್ಧಶತಕ; ಲಯನ್ಸ್‌ಗೆ ಜಯ

ಈ ಬಾರಿಯ ಮಹಾರಾಜ ಟ್ರೋಫಿ ಟೂರ್ನಿಯ ಹರಾಜು ಪ್ರಕ್ರಿಯೆಯಲ್ಲಿ 'ದುಬಾರಿ' ಮೌಲ್ಯ ಗಳಿಸಿದ ಅಭಿನವ್ ಮನೋಹರ್ ಅರ್ಧಶತಕ ಹಾಗೂ ಶ್ರೇಯಸ್ ಗೋಪಾಲ್ ಬ್ಯಾಟಿಂಗ್ ಬಲದಿಂದ ಶಿವಮೊಗ್ಗ ಲಯನ್ಸ್ ತಂಡವು 9 ರನ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ಗೆದ್ದಿತು.

ಟಾಸ್ ಗೆದ್ದ ಮಂಗಳೂರು ತಂಡದ ನಾಯಕ ಕೃಷ್ಣಪ್ಪ ಗೌತಮ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ರೋಹನ್ ಕದಂ (27 ರನ್) ಮತ್ತು ನಿಹಾಲ್ ಉಳ್ಳಾಲ (28 ರನ್) ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಮಧ್ಯಮ ಕ್ರಮಾಂಕದಲ್ಲಿ ಮಿಂಚಿದ ಶ್ರೇಯಸ್ (46; 32ಎ) ಹಾಗೂ ಅಭಿನವ್ (50; 25ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿದರು. ಇದರಿಂದಾಗಿ ತಂಡವು 20ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 176 ರನ್ ಗಳಿಸಿತು. ಮಂಗಳೂರು ತಂಡದ ಎಂ.ಜಿ. ನವೀನ್ ನಾಲ್ಕು ವಿಕೆಟ್ ಗಳಿಸಿದರು.

ಗುರಿ ಬೆನ್ನಟ್ಟಿದ ಮಂಗಳೂರು ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 167 ರನ್ ಗಳಿಸಿತು. ತಂಡದ ಕೆ.ವಿ. ಸಿದ್ಧಾರ್ಥ್ (46; 35ಎ) ನಾಲ್ಕು ರನ್‌ಗಳ ಅಂತರದಿಂದ ಅರ್ಧಶತಕ ತಪ್ಪಿಸಿಕೊಂಡರು. ಆದರೆ, ಆರನೇ ಕ್ರಮಾಂಕದ ಬ್ಯಾಟರ್ ಅನಿರುದ್ಧ ಜೋಶಿ 31 ಎಸೆತಗಳಲ್ಲಿ 50 ರನ್ ಗಳಿಸಿದರು. ನಾಲ್ಕು ಸಿಕ್ಸರ್ ಮತ್ತು ಮೂರು ಬೌಂಡರಿ ಬಾರಿಸಿದರು. ಆದರೆ 19ನೇ ಓವರ್‌ನಲ್ಲಿ ಅವರು ಔಟಾದ ನಂತರ ತಂಡದ ಗೆಲುವಿನ ಆಸೆಯೂ ಕಮರಿತು.

ಇಂದಿನ ಪಂದ್ಯಗಳು

ಮೈಸೂರು ವಾರಿಯರ್ಸ್–ಮಂಗಳೂರು ಡ್ರ್ಯಾಗನ್ಸ್ (ಮಧ್ಯಾಹ್ನ 1 ರಿಂದ)
ಶಿವಮೊಗ್ಗ ಲಯನ್ಸ್–ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ 5.30ರಿಂದ)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್

ಚೆಸ್: ಕ್ವಾರ್ಟರ್ ಫೈನಲ್‌ಗೆ ವಿದಿತ್

ಬಾಕು, ಅಜರ್‌ಬೈಜಾನ್ (ಪಿಟಿಐ): ರಷ್ಯಾದ ಇಯಾನ್ ನೆಪೊಮ್‌ನಿಷಿ ಅವರನ್ನು ಟೈಬ್ರೇಕರ್‌ನಲ್ಲಿ ಮಣಿಸಿದ ಭಾರತದ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ, ಇಲ್ಲಿ ನಡೆಯುತ್ತಿರುವ ಫಿಡೆ ವಿಶ್ವ ಕಪ್ ಚೆಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.



ವಿದಿತ್

ಸೋಮವಾರ ನಡೆದ ರ್‍ಯಾಪಿಡ್ ಟೈಬ್ರೇಕರ್‌ನಲ್ಲಿ ವಿದಿತ್ ಅವರು 2–0 ರಿಂದ ಎದುರಾಳಿಯನ್ನು ಮಣಿಸಿದರು. ಈ ಮೂಲಕ ಎಂಟರಘಟ್ಟ ಪ್ರವೇಶಿಸಿದ ಭಾರತದ ಇತರ ಮೂವರನ್ನು ಸೇರಿಕೊಂಡರು. ಡಿ.ಗುಕೇಶ್, ಆರ್. ಪ್ರಜ್ಞಾನಂದ ಮತ್ತು ಅರ್ಜುನ್ ಇರಿಗೇಶಿ ಅವರು ಈ ಮೊದಲೇ ಕ್ವಾರ್ಟರ್ ಫೈನಲ್‌ನಲ್ಲಿ ಸ್ಥಾನ ಪಡೆದಿದ್ದರು.

ಡ್ರಾ ಪಂದ್ಯದಲ್ಲಿ ಬಿಎಫ್‌ಸಿ

ಡುರಾಂಡ್ ಕಪ್: ಕ್ವಾರ್ಟರ್ ಫೈನಲ್‌ಗೆ ಚೆನ್ನೈಯಿನ್ ತಂಡ

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 1–1 ಗೋಲಿನಿಂದ ಇಂಡಿಯನ್ ಏರ್‌ಫೋರ್ಸ್ ತಂಡದೊಂದಿಗೆ ಡ್ರಾ ಸಾಧಿಸಿದರು.

ಸೋಮವಾರ ನಡೆದ 'ಸಿ' ಗುಂಪಿನ ಪಂದ್ಯದ 21ನೇ ನಿಮಿಷದಲ್ಲಿ ವಿವೇಕ್ ಕುಮಾರ್ ಅವರು ಗೋಲು ಗಳಿಸಿ ಏರ್‌ಫೋರ್ಸ್ ತಂಡಕ್ಕೆ ಮುನ್ನಡೆ ಒದಗಿಸಿದರು. ಬಿಎಫ್‌ಸಿ ತಂಡವು ಸಲಾಂ ಜಾನ್ಸನ್ ಸಿಂಗ್ ಅವರು 59ನೇ ನಿಮಿಷದಲ್ಲಿ ತಂದಿತ್ತ ಗೋಲಿನ ನೆರವಿನಿಂದ ಪಂದ್ಯವನ್ನು ಡ್ರಾ ಮಾಡಿಕೊಂಡಿತು.

ಕ್ವಾರ್ಟರ್ ಫೈನಲ್‌ಗೆ ಚೆನ್ನೈಯಿನ್: ಗುವಾಹಟಿಯ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಚೆನ್ನೈಯಿನ್ ಎಫ್.ಸಿ ತಂಡವು 3–0ಯಿಂದ ನೇಪಾಲದ ತ್ರಿಭುವನ್ ಆರ್ಮಿ ತಂಡವನ್ನು ಮಣಿಸಿ, ನಾಕೌಟ್‌ಗೆ ಅರ್ಹತೆ ಪಡೆಯಿತು.

'ಇ' ಗುಂಪಿನ ಪಂದ್ಯದಲ್ಲಿ ಫಾರೂಖ್ ಚೌಧರಿ ಅವರು 22ನೇ ನಿಮಿಷದಲ್ಲಿ ಚೆನ್ನೈಯಿನ್ ತಂಡಕ್ಕೆ ಮುನ್ನಡೆ ಒದಗಿಸಿದರು. 40ನೇ ನಿಮಿಷದಲ್ಲಿ ರಹೀಂ ಅಲಿ ಅವರು ಪೆನಾಲ್ಟಿಯಲ್ಲಿ ಸಿಕ್ಕ ಅವಕಾಶವನ್ನು ಗೋಲಾಗಿ ಪರಿವರ್ತಿಸಿ, ಮುನ್ನಡೆಯನ್ನು ಹಿಗ್ಗಿಸಿದರು. ಪಂದ್ಯದ ಕೊನೆಯಲ್ಲಿ ರಫೆಲ್ ಕ್ರಿವೆಲ್ಲರೊ (84ನೇ) ಚೆಂಡನ್ನು ಗುರಿ ಸೇರಿಸುವ ಮೂಲಕ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಚೆನ್ನೈಯಿನ್ ತಂಡವು ಎರಡು ಪಂದ್ಯಗಳಿಂದ ಆರು ಪಾಯಿಂಟ್ಸ್ ಸಂಪಾದಿಸಿ, 'ಸಿ' ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ ಕ್ವಾರ್ಟರ್‌ಫೈನಲ್ ಸ್ಥಾನವನ್ನು ಖಚಿತಪಡಿಸಿದೆ.



ಬಿಎಫ್‌ಸಿ ಮತ್ತು ಇಂಡಿಯನ್ ಏರ್‌ಫೋರ್ಸ್ ತಂಡಗಳ ನಡುವಣ ಪಂದ್ಯದ ದೃಶ್ಯ –ಬಿಎಫ್‌ಸಿ 'ಎಕ್ಸ್' (ಟ್ವಿಟರ್) ಚಿತ್ರ

ಸವಾಲಿನ ಮೊತ್ತ ಪೇರಿಸುವಲ್ಲಿ ಎಡವಿದೆವು: ಪಾಂಡ್ಯ

ಲಾಡೆರ್‌ಹಿಲ್, ಅಮೆರಿಕ (ಪಿಟಿಐ): ಕೊನೆಯ 10 ಓವರ್‌ಗಳಲ್ಲಿ ವೇಗವಾಗಿ ರನ್ ಗಳಿಸುವಲ್ಲಿ ವಿಫಲವಾದ್ದರಿಂದ ವೆಸ್ಟ್ ಇಂಡೀಸ್ ವಿರುದ್ಧದ ಅಂತಿಮ ಟಿ20 ಪಂದ್ಯದಲ್ಲಿ ಸೋಲು ಎದುರಾಯಿತು ಎಂದು ಭಾರತ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅಭಿಪ್ರಾಯಪಟ್ಟರು.

ಭಾನುವಾರ ನಡೆದಿದ್ದ ಸರಣಿ ನಿರ್ಣಾಯಕ ಟಿ20 ಪಂದ್ಯದಲ್ಲಿ ಭಾರತ 8 ವಿಕೆಟ್‌ಗಳಿಂದ ಸೋತಿತ್ತು. ಇದರಿಂದ ವಿಂಡೀಸ್ ತಂಡ ಐದು ಪಂದ್ಯಗಳ ಸರಣಿಯನ್ನು 3–2 ರಿಂದ ತನ್ನದಾಗಿಸಿಕೊಂಡಿತ್ತು.

ತಮ್ಮ ನಿಧಾನಗತಿ ಬ್ಯಾಟಿಂಗ್ ಕೂಡಾ ಸೋಲಿಗೆ ಕಾರಣ ಎಂಬುದನ್ನು ಅವರನ್ನು ಒಪ್ಪಿಕೊಂಡರು. ಪಾಂಡ್ಯ ಈ ಪಂದ್ಯದಲ್ಲಿ 18 ಎಸೆತಗಳಲ್ಲಿ 14 ರನ್ ಗಳಿಸಿದ್ದರು.

'ಕೊನೆಯ 10 ಓವರ್‌ಗಳಲ್ಲಿ ಬಿರುಸಿನ ಆಟವಾಡುವಲ್ಲಿ ಎಡವಿದ್ದರಿಂದ ಸವಾಲಿನ ಮೊತ್ತ ಪೇರಿಸಲು ಆಗಲಿಲ್ಲ. ನಾನು ಪರಿಸ್ಥಿತಿಗೆ ಹೊಂದಿಕೊಳ್ಳಲು ತುಂಬಾ ಸಮಯ ತೆಗೆದುಕೊಂಡೆ. ಆ ಬಳಿಕವೂ ಅಬ್ಬರದ ಆಟವಾಡಲು ಆಗಲಿಲ್ಲ' ಎಂದು ಪಂದ್ಯದ ಬಳಿಕ ಪ್ರತಿಕ್ರಿಯಿಸಿದ್ದಾರೆ.

ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ತೀರ್ಮಾನವನ್ನು ಅವರು ಸಮರ್ಥಿಸಿಕೊಂಡರು. 'ಒಂದು ತಂಡವಾಗಿ ನಾವು ನಮ್ಮನ್ನು ಸವಾಲಿಗೆ ಒಡ್ಡಿಕೊಳ್ಳಬೇಕು. ಇಂತಹ ಪಂದ್ಯಗಳಿಂದ ನಮಗೆ ಕಲಿಯಲು ಸಾಕಷ್ಟಿರುತ್ತದೆ' ಎಂದು ಹೇಳಿದರು.



ಹಾರ್ದಿಕ್ ಪಾಂಡ್ಯ

ಕೆಳ ಕ್ರಮಾಂಕದ ಬ್ಯಾಟಿಂಗ್ ಬಲಿಷ್ಠವಾಗಬೇಕು: ತಂಡದ ಕೆಳಕ್ರಮಾಂಕದ ಬ್ಯಾಟಿಂಗ್ ಇನ್ನಷ್ಟು ಬಲಿಷ್ಠವಾಗಬೇಕು ಎಂದು ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ.

'ತಂಡವು ಕೆಲವೊಂದು ವಿಭಾಗಗಳಲ್ಲಿ ಸುಧಾರಣೆ ಕಾಣಬೇಕಿದೆ. ಕೊನೆಯ ಕ್ರಮಾಂಕದ ಬ್ಯಾಟಿಂಗ್‌ನ ಬಲ ಹೆಚ್ಚಬೇಕಿರುವುದು ಅದರಲ್ಲಿ ಒಂದು. ಈ ವಿಭಾಗದಲ್ಲಿ ಸುಧಾರಣೆ ಕಂಡುಕೊಳ್ಳಲು ಪ್ರಯತ್ನಿಸುತ್ತಾ ಇದ್ದೇವೆ. ಅದೇ ವೇಳೆ, ಬೌಲಿಂಗ್ ವಿಭಾಗವು ಶಕ್ತಿ ಕಳೆದುಕೊಳ್ಳದಂತೆ ನೋಡುವುದೂ ಮುಖ್ಯ' ಎಂದು ತಿಳಿಸಿದರು.

'ವಿಂಡೀಸ್ ತಂಡದಲ್ಲಿ 11ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬರುವ ಅಲ್ಜರಿ ಜೋಸೆಫ್ ಭರ್ಜರಿ ಹೊಡೆತಗಳನ್ನು ಆಡಬಲ್ಲರು. ನಮ್ಮ ತಂಡವೂ ಅದೇ ರೀತಿಯಲ್ಲಿ ಕೊನೆಯವರೆಗೂ ಬಲಿಷ್ಠ ಬ್ಯಾಟಿಂಗ್ ಕ್ರಮಾಂಕ ಹೊಂದಿರಬೇಕು' ಎಂದರು.

ವಿಂಡೀಸ್ ಪ್ರವಾಸದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ತಿಲಕ್ ವರ್ಮಾ, ಯಶಸ್ವಿ ಜೈಸ್ವಾಲ್ ಮತ್ತು ಮುಕೇಶ್ ಕುಮಾರ್ ಅವರ ಬಗ್ಗೆ ದ್ರಾವಿಡ್ ಮೆಚ್ಚುಗೆಯ ಮಾತುಗಳನ್ನಾಡಿದರು.

ಹಾರ್ದಿಕ್ ಬಳಗಕ್ಕೆ ವೆಂಕಿ ಚಾಟಿ



ಚೆನ್ನೈ (ಪಿಟಿಐ): ವೆಸ್ಟ್ ಇಂಡೀಸ್ ಎದುರು ಟಿ20 ಕ್ರಿಕೆಟ್ ಸರಣಿ ಸೋತ ಹಾರ್ದಿಕ್ ಪಾಂಡ್ಯ ನಾಯಕತ್ವದ ಭಾರತ ತಂಡವು 'ಅತಿ ಸಾಧಾರಣ ಬಳಗ' ಹಾಗೂ 'ಭ್ರಮೆಯಲ್ಲಿ ತೇಲುತ್ತಿರುವವರು' ಎಂದು ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಟೀಕಿಸಿದ್ದಾರೆ.

ಭಾನುವಾರ ತಡರಾತ್ರಿ ಮುಗಿದ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ ತಂಡವು 8 ವಿಕೆಟ್‌ಗಳಿಂದ ಸೋತಿತ್ತು. ಅದರೊಂದಿಗೆ ಆತಿಥೇಯ ವೆಸ್ಟ್ ಇಂಡೀಸ್ ಬಳಗವು 3–2ರಿಂದ ಸರಣಿ ಗೆದ್ದಿತು.

ಈ ಕುರಿತು ಟ್ವೀಟ್ ಮಾಡಿರುವ ಮಾಜಿ ಮಧ್ಯಮವೇಗದ ಬೌಲರ್ ವೆಂಕಟೇಶ್‌ಪ್ರಸಾದ್, 'ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಅತ್ಯಂತ ಸಾಧಾರಣ ತಂಡ ಇದಾಗಿದೆ. ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸುವಲ್ಲಿ ವಿಫಲವಾಗಿರುವ ವೆಸ್ಟ್ ಇಂಡೀಸ್ ವಿರುದ್ಧ ಭಾರತ ತಂಡವು ಸೋತಿದೆ. ಇತ್ತೀಚೆಗೆ ಬಾಂಗ್ಲಾದೇಶ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯಲ್ಲಿಯೂ ತಂಡ ಸೋತಿತ್ತು. ಸೋಲುಗಳನ್ನು ಸ್ವೀಕರಿಸಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸುಧಾರಣೆಯತ್ತ ಗಮನ ಹರಿಸಬೇಕು. ಬಾಲಿಶವಾದ ಹೇಳಿಕೆ ನೀಡುವುದನ್ನು ಬಿಡಬೇಕು' ಎಂದಿದ್ದಾರೆ.

ಇದೇ ಅಕ್ಟೋಬರ್‌ನಲ್ಲಿ ಭಾರತದ ಆತಿಥ್ಯದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯುವಲ್ಲಿ ವೆಸ್ಟ್ ಇಂಡೀಸ್ ವಿಫಲವಾಗಿದೆ. ಐಸಿಸಿಯ ಏಳನೇ ರ್‍ಯಾಂಕ್‌ನಲ್ಲಿದೆ.

'ಭಾರತ ತಂಡವು ತನ್ನ ಕೌಶಲಗಳಲ್ಲಿ ಸುಧಾರಣೆ ಮಾಡಿಕೊಳ್ಳಬೇಕಿದೆ. ಗೆಲುವಿನ ಹಸಿವು ಮತ್ತು ಉತ್ಕಟತೆಯ ಕೊರತೆ ಎದ್ದು ಕಾಣುತ್ತಿದೆ. ನಾಯಕನಿಗೆ ಯಾವುದೇ ಸ್ಪಷ್ಟತೆಯಿದ್ದಂತೆ ಕಾಣುವುದಿಲ್ಲ. ಬೌಲರ್‌ಗಳು ಬ್ಯಾಟಿಂಗ್ ಮಾಡಲು ಹಾಗೂ ಬ್ಯಾಟರ್‌ಗಳು ಬೌಲಿಂಗ್ ಮಾಡಲು ಆಗವುದಿಲ್ಲ. ಆದರೆ, ಆಟಗಾರರ ಆಯ್ಕೆ ಮಾಡುವಾಗಲೂ ತಂಡದ ಒಳಿತನ್ನು ಗಮನದಲ್ಲಿ ಇಡಬೇಕು' ಎಂದು ವೆಂಕಿ ಇನ್ನೊಂದು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ತಮ್ಮ ಸಂದೇಶಕ್ಕೆ ಕಮೆಂಟ್ ಮಾಡಿದ ಅಭಿಮಾನಿಯೊಬ್ಬರಿಗೆ ಪ್ರತಿಕ್ರಿಯಿಸಿರುವ ವೆಂಕಿ, 'ನಾಯಕ ಪಾಂಡ್ಯ ಮತ್ತು ಕೋಚ್ ರಾಹುಲ್ ದ್ರಾವಿಡ್ ಅವರೇ ಸೋಲಿನ ಹೊಣೆ ಹೊರಬೇಕು. ಗೊತ್ತು ಗುರಿಯಿಲ್ಲದ ಆಯ್ಕೆಗಳು ನಡೆಯುತ್ತಲೇ ಇವೆ' ಎಂದಿದ್ದಾರೆ.

ಕುಸ್ತಿಪಟು ಸೀಮಾಗೆ ಒಂದು ವರ್ಷ ನಿಷೇಧ

ನವದೆಹಲಿ (ಪಿಟಿಐ): 'ಚಲನವಲನ ಮಾಹಿತಿ' ನೀಡುವಲ್ಲಿ ವಿಫಲವಾದುದ್ದಕ್ಕೆ ಭಾರತದ ಕುಸ್ತಿಪಟು ಸೀಮಾ ಬಿಸ್ಲಾ ಅವರಿಗೆ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕವು (ನಾಡಾ) ಒಂದು ವರ್ಷದ ನಿಷೇಧ ಶಿಕ್ಷೆ ವಿಧಿಸಿದೆ.

30 ವರ್ಷದ ಸೀಮಾ ಅವರ ಮೇಲಿನ ನಿಷೇಧ ಶಿಕ್ಷೆ ಈ ವರ್ಷದ ಮೇ 12 ರಂದು ಜಾರಿಯಾಗಿದೆ ಎಂದು ನಾಡಾದ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಸೀಮಾ ಅವರು 2021ರ ಏಷ್ಯನ್ ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಕೆ.ಜಿ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕಂಚು ಗೆದ್ದಿದ್ದರು. ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಸ್ಪರ್ಧಿಸಿದ್ದ ಅವರು 16ರ ಸುತ್ತಿನಲ್ಲಿ ಬೌಟ್‌ನಲ್ಲಿ ಸೋತಿದ್ದರು.

ವಿಶ್ವ ಕುಸ್ತಿ: ಯಾರಿಗೂ ನೇರ ಪ್ರವೇಶ ಇಲ್ಲ

ಆ.25, 26 ರಂದು ಟ್ರಯಲ್ಸ್

ನವದೆಹಲಿ (ಪಿಟಿಐ): ಮುಂಬರುವ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತ ತಂಡದ ಆಯ್ಕೆಗೆ ಆ.25 ಮತ್ತು 26 ರಂದು ಪಟಿಯಾಲದಲ್ಲಿ ಟ್ರಯಲ್ಸ್ ನಡೆಯಲಿದೆ.

ಬೆಲ್‌ಗ್ರೇಡ್‌ನಲ್ಲಿ ಸೆ.16 ರಿಂದ 24ರ ವರೆಗೆ ಆಯೋಜನೆಯಾಗಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಯಾರಿಗೂ ನೇರ ಪ್ರವೇಶ ನೀಡುವುದಿಲ್ಲ ಎಂದು ಟ್ರಯಲ್ಸ್ ನಡೆಸಲಿರುವ ಭಾರತ ಒಲಿಂಪಿಕ್ ಸಮಿತಿಯ ಅಡ್‌ಹಾಕ್ ಸಮಿತಿ ಸ್ಪಷ್ಟಪಡಿಸಿದೆ.

ಪ್ರಮುಖ ಕುಸ್ತಿಪಟುಗಳಾದ ವಿನೇಶಾ ಫೋಗಟ್ ಮತ್ತು ಬಜರಂಗ್ ಪೂನಿಯಾ ಅವರಿಗೆ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಿಂದ ವಿನಾಯಿತಿ ನೀಡಲಾಗಿತ್ತು. ಅಡ್‌ಹಾಕ್ ಸಮಿತಿಯ ಈ ನಿರ್ಧಾರ ವಿವಾದಕ್ಕೆ ಕಾರಣವಾಗಿತ್ತು.

'2022 ಮತ್ತು 2023 ರಲ್ಲಿ ನಡೆದಿದ್ದ ಅಂತರರಾಷ್ಟ್ರೀಯ/ ರ್‍ಯಾಂಕಿಂಗ್/ ಏಷ್ಯನ್/ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡವರು ಮತ್ತು ಪದಕ ಗೆದ್ದವರು ಹಾಗೂ 2022ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದವರು ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಬಹುದು' ಎಂದು ಅಡ್‌ಹಾಕ್ ಸಮಿತಿ ಹೇಳಿದೆ.

ಬಜರಂಗ್ ಮತ್ತು ವಿನೇಶಾ ಅವರು ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಬೇಕೇ ಎಂಬ ಬಗ್ಗೆ ಇದುವರೆಗೂ ತೀರ್ಮಾನ ತೆಗೆದುಕೊಂಡಿಲ್ಲ. ಹಾಂಗ್‌ಝೌ ಏಷ್ಯನ್ ಗೇಮ್ಸ್ (ಸೆ.23 ರಂದು ಆರಂಭ) ಮುಂದಿರುವುದು ಇದಕ್ಕೆ ಕಾರಣ.

ಬೆಲ್‌ಗ್ರೇಡ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್, 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಕುಸ್ತಿಪಟುಗಳಿಗೆ ಮೊದಲ ಅವಕಾಶ ಎನಿಸಿಕೊಂಡಿದೆ.

'ಒಲಿಂಪಿಕ್ಸ್‌ಗೆ ಅರ್ಹತಾ ಕೂಟವಾಗಿರುವುದರಿಂದ ಟ್ರಯಲ್ಸ್ ಅನ್ನು ಇನ್ನಷ್ಟು ಮುಂದೂಡಲು ನಮಗೆ ಸಾಧ್ಯವಿಲ್ಲ. ಟ್ರಯಲ್ಸ್ ವಿಳಂಬವಾದರೆ ನಮ್ಮ ಕುಸ್ತಿಪಟುಗಳು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಅವಕಾಶವನ್ನೇ ಕಳೆದುಕೊಳ್ಳಬಹುದು' ಎಂದು ಅಡ್‌ಹಾಕ್ ಸಮಿತಿ ಮುಖ್ಯಸ್ಥ ಭೂಪೇಂದರ್ ಸಿಂಗ್ ಬಾಜ್ವಾ ಹೇಳಿದ್ದಾರೆ.



ವಿನೇಶಾ ಫೋಗಟ್ ಮತ್ತು ಬಜರಂಗ್

ಫ್ರೀಡಂ ಕಪ್: ಸ್ಕಲ್ವಿ ಅಸ್ತ್ರ ಸ್ಪೋರ್ಟ್ಸ್ ಕ್ಲಬ್‌ಗೆ ಪ್ರಶಸ್ತಿ

ಬೆಂಗಳೂರು: ಆತಿಥೇಯ ತಂಡವು ಬೆಂಗಳೂರಿನ ಸ್ಕಲ್ವಿ ಅಸ್ತ್ರ ಸ್ಪೋರ್ಟ್ಸ್ ಕ್ಲಬ್ ಈಚೆಗೆ ಆಯೋಜಿಸಿದ್ದ ಬಾಲ್ ಬ್ಯಾಡ್ಮಿಂಟನ್ ಫ್ರೀಡಂ ಕಪ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಫೈನಲ್ ಪಂದ್ಯದಲ್ಲಿ ಸ್ಕಲ್ವಿ ಅಸ್ತ್ರ ತಂಡವು 35–30, 35–32ಯಿಂದ ಆಳ್ವಾಸ್ ಮೂಡುಬಿದಿರೆ ತಂಡವನ್ನು ಮಣಿಸಿತು. ಆಳ್ವಾಸ್ ತಂಡ ರನ್ನರ್ ಅಪ್ ಪ್ರಶಸ್ತಿ ಪಡೆಯಿತು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಬೆಂಗಳೂರು ಸಹ್ಯಾದ್ರಿ ಸ್ಪೋರ್ಟ್ಸ್ ಕ್ಲಬ್ ತಂಡವು 35–29, 35–31ರಿಂದ ಆರ್.ಆರ್. ನಗರ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಸೋಲಿಸಿತು.

ಟೂರ್ನಿಯಲ್ಲಿ ರಾಜ್ಯದ ವಿವಿಧೆಡೆಯಿಂದ 16 ತಂಡಗಳು ಭಾಗವಹಿಸಿದ್ದವು. ಲೀಗ್, ನಾಕೌಟ್ ಮಾದರಿಯಲ್ಲಿ ಪಂದ್ಯಗಳನ್ನು ಆಯೋಜಿಸಲಾಗಿತ್ತು.



ಪ್ರಶಸ್ತಿ ಸ್ವೀಕರಿಸುತ್ತಿರುವ ಬೆಂಗಳೂರಿನ ಸ್ಕಲ್ವಿ ಅಸ್ತ್ರ ಸ್ಪೋರ್ಟ್ಸ್ ಕ್ಲಬ್ ತಂಡದ ಆಟಗಾರರು

ಹವಾಮಾನ ಬದಲಾವಣೆ: ರಾಷ್ಟ್ರಪತಿ ಮುರ್ಮು ಕಳವಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ವಾತಂತ್ರ್ಯೋತ್ಸವದ ಮುನ್ನಾ ದಿನ ದೇಶವನ್ನುದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು, ಜಾಗತಿಕ ಹವಾಮಾನ ಬದಲಾವಣೆ ಮತ್ತು ಹವಾಮಾನ ವೈಪರೀತ್ಯದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ವಿಜ್ಞಾನ ಅಥವಾ ಜ್ಞಾನವು ಜನರ ಒಳಿತಿಗಾಗಿ ಇರುವ ಒಂದು ಸಾಧನ ಎಂದೂ ಅಭಿಪ್ರಾಯ ಪಟ್ಟಿದ್ದಾರೆ.

'ಹವಾಮಾನ ಬದಲಾವಣೆಯಿಂದಾಗಿ ನಾವು ನಮ್ಮ ಮೂಲಕ್ಕೆ ತೆರಳಬೇಕಾದ ಅಗತ್ಯವನ್ನು ಈಗ ಅರಿತುಕೊಂಡಿದ್ದೇವೆ. ಅನೇಕ ಬುಡಕಟ್ಟು ಸಮುದಾಯಗಳು ನಿಸರ್ಗಕ್ಕೆ ಹತ್ತಿರವಾಗಿ ಮತ್ತು ಅದರೊಂದಿಗೆ ಸಾಮರಸ್ಯದಿಂದ ಬದುಕುತ್ತಿವೆ. ಅವರ ಮೌಲ್ಯಗಳು, ಜೀವನಶೈಲಿಯು ಹವಾಮಾನ ಪ್ರಕ್ರಿಯೆಗೆ ಅಮೂಲ್ಯವಾದ ಕೊಡುಗೆ ನೀಡಿವೆ. ಪ್ರತಿ ಹಂತದಲ್ಲೂ ಪರಿಸರ ಸಂರಕ್ಷಿಸುವ ಪ್ರಯತ್ನ ಮಾಡುವ ಅಗತ್ಯವಿದೆ' ಎಂದು ತಮ್ಮ ಸಂದೇಶದಲ್ಲಿ ವಿವರಿಸಿದ್ದಾರೆ.

ಜಿ–20 ರಾಷ್ಟ್ರಗಳ ಗುಂಪಿನ ಅಧ್ಯಕ್ಷತೆಯನ್ನು ಭಾರತ ವಹಿಸಿರುವ ಬಗ್ಗೆ ಪ್ರಸ್ತಾಪಿಸಿದ ಮುರ್ಮು, ಭಾರತವು ವಿಶ್ವದಾದ್ಯಂತ ಅಭಿವೃದ್ಧಿ ಮತ್ತು ಮಾನವೀಯ ಮೌಲ್ಯಗಳನ್ನು ಉತ್ತೇಜಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

'ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಯತ್ನಗಳು ಹಣದುಬ್ಬರದಿಂದ ಜನರನ್ನು ರಕ್ಷಿಸಿವೆ. ಬಡವರಿಗೆ ಭದ್ರತೆ ಒದಗಿಸಿವೆ' ಎಂದು ಅವರು ಕೊಂಡಾಡಿದರು.

ಭಾರತವನ್ನು ಪ್ರಜಾಪ್ರಭುತ್ವದ ತಾಯಿ ಎಂದು ವ್ಯಾಖ್ಯಾನಿಸಿರುವ ಅವರು, 'ರಾಷ್ಟ್ರ ನಿರ್ಮಾತೃಗಳ ಕನಸುಗಳನ್ನು ನನಸಾಗಿಸಲು ನಾವು ಸೌಹಾರ್ದತೆ ಮತ್ತು ಸಹೋದರತ್ವದ ಮನೋಭಾವದಿಂದ ಮುನ್ನಡಬೇಕು' ಎಂದು ಸಲಹೆ ನೀಡಿದರು.

ಮಾತಂಗಿನಿ ಹಜ್ರಾ, ಕನಕಲತಾ ಬರುವಾ, ಕಸ್ತೂರಬಾ ಗಾಂಧಿ, ಸರೋಜಿನಿ ನಾಯ್ಡು, ಅಮ್ಮು ಸ್ವಾಮಿನಾಥನ್, ರಮಾ ದೇವಿ, ಅರುಣಾ ಅಸಫ್-ಅಲಿ ಮತ್ತು ಸುಚೇತಾ ಕೃಪಲಾನಿ ಅವರಂತಹ ಮಹಿಳೆಯರು ನೀಡಿದ ಕೊಡುಗೆಯನ್ನು ಸ್ಮರಿಸಿ, ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರವನ್ನು ಶ್ಲಾಘಿಸಿದರು.



77ನೇ ಸ್ವಾತಂತ್ರ್ಯೋತ್ಸವ ನಿಮಿತ್ತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದರು

ಪಾಕ್ ಹಂಗಾಮಿ ಪ್ರಧಾನಿ ಕಾಕರ್ ಅಧಿಕಾರ ಸ್ವೀಕಾರ

ಇಸ್ಲಾಮಾಬಾದ್ (ಪಿಟಿಐ): ಬಲೂಚಿಸ್ತಾನದ ಪುಶ್ತುನ್ ಜನಾಂಗದ ನಾಯಕ ಅನ್ವರುಲ್ ಹಖ್ ಕಾಕರ್ ಅವರು ಪಾಕಿಸ್ತಾನದ ಹಂಗಾಮಿ ಪ್ರಧಾನಿಯಾಗಿ ಸೋಮವಾರ ಪ್ರಮಾಣ ವಚನ ಸ್ವೀಕರಿಸಿ ದರು.

ಕಾಕರ್ ಅವರು ಸೇನೆಗೆ ಅತ್ಯಂತ ನಿಕಟರಾಗಿದ್ದಾರೆ. ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ನಡೆದು, ಹೊಸ ಸರ್ಕಾರ ಅಸ್ತಿತ್ವಕ್ಕೆ ಬರುವವರೆಗೆ ಇವರು ಹಂಗಾಮಿ ಪ್ರಧಾನಿಯಾಗಿ ಆಡಳಿತ ನಡೆಸಲಿದ್ದಾರೆ. ಚುನಾವಣೆ ಮೇಲ್ವಿಚಾರಣೆಯನ್ನೂ ವಹಿಸಲಿದ್ದಾರೆ.

ಅಧ್ಯಕ್ಷರ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಧ್ಯಕ್ಷ ಆರಿಫ್ ಅಲ್ವಿ ಅವರು ಕಾಕರ್ ಅವರಿಗೆ ಪ್ರಮಾಣ ವಚನ ಬೋಧಿಸಿದರು.

ಒಗ್ಗಟ್ಟಿಗೆ ಕರೆ: ದೇಶದ ರಾಜಕಾರಣಿಗಳು ಭಿನ್ನಾಭಿಪ್ರಾಯ ಮತ್ತು ಹಗೆತನವನ್ನು ಬದಿಗಿಡಬೇಕು ಎಂದು ಪಾಕಿಸ್ತಾನದ ಅಧ್ಯಕ್ಷ ಆರಿಫ್ ಅಲ್ವಿ ಅವರು ಸೋಮವಾರ ಮನವಿ ಮಾಡಿದರು.

ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ತೀವ್ರ ವಾಗ್ದಾಳಿ

ಹೆದ್ದಾರಿ ಅಕ್ರಮ: ಸಿಎಜಿ ವರದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಸ್ತೆ ಅಭಿವೃದ್ಧಿ ಯೋಜನೆಗಳಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವ ಬಗ್ಗೆ ಮಹಾಲೇಖಪಾಲರು (ಸಿಎಜಿ) ನೀಡಿರುವ ವರದಿಯನ್ನು ಕೇಂದ್ರ ಸರ್ಕಾರದ ವಿರುದ್ಧ ಅಸ್ತ್ರವನ್ನಾಗಿ ಕಾಂಗ್ರೆಸ್ ಪಕ್ಷ ಬಳಸಿಕೊಂಡಿದೆ.

'ಬಿಜೆಪಿಯವರು ದೇಶದ ಹೆದ್ದಾರಿಗಳನ್ನು ನರಕವಾಗಿಸಿದ್ದಾರೆ. ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರ ವಿರುದ್ಧ ಪ್ರಧಾನಿ ಮೋದಿ ಕ್ರಮಕೈಗೊಳ್ಳುವರೇ' ಎಂದು ಕಾಂಗ್ರೆಸ್ ಪ್ರಶ್ನೆ ಮಾಡಿದೆ.

'ಭಾರತಮಾಲಾ ಯೋಜನೆ' ಗಳು, ಟೋಲ್ ಸಂಗ್ರಹ ಮತ್ತು 'ಆಯು ಷ್ಮಾನ್ ಭಾರತ್' ಯೋಜನೆ ಗಳಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನೆಯ ಸಿಎಜಿ ವರದಿಯನ್ನು ಸಂಸತ್ತಿನಲ್ಲಿ ಇತ್ತೀಚೆಗೆ ಮಂಡಿಸಲಾಗಿದ್ದು, ಹಲವು ಅಕ್ರಮಗಳು ಬಯಲಾಗಿವೆ.

ಬಿಜೆಪಿಯ ಭ್ರಷ್ಟಾಚಾರ, ಲೂಟಿಯಿಂದಾಗಿ ಭಾರತದ ಹೆದ್ದಾರಿಗಳು ನರಕವಾಗಿವೆ. ಅಸಂಖ್ಯ ನ್ಯೂನತೆಗಳು, ಟೆಂಡರ್ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಅಕ್ರಮ, ಅನುದಾನದ ಅಸಮರ್ಪಕ ನಿರ್ವಹಣೆಯಂಥ ದೊಡ್ಡ ಅಕ್ರಮಗಳತ್ತ ಮಹಾಲೇಖಪಾಲರ ವರದಿ ಬೊಟ್ಟು ಮಾಡಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ. ದ್ವಾರಕಾ ಎಕ್ಸ್‌ಪ್ರೆಸ್‌ವೇನ ಅಭಿವೃದ್ಧಿ ವೆಚ್ಚದಲ್ಲಿ ಶೇ 1,278ರಷ್ಟು ಹೆಚ್ಚಳವಾಗಿದೆ. ಆರಂಭದಲ್ಲಿ ₹528.8 ಕೋಟಿ ಇದ್ದ ಯೋಜನೆಯ ವೆಚ್ಚ ಅಂತಿಮವಾಗಿ ₹7,287.2 ಕೋಟಿಗೆ ಏರಿದೆ ಎಂಬ ಸಿಎಜಿ ಅಂಕಿ ಅಂಶಗಳನ್ನು ಉಲ್ಲೇಖಿಸಿ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

'ಆರಂಭದಲ್ಲಿ ಒಂದು ಕಿ.ಮೀಗೆ ₹18 ಕೋಟಿ ನಿಗದಿಯಾಗಿದ್ದ ದ್ವಾರಕಾ ಎಕ್ಸ್‌ಪ್ರೆಸ್‌ವೇನ ನಿರ್ಮಾಣ ವೆಚ್ಚ, ₹250 ಕೋಟಿಗೆ ಏರಿ 14 ಪಟ್ಟು ಹೆಚ್ಚಾಗಿದೆ. ಜೊತೆಗೆ ₹3,598.52 ಕೋಟಿಯನ್ನು ಅಕ್ರಮವಾಗಿ ಬೇರೆಡೆಗೆ ತಿರುಗಿಸಲಾಗಿದೆ. 'ಭಾರತಮಾಲಾ ಯೋಜನೆ'ಯಲ್ಲಿನ ಈ ಅಕ್ರಮದ ಹೊಣೆ ಪ್ರಧಾನಿ ಹೊರುವರೇ? ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನೆ ಮಾಡಿದ್ದಾರೆ.

ಹಿಂದೂ ದೇವಾಲಯ ಧ್ವಂಸ

ಟೊರಾಂಟೊ (ಪಿಟಿಐ): ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತ್ಯದ ಹಿಂದೂ ದೇವಾಲಯವನ್ನು ಖಾಲಿಸ್ತಾನ್ ಬೆಂಬಲಿಗರು ಧ್ವಂಸ ಮಾಡಿದ್ದಾರೆ.

ಸರ್ರೆಯಲ್ಲಿರುವ ಲಕ್ಷ್ಮಿ ನಾರಾಯಣ ಮಂದಿರದಲ್ಲಿ ಈ ಘಟನೆ ನಡೆದಿದೆ. ದೇವಾಲಯದ ಫೇಸ್‌ಬುಕ್ ಪುಟದ ಪ್ರಕಾರ, ಆಗಸ್ಟ್ 12 ರಂದು ತಡರಾತ್ರಿ 12.29ಕ್ಕೆ ದೇಗುಲದ ಗೋಡೆ ಹಾರಿ ಬಂದ ಒಬ್ಬ ಪುರುಷ ಮತ್ತು ಮಹಿಳೆ ಉದ್ದೇಶಪೂರ್ವಕವಾಗಿ #Khalistanreferendum ಪೋಸ್ಟರ್‌ಗಳನ್ನು ಸರ್ರೆ ಮಂದಿರದ ಮುಖ್ಯ ಪ್ರವೇಶ ದ್ವಾರ ಮತ್ತು ಮುಖ್ಯ ಪ್ರವೇಶ ದ್ವಾರದಲ್ಲಿ ಅಂಟಿಸಿದ್ದಾರೆ ಎಂದು ಪೋಸ್ಟ್‌ನಲ್ಲಿ ಬರೆಯಲಾಗಿದೆ.

ಹಿಂದೂ ದೇವಾಲಯಗಳ ಮೇಲೆ ನಡೆಸಿದ ದಾಳಿಯನ್ನು ಖಂಡಿಸಿ ರುವ ಭಾರತ, ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದೆ. ಹಿಂದೂಗಳಲ್ಲಿ ಭಯದ ವಾತಾವರಣ ಸೃಷ್ಟಿಸಲು ಈ ಕೃತ್ಯ ಎಸಗಲಾಗಿದೆ ಎಂದು ಹೇಳಿದೆ.

ನೌಕಾಪಡೆ: ಸಿಖ್ ಯುವಕ ತರಬೇತಿ

ವಾಷಿಂಗ್ಟನ್ (ಪಿಟಿಐ): ಮೊದಲ ಬಾರಿಗೆ 21 ವರ್ಷದ ಸಿಖ್ ಯುವಕ ತನ್ನ ಗಡ್ಡ, ಟರ್ಬನ್ ತೆಗೆಯದೆ ಅಮೆರಿಕದ ನೌಕಾಪಡೆ ನೇಮಕಾತಿ ತರಬೇತಿ ಪಡೆದಿದ್ದಾರೆ.

ಸ್ಯಾನ್ ಡಿಯಾಗೋದ ನೌಕಾಪಡೆ ನೇಮಕಾತಿ ಡಿಪೋದಲ್ಲಿ ತರಬೇತಿ ಪೂರ್ಣಗೊಳಿಸಿ ಜಸ್ಕಿರತ್ ಸಿಂಗ್ ಇತಿಹಾಸ ನಿರ್ಮಿಸಿದರು. ಫೆಡರಲ್ ನ್ಯಾಯಾಧೀಶರು ನೇಮಕಾತಿ ತರಬೇತಿ ನೀಡುವಂತೆ ಏಪ್ರಿಲ್‌ನಲ್ಲಿ ಆದೇಶಿಸಿದ್ದರು ಎಂದು 'ವಾಷಿಂಗ್ಟನ್ ಟೈಮ್ಸ್' ಹೇಳಿದೆ.



ಸ್ವೀಡನ್ ತಂಡದ ಆಟಗಾರ್ತಿಯರು ಸೋಮವಾರ ಅಭ್ಯಾಸ ನಡೆಸಿದರು —ಎಎಫ್‌ಪಿ ಚಿತ್ರ

ಅಲ್ ಹಿಲಾಲ್ ಕ್ಲಬ್ ಸೇರಲಿರುವ ನೇಮರ್



ಪ್ಯಾರಿಸ್ (ರಾಯಿಟರ್ಸ್): ಬ್ರೆಜಿಲ್ ಫುಟ್‌ಬಾಲ್ ತಂಡದ ಆಟಗಾರ ನೇಮರ್, ಸೌದಿ ಅರೇಬಿಯಾದ ಅಲ್ ಹಿಲಾಲ್ ಕ್ಲಬ್ ಸೇರಲಿದ್ದಾರೆ.

ನೇಮರ್ ಅವರನ್ನು ಎರಡು ವರ್ಷಗಳ ಅವಧಿಗೆ ಬಿಟ್ಟುಕೊಡುವ ಸಂಬಂಧ ಅವರು ಈಗ ಆಡುತ್ತಿರುವ ಪ್ಯಾರಿಸ್ ಸೇಂಟ್ ಜರ್ಮೈನ್ (ಪಿಎಸ್‌ಜಿ) ಮತ್ತು ಅಲ್ ಹಿಲಾಲ್ ಕ್ಲಬ್ ನಡುವೆ ಒಪ್ಪಂದ ನಡೆದಿದೆ ಎಂದು ಸೌದಿ ಅರೇಬಿಯಾದ ಮಾಧ್ಯಮವೊಂದು ವರದಿ ಮಾಡಿದೆ.

31 ವರ್ಷದ ನೇಮರ್ ಅವರು ಎರಡು ವರ್ಷಗಳ ಅವಧಿಗೆ ₹ 1,455 ಕೋಟಿ ಸಂಭಾವನೆ ಪಡೆಯಲಿದ್ದಾರೆ ಎಂದು ಫ್ರಾನ್ಸ್‌ನ ‘ಲೆಕ್ವಿಪ್’ ದಿನಪತ್ರಿಕೆ ವರದಿ ಮಾಡಿದೆ. ಇದಲ್ಲದೆ ಅಲ್ ಹಿಲಾಲ್ ಕ್ಲಬ್ ‘ವರ್ಗಾವಣೆ ಶುಲ್ಕ’ದ ರೂಪದಲ್ಲಿ ಪಿಎಸ್‌ಜಿಗೆ ₹ 815 ಕೋಟಿ ನೀಡಲಿದೆ. ಆದರೆ ಈ ಒಪ್ಪಂದದ ಬಗ್ಗೆ ಪಿಎಸ್‌ಜಿ ಅಧಿಕೃತ ಹೇಳಿಕೆ ನೀಡಿಲ್ಲ.

ವಿಶ್ವಕಪ್ ಫುಟ್‌ಬಾಲ್: ಸ್ವೀಡನ್‌ಗೆ ಸ್ಪೇನ್ ಸವಾಲು

ಆಕ್ಲೆಂಡ್ (ಎಎಫ್‌ಪಿ): ಮಹಿಳೆಯರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮಂಗಳವಾರ, ಸ್ಪೇನ್ ಮತ್ತು ಸ್ವೀಡನ್ ತಂಡಗಳು ಹಣಾಹಣಿ ನಡೆಸಲಿವೆ.

ಇದೇ ಮೊದಲ ಬಾರಿ ನಾಲ್ಕರ ಘಟ್ಟದಲ್ಲಿ ಆಡುತ್ತಿರುವ ಸ್ಪೇನ್, ಬಲಿಷ್ಠ ಎದುರಾಳಿಗೆ ಪ್ರಬಲ ಪೈಪೋಟಿ ನೀಡಲು ಸಜ್ಜಾಗಿದೆ. ಸ್ವೀಡನ್ ತಂಡ ವಿಶ್ವಕಪ್ ಟ್ರೋಫಿ ಜಯಿಸದಿದ್ದರೂ, ಸೆಮಿಫೈನಲ್‌ನಲ್ಲಿ ಆಡಿದ ಅನುಭವ ಹೊಂದಿದೆ. ಆದರೆ, ಸ್ಪೇನ್ ತಂಡಕ್ಕೆ ಇದು ಚೊಚ್ಚಲ ಸೆಮಿ ಪಂದ್ಯ ಎನಿಸಿದೆ.

ಸ್ವೀಡನ್ ತಂಡ 2019ರ ವಿಶ್ವಕಪ್ ಮತ್ತು ಕಳೆದ ವರ್ಷ ನಡೆದಿದ್ದ ಯುರೋಪಿಯನ್ ಚಾಂಪಿಯನ್ ಷಿಪ್‌ನ ಸೆಮಿಫೈನಲ್‌ನಲ್ಲಿ ಆಡಿತ್ತು. ಟೋಕಿಯೊ ಒಲಿಂಪಿಕ್ಸ್‌ನ ಫೈನಲ್‌ನಲ್ಲಿ ಕೆನಡಾ ಎದುರು ಸೋತು ಬೆಳ್ಳಿ ಜಯಿಸಿತ್ತು.

ಕಳೆದ ನಾಲ್ಕು ವಿಶ್ವಕಪ್ ಟೂರ್ನಿಗಳಲ್ಲಿ ಮೂರನೇ ಬಾರಿ ಸೆಮಿ ಆಡುತ್ತಿರುವ ಸ್ವೀಡನ್, ಈ ಬಾರಿ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದೆ. ಲೀಗ್ ಹಂತದ ಎಲ್ಲ ಮೂರು ಪಂದ್ಯಗಳನ್ನು ಜಯಿಸಿದ್ದ ಅಸ್ಲಾನಿ ಬಳಗ, ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಕಳೆದ ಬಾರಿಯ ಚಾಂಪಿಯನ್ ಅಮೆರಿಕ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಹೊರದಬ್ಬಿತ್ತು. ಕ್ವಾರ್ಟರ್‌ನಲ್ಲಿ 2–1ರಿಂದ ಜಪಾನ್ ವಿರುದ್ಧ ಗೆದ್ದಿತ್ತು.

ಇಂದಿನ ಪಂದ್ಯ
ಸ್ಪೇನ್–ಸ್ವೀಡನ್ (ಮಧ್ಯಾಹ್ನ 1.30)
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಜೂನಿಯರ್ ಈಜು: 78 ಮಂದಿಯ ರಾಜ್ಯ ತಂಡ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಡಿಶಾದ ಭುವನೇಶ್ವರದಲ್ಲಿ ಬುಧವಾರ ಆರಂಭವಾಗಲಿರುವ 39ನೇ ಸಬ್ ಜೂನಿಯರ್ ಮತ್ತು 49ನೇ ಜೂನಿಯರ್ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕದಿಂದ 78 ಈಜುಪಟುಗಳ ತಂಡವನ್ನು ಪ್ರಕಟಿಸಲಾಗಿದೆ.

40 ಬಾಲಕರು, 38 ಬಾಲಕಿಯರು ಮತ್ತು 9 ನೆರವು ಸಿಬ್ಬಂದಿ ಸೋಮವಾರ ಒಡಿಶಾದತ್ತ ಪ್ರಯಾಣ ಬೆಳೆಸಿದ್ದಾರೆ.

ಚಾಂಪಿಯನ್‌ಷಿಪ್ ಆ.20ರವರೆಗೆ ನಡೆಯಲಿದೆ.